

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


47

ಜೂನ್ 17 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 62 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4





ಕೆಮ್ಮಿನ ಸಿರಪ್ ಖರೀದಿಗೆ ವೈದ್ಯರ ಚೀಟಿ ಕಡ್ಡಾಯ!

ಕೇಂದ್ರ ಆರೋಗ್ಯ ಸಚಿವಾಲಯ ಮಹತ್ವದ ಆದೇಶ



ನವದೆಹಲಿ, ಜೂ.16– ಔಷಧದ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆಯ ಕಾಳಜಿಯ ಮಧ್ಯೆ, ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆಯೇ ಕೆಮ್ಮು ಸಿರಪ್‌ಗಳು ಸೇರಿದಂತೆ ಯಾವುದೇ ಸಿರಪ್‌ಗಳ ಮಾರಾಟವನ್ನು ನಿಷೇಧಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿಯಮಗಳನ್ನು ತಿದ್ದುಪಡಿ ಮಾಡಿದೆ.

ಸರ್ಕಾರ ಕೆಮ್ಮು ಸಿರಪ್‌ಗಳಂತಹ ಸಿರಪ್ ಆಧಾರಿತ ಔಷಧಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಬಿಗಿಗೊಳಿಸುವ ಸಲುವಾಗಿ ಈ ಕ್ರಮ ಕೈಗೊಂಡಿದೆ.

ಸರ್ಕಾರವು ಅಧಿಕೃತವಾಗಿ ಔಷಧಗಳ (ಐದನೇ ತಿದ್ದುಪಡಿ) ನಿಯಮಗಳು, 2026ರ ಮೂಲಕ ಅಧಿಕೃತ ಗೆಜೆಟ್‌ನಲ್ಲಿ ಈ ತಿದ್ದುಪಡಿಯನ್ನು ಘೋಷಿಸಿದೆ. ಈ ಹೊಸ ನಿಯಮ ಗೆಜೆಟ್‌ನಲ್ಲಿ ಪ್ರಕಟವಾದ ದಿನದಂದು ತಕ್ಷಣದಿಂದಲೇ ಜಾರಿಗೆ ಬಂದಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 1945ರ ಔಷಧ ನಿಯಮಗಳ ವೇಳಾಪಟ್ಟಿ ಎ ಯಲ್ಲಿನ ಔಷಧಗಳ ವರ್ಗ ವಿಭಾಗದ ಅಡಿಯಲ್ಲಿ ಐಟಂ 7 ರಿಂದ 'ಸಿರಪ್‌ಗಳು' ಎಂಬ ಪದವನ್ನು ತೆಗೆದುಹಾಕಿದೆ. ಹೀಗಾಗಿ, ಸಿರಪ್ ಆಧಾರಿತ ಔಷಧಿಗಳು (ಕೆಮ್ಮಿನ ಸಿರಪ್‌ಗಳಂತಹವು) ಇನ್ನು ಮುಂದೆ ಆ ನಿಯಮದ ಅಡಿಯಲ್ಲಿ ■6ನೇ ಪುಟಕ್ಕೆ

ನಾಳೆ ಪರಿಷತ್ ಫೈಟ್; ಐದನೇ ಅಭ್ಯರ್ಥಿ ಗೆಲುವಿಗೆ ತಂತ್ರ

ಕಾಂಗ್ರೆಸ್ ರೆಸಾರ್ಟ್ ರಾಜಕಾರಣ

- ಕಾಂಗ್ರೆಸ್–ಜೆಡಿಎಸ್‌ಗೆ ತಲೆ ಬಿಸಿ; ಬಿಜೆಪಿ ನಿರಾಳ
- ಇರುವುದು 7 ಸ್ಥಾನ; ಕಣದಲ್ಲಿದ್ದಾರೆ 8 ಮಂದಿ



ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನುದ್ದೇಶಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡುತ್ತಿರುವುದು.

ಬೆಂಗಳೂರು, ಜೂ.16(ಕೆಎಂಶಿ)– ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ 5ನೇ ಅಭ್ಯರ್ಥಿ ಗೆಲ್ಲಿಸಿಕೊಳ್ಳಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಇಡೀ ಸರ್ಕಾರವೇ ರೆಸಾರ್ಟ್‌ಗೆ ಶಿಫ್ಟಾಗಿದೆ.

ವಿಧಾನ ಪರಿಷತ್‌ನ ಚುನಾವಣೆ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್‌ಗೆ ಸವಾಲಾಗಿದ್ದು ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಮೂರೂ ಪಕ್ಷಗಳು ರಣತಂತ್ರ ರೂಪಿಸಿವೆ.

ಸದನದ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ಉಳಿದ ಒಂದು ಸ್ಥಾನಕ್ಕಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

ಸಂಖ್ಯಾಬಲದ ಕೊರತೆಯಿದ್ದರೂ ಕಾಂಗ್ರೆಸ್ ಹಾಗೂ ಜೆಡಿಎಸ್ ಹೆಚ್ಚುವರಿ ಸ್ಥಾನಕ್ಕಾಗಿ ರಾಜಕೀಯ ರಣತಂತ್ರ ರೂಪಿಸಿವೆ. ಪಕ್ಷದಲ್ಲಿನ ಅಸಮಾಧಾನಿತರಿಂದ ಅಡ್ಡ ಮತದಾನ ಆಗದಂತೆ ಮುನ್ನೆಚ್ಚರಿಕೆಯಾಗಿ ಪಕ್ಷದ ಸಚಿವರು ಮತ್ತು ■6ನೇ ಪುಟಕ್ಕೆ

ಹತಾಶೆಯಿಂದ ಸಿದ್ದು ಬಣ ತೊರೆದ ಅಹಿಂದ ನಾಯಕರು! ಸರ್ಕಾರದಲ್ಲಿ ಈಗ ಮೂಲ ಕಾಂಗ್ರೆಸ್ಸಿಗರ ಕಾರು–ಬಾರು!!

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಕೈಜೋಡಿಸಿದ್ದ ಅಹಿಂದ ನಾಯಕರಲ್ಲಿ ಈಗ ಹತಾಶೆ ಮೂಡಿರುವಂತಿದೆ. ಈಗಂತೂ ಮೂಲ ಕಾಂಗ್ರೆಸ್ ನಾಯಕರು ತಮ್ಮ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಪಕ್ಷ ಮತ್ತು ಸರ್ಕಾರದ ಮೇಲೆ ಅವರು ಹಿಡಿತ ಸಾಧಿಸುತ್ತಿದ್ದಾರೆ.

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಮೂಲ ಕಾಂಗ್ರೆಸ್ ನಾಯಕರೇ ಈಗ ಆಡಳಿತ ನಡೆಸುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಭಾನುವಾರ ಹೇಳಿದ್ದರು. ಅದರ ಅರ್ಥ, ಸಿಎಂಗೆ ಸಂಪೂರ್ಣ ಬೆಂಬಲ ನೀಡಿ ಒಟ್ಟಾಗಿ ಕೆಲಸ ಮಾಡುವುದು, ಪಕ್ಷವನ್ನು ಬಲಪಡಿಸಿ 2028 ರಲ್ಲಿ ಮತ್ತೆ ಅಧಿಕಾರಕ್ಕೆ ತರುವುದು ಎಂದು ಹೇಳಿದ್ದರು.

ನಾವು ಕಾಂಗ್ರೆಸ್‌ನಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ನಮ್ಮ ರಾಜಕೀಯ ಪ್ರಾರಂಭಿಸಿದ್ದೇವೆ ಮತ್ತು ಈಗ ಸಿಎಂ ಮತ್ತು ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇವೆ. ನಾವಿಬ್ಬರೂ ಮೂಲ ಕಾಂಗ್ರೆಸ್ ಕಾರ್ಯಕರ್ತರು ಎಂದು ಅವರು ತಮ್ಮ ಕೊರಟಗೆರೆ ಕ್ಷೇತ್ರದಲ್ಲಿ ನಡೆದ ರ‍್ಯಾಲಿಯಲ್ಲಿ ಹೇಳಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಬಿ.ಕೆ. ಹರಿಪ್ರಸಾದ್ ಕೂಡ ಅಪ್ಪಟ ಕಾಂಗ್ರೆಸ್ಸಿಗ. ■6ನೇ ಪುಟಕ್ಕೆ

ಸಮಾಜದ ನಿಂದನೆಗೆ ಅಂಜಿ ಹೆತ್ತ ಕರುಳ ಬಳ್ಳಿಯ ಬೀದಿಗೆ ಬಿಸಾಡಿದ ತಾಯಿ!

- ಕಣ್ಣುಬಿಡುವ ಮುನ್ನವೇ ಭೂಮಿಗೆ ವಿದಾಯ ಹೇಳಿದ ಕಂದಮ್ಮ
- ಮೂವರು ಮಕ್ಕಳಿರುವ ನಡುವಯಸ್ಸಿನ ಮಹಿಳೆಯಿಂದ ಈ ಕೃತ್ಯ
- ಆಟೋದಲ್ಲೇ ಹೆರಿಗೆಯಾದರೂ ಚಾಲಕನ ಪರಿವೆಗೆ ಬಂದಿಲ್ಲ
- ಮಹಿಳೆ ಪತ್ತೆ ಹಚ್ಚಿದ ಪೊಲೀಸರಿಂದ ನೋಟಿಸ್, ತನಿಖೆ ಆರಂಭ

ಮೈಸೂರು, ಜೂ.16(ಜಿಎ)– ನಡುವಯಸ್ಸಿನ ತಾಯಿ, ಸಮಾಜದ ನಿಂದನೆಗೆ ಗುರಿಯಾಗುವ ಭಯದಲ್ಲಿ ಆಟೋದಲ್ಲೇ ತಾನು ಜನ್ಮ ನೀಡಿ ಕರುಳ ಬಳ್ಳಿಯೊಂದಿಗೆ ಮಗುವನ್ನು ಬೀದಿಗೆ ಎಸೆದಿರುವ ಘಟನೆ ಮೈಸೂರಲ್ಲಿ ನಡೆದಿದೆ.




ಸುಮಾರು 40 ವರ್ಷದ ಮಹಿಳೆಯೊಬ್ಬರು ತಾನೇ ಹೆತ್ತ ಮಗುವನ್ನು ಆಟೋ ಚಾಲಕನ ಗಮನಕ್ಕೂ ಬಾರದಂತೆ ಬಿಸಾಡಿದ್ದು, ತಾಯಿಯ ದುಗುಡಕ್ಕೆ ಕಣ್ಣು ಬಿಡದ ಕಂದಮ್ಮ ಭೂಮಿಗೆ ವಿದಾಯ ಹೇಳಿದೆ. ಇತ್ತೀಚೆಗೆ ಮೈಸೂರಿನ ಬಡಾಮಕ್ಕಾನ್‌ನಲ್ಲಿ ಭ್ರೂಣವೊಂದು ಪತ್ತೆಯಾಗಿ, ಆತಂಕ ಸೃಷ್ಟಿಯಾಗಿತ್ತು. ಈ ಘಟನೆ ನಡೆದ ವಾರದೊಳಗೆ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಪುಲಕೇಶಿ ರಸ್ತೆಯಲ್ಲಿ ನವಜಾತ ಶಿಶುವೊಂದು ಪತ್ತೆಯಾದ ಪ್ರಕರಣದ ಬೆನ್ನತ್ತಿದ ಪೊಲೀಸರಿಂದ ಈ ಹೃದಯ ವಿದ್ರಾವಕ ಸಂಗತಿ ಬೆಳಕಿಗೆ ಬಂದಿದೆ.

ಘಟನೆ: ಜೂ.14ರಂದು ಮೈಸೂರು ಮಹಾನಗರ ಪಾಲಿಕೆಯ ಗುತ್ತಿಗೆ ನೌಕರರೊಬ್ಬರು ಎಂದಿನಂತೆ ಲಾರಿ ಕ್ಲೀನಿಂಗ್ ಕೆಲಸ ಮುಗಿಸಿ, ಮನೆಗೆ ಬಂದು ಮಧ್ಯಾಹ್ನ ಊಟ ಮಾಡಿ ತಮ್ಮ ಬೈಕ್‌ಗೆ ಪೆಟ್ರೋಲ್ ಹಾಕಿಸಲೆಂದು ಹೊರಬಂದಿದ್ದಾರೆ. ಫೌಂಟೇನ್ ವೃತ್ತದಲ್ಲಿರುವ ಪೆಟ್ರೋಲ್ ಬಂಕ್‌ಗೆ ತೆರಳಲು ಕೆಟಿ ರಸ್ತೆಯಿಂದ ಖಬರಸ್ಥಾನ ಜಂಕ್ಷನ್ ಮೂಲಕ ಗುಮ್ಮಿ ಸರ್ಕಲ್ ಕಡೆಗೆ ಪುಲಕೇಶಿ ರಸ್ತೆಯಲ್ಲಿ ಹೋಗುತ್ತಿದ್ದಾಗ, ಝಮ್ ಝಮ್ ಫಿಶ್ ಅಂಡ್ ಚಿಕನ್ ಸೆಂಟರ್ ಎದುರು ಜನ ಗುಂಪು ಸೇರಿದ್ದನ್ನು ಗಮನಿಸಿದ್ದಾರೆ. ಬೈಕ್ ನಿಲ್ಲಿಸಿ ಇವರೂ ಹತ್ತಿರ ಹೋಗಿ ನೋಡಿದಾಗ ರಸ್ತೆಯಲ್ಲಿ ನವಜಾತ ಹೆಣ್ಣು ಮಗುವಿನ ಶವ ಬಿದ್ದಿರುವುದು ಕಂಡಿದೆ. ಅಲ್ಲಿದ್ದ ಜನರನ್ನು ವಿಚಾರಿಸಿದಾಗ ■6ನೇ ಪುಟಕ್ಕೆ

ಬೆಂಗಳೂರು ನಗರಾಭಿವೃದ್ಧಿ ಖಾತೆ ವಹಿಸಿಕೊಂಡ ಕೃಷ್ಣ ಬೈರೇಗೌಡ

ಬೆಂಗಳೂರು, ಜೂ.16(ಕೆಎಂಶಿ)– ಕಾಂಗ್ರೆಸ್ ವರಿಷ್ಠರ ಎಚ್ಚರಿಕೆ ನಂತರ ಸಚಿವ ಕೃಷ್ಣಬೈರೇಗೌಡ ಇಂದು ಬೆಂಗಳೂರು ನಗರಾಭಿವೃದ್ಧಿ ಖಾತೆ ಹೊಣೆಗಾರಿಕೆ ವಹಿಸಿಕೊಂಡಿದ್ದಾರೆ.



ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ ಎರಡು ವಾರ ಕಳೆದರೂ ಖಾತೆ ಹಂಚಿಕೆ ಅಸಮಾಧಾನದಿಂದ ಜವಾಬ್ದಾರಿ ವಹಿಸಿಕೊಳ್ಳಲು ನಿರಾಕರಿಸಿದ್ದರು.

ತಮಗೆ ಬಿಡಿಎ ಮತ್ತು ಬಿಎಂಆರ್‌ಡಿಎ ಸೇರಿದಂತೆ ಬೆಂಗಳೂರು ನಗರಾಭಿವೃದ್ಧಿಯ ಎಲ್ಲಾ ಇಲಾಖೆಗಳನ್ನು ನೀಡಿದಲ್ಲಿ ಮಾತ್ರ ಖಾತೆ ನಿರ್ವಹಿಸುವುದಾಗಿ ತಿಳಿಸಿದ್ದರು. ಒಂದು ವೇಳೆ ಸಾಧ್ಯವಿಲ್ಲ ಎಂದಾದರೆ, ಸಚಿವ ಸ್ಥಾನದಿಂದ ಮುಕ್ತಗೊಳಿಸಿ ಪಕ್ಷ ಸೇವೆಗೆ ನಿಯೋಜಿಸಿ ಎಂಬುದಾಗಿ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದರು. ಮುಖ್ಯಮಂತ್ರಿ ಸೇರಿದಂತೆ ಪಕ್ಷದ ನಾಯಕರು ಎಷ್ಟೇ ಮನವೊಲಿಸಿದರೂ ತಮ್ಮ ನಿರ್ಧಾರದಿಂದ ಹಿಂದೆ ಸರಿದಿರಲಿಲ್ಲ. ಜೊತೆಗೆ ತಮ್ಮ ಅಸಮಾಧಾನವನ್ನು ಬಹಿರಂಗವಾಗಿ ಹೇಳದೆ, ಪಕ್ಷದ ಚೌಕಟ್ಟಿನಲ್ಲೇ ತೋರ್ಪಡಿಸಿಕೊಂಡಿದ್ದರು. ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯ ■6ನೇ ಪುಟಕ್ಕೆ



ನೋಂದಣಿ ಕಡ್ಡಾಯ ಕಾನೂನು ಎಲ್ಲಿದೆ

ಪ್ರಿಯಾಂಕ್ ಖರ್ಗೆಗೆ ವಿಎಚ್‌ಪಿ ತಿರುಗೇಟು!

ನವದೆಹಲಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘ ಕುರಿತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಪತ್ರಕ್ಕೆ ವಿಶ್ವ ಹಿಂದೂ ಪರಿಷತ್ ತೀವ್ರವಾಗಿ ಪ್ರತಿಕ್ರಿಯಿಸಿದ್ದು, ಎಲ್ಲಾ ಸಂಸ್ಥೆಗಳಿಗೆ ನೋಂದಣಿಯನ್ನು ಯಾವ ಕಾನೂನು ಕಡ್ಡಾಯಗೊಳಿಸುತ್ತದೆ ಎಂಬುದನ್ನು ಖರ್ಗೆ ಮೊದಲು ವಿವರಿಸಬೇಕು ಎಂದು ವಿಎಚ್‌ಪಿ ಅಂತರರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಹೇಳಿದ್ದಾರೆ. ವಿನಾಃಕಾರಣ ಅದನ್ನು ಗುರಿಯಾಗಿಸಿಕೊಂಡು ಆರ್‌ಎಸ್‌ಎಸ್‌ನ ವರ್ಚಸ್ಸಿಗೆ ಕಳಂಕ ತರುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

ಆರ್‌ಎಸ್‌ಎಸ್ ಆದಾಯ ಮತ್ತು ಆದಾಯ ತೆರಿಗೆ ಇಲಾಖೆಗೆ ವರದಿ ಮಾಡುವ ವಿಷಯದ ಕುರಿತು, ಸಂಘವು ವರ್ಷಕ್ಕೊಮ್ಮೆ ಗುರುದಕ್ಷಿಣೆಯನ್ನು ಆಯೋಜಿಸುತ್ತದೆ. ಸಂಸ್ಥೆಯು ತನ್ನ ಕೆಲಸಕ್ಕಾಗಿ ಹೊರಗಿನ ಮೂಲಗಳಿಂದ ಹಣವನ್ನು ಸ್ವೀಕರಿಸುವುದಿಲ್ಲ ಎಂದು ಅಲೋಕ್ ಕುಮಾರ್ ಹೇಳಿದರು. 1967–68 ಮತ್ತು 1975–76ರಲ್ಲಿ ಆದಾಯ ತೆರಿಗೆ ಇಲಾಖೆಯು ಆರ್‌ಎಸ್‌ಎಸ್‌ನ ಆದಾಯದ ಮೇಲೆ ತೆರಿಗೆ ವಿಧಿಸಲು ಆದೇಶಿಸಿತ್ತು. ಆದರೆ ಎರಡೂ ಸಂದರ್ಭಗಳಲ್ಲಿ, ಗುರುದಕ್ಷಿಣದಿಂದ ಪಡೆದ ಆದಾಯವು ಪರಸ್ಪರ ನಂಬಿಕೆ ಕಾನೂನುಗಳ ಅಡಿಯಲ್ಲಿ ತೆರಿಗೆಗೆ ಒಳಪಡುವುದಿಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿದೆ ಎಂದು ಅವರು ವಿವರಿಸಿದರು.

ಅಯೋಧ್ಯೆ ರಾಮಮಂದಿರ ಕಾಣಿಕೆ ಹಣ ನಾಪತ್ತೆ: ಮತ್ತೆರಡು ಪ್ರಕರಣ ದಾಖಲು



ಲಖನೌ: ಅಯೋಧ್ಯೆಯ ರಾಮಮಂದಿರದ 'ಕಾಣಿಕೆ ಹಣ ನಾಪತ್ತೆ' ಪ್ರಕರಣಕ್ಕೆ ಸಂಬಂಧಿಸಿ ರಾಮಮಂದಿರ ಟ್ರಸ್ಟ್ ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಕೋರಿ, ರಾಮ ಜನ್ಮಭೂಮಿ ಪೊಲೀಸ್ ಠಾಣೆಯಲ್ಲಿ ಹೊಸದಾಗಿ ಎರಡು ಪ್ರಕರಣಗಳು ದಾಖಲಾಗಿವೆ.

ರಾಮ ಮಂದಿರ ಚಳವಳಿಯಲ್ಲಿ ಬಿಜೆಪಿ ಮುಖಂಡ ಎಲ್.ಕೆ ಅಡ್ವಾಣಿ ಅವರೊಂದಿಗೆ ಕರಸೇವಕರಾಗಿ ಭಾಗಿಯಾಗಿದ್ದ, 'ಧರ್ಮ ಸೇನಾ' ಸಮಿತಿಯ ಅಧ್ಯಕ್ಷ ಸಂತೋಷ್ ದುಬೆ ಎಂಬುವರು ಟ್ರಸ್ಟ್ ಪದಾಧಿಕಾರಿಗಳ ವಿರುದ್ಧ ದೂರು ನೀಡಿದ್ದಾರೆ. ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳಲು ನಿರಾಕರಿಸಿದರೆ ಕೋರ್ಟ್ ಮೊರೆ ಹೋಗುವುದಾಗಿ ಎಚ್ಚರಿಸಿದ್ದಾರೆ.

ಟ್ರಸ್ಟ್ ಪದಾಧಿಕಾರಿಗಳನ್ನು ಹುದ್ದೆಯಿಂದ ವಜಾಗೊಳಿಸಿ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಕೋರಿ ಯುವ ಕಾಂಗ್ರೆಸ್ ಘಟಕದ ಉಪಾಧ್ಯಕ್ಷ ಶರದ್ ಶುಕ್ಲಾ ಇನ್ನೊಂದು ದೂರು ದಾಖಲಿಸಿದ್ದಾರೆ. ಕಾಣಿಕೆ ಹಣ ನಾಪತ್ತೆ ಪ್ರಕರಣವನ್ನು ಸಾಮೂಹಿಕ ಲೂಟಿ ಎಂದಿರುವ ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್, ಆರ್‌ಎಸ್‌ಎಸ್ ■6ನೇ ಪುಟಕ್ಕೆ

ದಟ್ಟಗಳ್ಳಿ ರೆಸ್ಟೋಬಾರ್ ಅಗ್ನಿ ದುರಂತದಲ್ಲಿ ಇಬ್ಬರ ಸಜೀವ ದಹನ ಪ್ರಕರಣ

ಕರ್ತವ್ಯ ಲೋಪ: ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು

ಅಗ್ನಿ ಶಾಮಕ ದಳದ ಅಧಿಕಾರಿ ವಿರುದ್ಧವೂ ಕ್ರಮ; ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸ್ಪಷ್ಟನೆ

- ಬೇಜವಾಬ್ದಾರಿ ವಹಿಸಿದ ಇತರೆ ಅಧಿಕಾರಿಗಳ ವಿರುದ್ಧ ಕ್ರಮ ಖಚಿತ
- ಈ ಪಬ್‌ಗೆ ಯಾವುದೇ ಅಬಕಾರಿ ಲೈಸೆನ್ಸ್ ಇಲ್ಲ; ಕಣ್ಮುಚ್ಚಿ ಕುಳಿತಿರುವ ಅಬಕಾರಿ ಇಲಾಖೆ
- ಈ ದುರ್ಘಟನೆಗೆ ಅಬಕಾರಿ ಇಲಾಖೆಯವರೇ ನೇರ ಹೊಣೆ

ಮೈಸೂರು, ಜೂ.16(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಪಬ್ ಅಗ್ನಿ ಅವಘಡ ಪ್ರಕರಣದಲ್ಲಿ ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯ ವಹಿಸಿದ ಮೈಸೂರು ಜಿಲ್ಲೆಯ ಅಬಕಾರಿ ಡಿಸಿಯನ್ನು ಅಮಾನತು ಮಾಡುವಂತೆ ಶಿಫಾರಸ್ಸು ಮಾಡಿರುವುದಾಗಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರು ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ಪ್ರಕರಣ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಬ್ ನಲ್ಲಿ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ಯಾವುದೇ ಮುನ್ನೆಚ್ಚರಿಕಾ ಕ್ರಮಗಳಿಲ್ಲ. ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳದ ಅಧಿಕಾರಿಗಳ ವಿರುದ್ಧ ಕೂಡ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅಬಕಾರಿ ಇಲಾಖೆಯವರು ಮಾತ್ರವಲ್ಲದೆ ಈ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿರುವ ಸಂಬಂಧಿಸಿದ ಅಧಿಕಾರಿಗಳ ■6ನೇ ಪುಟಕ್ಕೆ

ನಿಯಮ ಉಲ್ಲಂಘನೆ ಬಗ್ಗೆ ಸಮಗ್ರ ವರದಿ ನೀಡುವಂತೆ ಡಿಸಿಗೆ ಆದೇಶ

ಅಗ್ನಿ ಅವಘಡ ಸಂಭವಿಸಿರುವ ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಪಬ್‌ಗೆ ಇಂದು ಡಾ.ಯತೀಂದ್ರ ಅವರು ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿದರು.

ಅಗ್ನಿ ಅನಾಹುತವಾಗಿರುವ ಪಬ್ ಒಳಗೆ ಹೋಗಿ ಸುಮಾರು ಹತ್ತು ನಿಮಿಷಗಳ ಕಾಲ ಅವಲೋಕಿಸಿದರು. ತರುವಾಯ ಪ್ರಕರಣ ಸಂಬಂಧ ಪ್ರತಿಕ್ರಿಯೆ ನೀಡಿದ ಡಾ.ಯತೀಂದ್ರ, ಈ ಪ್ರಕರಣದಲ್ಲಿ ಏನೆಲ್ಲಾ ನಿಯಮ ಉಲ್ಲಂಘನೆ ಆಗಿದೆ ಎಂಬ ಬಗ್ಗೆ ಸಮಗ್ರ ವರದಿ ನೀಡುವಂತೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಸೂಚನೆ ನೀಡಿದ್ದೇನೆ. ಇಲ್ಲಿಗೆ ಬರುವ ಮೊದಲು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳನ್ನು ಭೇಟಿ ಮಾಡಿದ್ದೇನೆ. ಇಬ್ಬರಿಗೆ ಶೇಕಡ 50 ರಷ್ಟು ಸುಟ್ಟ ಗಾಯಗಳಾಗಿದ್ದು, ಒಬ್ಬನ ಸ್ಥಿತಿ ಗಂಭೀರವಾಗಿದೆ. ಸೂಕ್ತ ಚಿಕಿತ್ಸೆ ನೀಡುತ್ತಿರುವುದಾಗಿ ವೈದ್ಯರು ಹೇಳಿದ್ದಾರೆ ಎಂದು ಡಾ.ಯತೀಂದ್ರ ಮಾಹಿತಿ ನೀಡಿದರು.



ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಮಂಗಳವಾರ ಅಗ್ನಿ ಅವಘಡ ಸಂಭವಿಸಿರುವ ಮೈಸೂರಿನ ಮಾರಾ ರೆಸ್ಟೋಬಾರ್ ಪಬ್‌ಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪ್ರತಿ ಕಮರ್ಷಿಯಲ್ ಕಾಂಪ್ಲೆಕ್ಸ್‌ಗೆ ಭೇಟಿ: ಫೈರ್ ಸೇಫ್ಟಿ ಬಗ್ಗೆ ಪರಿಶೀಲನೆ

ಅಗ್ನಿ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆಯೇ ಎಂಬ ಬಗ್ಗೆ ಮೈಸೂರಿನ ಎಲ್ಲಾ ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಅಗ್ನಿಶಾಮಕ ದಳದವರಿಗೆ ಸೂಚನೆ ನೀಡಿದ್ದೇನೆ ಎಂದು ಡಾ.ಯತೀಂದ್ರ ತಿಳಿಸಿದರು. ಪ್ರತಿಯೊಂದು ಕಮರ್ಷಿಯಲ್ ಕಾಂಪ್ಲೆಕ್ಸ್‌ಗೆ ಖುದ್ದು ಭೇಟಿ ನೀಡಿ ಫೈರ್ ಸೇಫ್ಟಿ ಬಗ್ಗೆ ಪರಿಶೀಲನೆ ನಡೆಸುವಂತೆ ಹೇಳಿದ್ದೇನೆ. ಒಂದು ವೇಳೆ ಅಗ್ನಿ ಸುರಕ್ಷತಾ ಕ್ರಮಗಳು ಇಲ್ಲದಿದ್ದರೆ ಅದನ್ನು ಅಳವಡಿಸಿಕೊಳ್ಳಲು ತಾಕೀತು ಮಾಡಬೇಕು ಎಂದು ಕೂಡ ನಿರ್ದೇಶನ ನೀಡಿದ್ದೇನೆ. ವಾಣಿಜ್ಯ ಕಟ್ಟಡಗಳು ಬಹು ಮಹಡಿಗಳಿಂದ ಕೂಡಿರುತ್ತವೆ. ಅಗ್ನಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಪಾರಾಗಲು ಹಲವು ಮುನ್ನೆಚ್ಚರಿಕಾ ಕ್ರಮ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಪರಿಶೀಲನಾ ಕಾರ್ಯ ಕೈಗೊಳ್ಳಲು ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದು ಡಾ.ಯತೀಂದ್ರ ತಿಳಿಸಿದರು.

ಬಾರ್ ಮಾಲೀಕ ಪ್ರೀತಮ್ ಪುನೀತ್, ಕಟ್ಟಡದ ಮಾಲೀಕ ಕೇಶವಮೂರ್ತಿ ಮೇಲೆ ಕೇಸ್!

ಎಮರ್ಜೆನ್ಸಿ ಎಕ್ಸಿಟ್ ಸೇರಿ ಯಾವುದೇ ಮುನ್ನೆಚ್ಚರಿಕಾ ಸುರಕ್ಷತಾ ವ್ಯವಸ್ಥೆ ಇಲ್ಲದೆ ಇರುವುದು ಅವಘಡಕ್ಕೆ ಮೂಲ ಕಾರಣ ಆರೋಪ

ಮೈಸೂರು,ಜೂ.16(ಪಿಎಂ)– ದಟ್ಟಗಳ್ಳಿಯ ನೇತಾಜಿ ವೃತ್ತದ ಸಮೀಪದ ಮಾರಾ ರೆಸ್ಟೋಬಾರ್‌ನಲ್ಲಿ ಸೋಮವಾರ ಭಾರೀ ಅಗ್ನಿ ದುರಂತ ಸಂಭವಿಸಿ ಅಲ್ಲಿನ ಇಬ್ಬರು ಅಡುಗೆ ಸಿಬ್ಬಂದಿ ಸಜೀವ ದಹನವಾದ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪ್ರೀತಮ್ ಪುನೀತ್

ಯಾವುದೇ ಮುನ್ನೆಚ್ಚರಿಕಾ ಹಾಗೂ ಸುರಕ್ಷತಾ ವ್ಯವಸ್ಥೆ ಇಲ್ಲದಿರುವುದೇ ಇಂತಹ ದುರಂತಕ್ಕೆ ಕಾರಣ ಎಂಬ ಆರೋಪದಡಿ ಸದರಿ ರೆಸ್ಟೋಬಾರ್ ಮಾಲೀಕ ಪ್ರೀತಮ್ ಪುನೀತ್ (ಎ1), ಈ ಬಾರ್‌ನ ಕಟ್ಟಡದ ಮಾಲೀಕ ಕೇಶವಮೂರ್ತಿ (ಎ2) ಮತ್ತು ಸಂಬಂಧಿಸಿದ ಇತರರ (ಎ3) ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ದುರಂತದಲ್ಲಿ ಗಾಯಗೊಂಡ ಚೆನ್ನರಾಮ್ (25) ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಾನು, ನನ್ನ ಸ್ನೇಹಿತೆ ಸೋನಾ ಇಬ್ಬರೂ ಊಟ ಮಾಡಬೇಕೆಂದು ನಿರ್ಧರಿಸಿ, ಮಧ್ಯಾಹ್ನ 2.50ರ ವೇಳೆಗೆ ಎರಡನೇ ಅಂತಸ್ತಿನಲ್ಲಿರುವ ಮಾರಾ ರೆಸ್ಟೋಬಾರ್‌ಗೆ ಹೋದೆವು. ಇಬ್ಬರೂ ಟೇಬಲ್‌ನಲ್ಲಿ ಕುಳಿತು ಗಮನಿಸಿದಾಗ, ಒಣಗಿದ ಹುಲ್ಲು, ಗೋಣಿಚೀಲ ಹಾಗೂ ಪ್ಲಾಸ್ಟಿಕ್‌ನಿಂದ ರೆಸ್ಟೋಬಾರ್ ಅನ್ನು ಅಲಂಕಾರ ಮಾಡಿರುವುದು ಕಂಡಿತು. ಅಲ್ಲಿ ಆಗ 10ರಿಂದ 15 ಮಂದಿ ಗ್ರಾಹಕರು, ಸುಮಾರು 10 ಮಂದಿ ಅಲ್ಲಿನ ಸಿಬ್ಬಂದಿ ಇದ್ದರು ಎಂದು ಚೆನ್ನರಾಮ್ ಹೇಳಿಕೆ ನೀಡಿದ್ದಾರೆ.

ನಾನು ಊಟ ಆರ್ಡರ್ ಮಾಡಿದ ಸುಮಾರು ಐದು ನಿಮಿಷದಲ್ಲಿ ನಾವು ಕುಳಿತಿದ್ದ ಟೇಬಲ್‌ನಿಂದ 2ನೇ ಟೇಬಲ್ ಪಕ್ಕ ಇದ್ದ ವಿದ್ಯುತ್ ಬೋರ್ಡ್‌ನಿಂದ ಶಾರ್ಟ್ ಸರ್ಕ್ಯೂಟ್ ಆಗಿ ವಿದ್ಯುತ್ ಕಿಡಿಗಳು ಅಲಂಕಾರಕ್ಕಾಗಿ ಹೊದಿಸಿದ್ದ ಒಣಗಿದ ಹುಲ್ಲಿಗೆ ತಾಗಿ ದಿಢೀರನೇ ಬೆಂಕಿಯು ಎಲ್ಲಾ ಕಡೆ ವ್ಯಾಪಿಸಿತು. ಅಲ್ಲಿನ ಕೆಲಸಗಾರರು ಬೆಂಕಿ ನಂದಿಸಲು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ನಂತರ ಅಲ್ಲಿದ್ದ ಎಲ್ಲರೂ ಹೊರಗೆ ಹೋಗಲು ಪ್ರಯತ್ನಿಸಿದರು. ಕೆಲವರು ಮೆಟ್ಟಿಲಿನ ಮೂಲಕ ಕೆಳಗಡೆ ಹೋದರು. ■6ನೇ ಪುಟಕ್ಕೆ

ಮೈಸೂರಿನಲ್ಲಿ ಕಾನೂನು ಬಾಹಿರ ಬಿವೈಒಬಿ–BYOB ಹಾವಳಿಯಿಂದ ಅಧಿಕಾರಿಗಳಿಗೆ ದಿನವೂ ಹಬ್ಬ! ಸರ್ಕಾರಕ್ಕೆ ಭಾರೀ ಖೋತಾ!! /{ಪೂರ್ಣ ವರದಿ ಪುಟ –3ರಲ್ಲಿ}

ಹೊಸಹುಂಡಿ ಬಳಿ ರಿಂಗ್ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಆರಂಭ

● ತಡೆಗೋಡೆ ನಿರ್ಮಾಣದೊಂದಿಗೆ ಸಿದ್ಧತೆ ● ಮರ ತೆರವಿಗೆ ಪರಿಸರವಾದಿಗಳ ತೀವ್ರ ವಿರೋಧ





ಮೈಸೂರಿನ ಹೊರ ವರ್ತುಲ ರಸ್ತೆಯ ದೇವಲಾಪುರ ರಸ್ತೆಯ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಲು ರಿಂಗ್ ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್ ಅಳವಡಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.16(ಎಂಟಿವೈ)– ಪರಿಸರವಾದಿಗಳ ತೀವ್ರ ಆಕ್ಷೇಪದ ನಡುವೆಯೂ ಮೈಸೂರಿನ ರಿಂಗ್ ರಸ್ತೆಯಲ್ಲಿ ಹೊಸಹುಂಡಿ–ದೇವಲಾಪುರ ರಸ್ತೆಗೆ ಅಡ್ಡಲಾಗಿ ಮೇಲ್ಸೇತುವೆ(ಗ್ರೇಡ್ ಸಪರೇಟ್) ನಿರ್ಮಿಸಲು ಕಾಮಗಾರಿ ಆರಂಭಿಸಲಾಗಿದ್ದು, ಮರಗಳನ್ನು ಹನನ ಮಾಡದಂತೆ ಪರಿಸರವಾದಿಗಳು ಆಗ್ರಹಿಸಿದ್ದಾರೆ.

ಮೈಸೂರಿನ ರಿಂಗ್‌ರಸ್ತೆಯಲ್ಲಿ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಪದೇ ಪದೇ ಅಪಘಾತ ಸಂಭವಿಸುತ್ತಿದ್ದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈ ಜಂಕ್ಷನ್ ಅನ್ನು ಬ್ಲಾಕ್ ಸ್ಪಾಟ್(ಅಪಘಾತ ವಲಯ) ಎಂದು ಗುರುತಿಸಿ, ಸುರಕ್ಷತೆಗೆ ಮೇಲ್ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಅದಕ್ಕಾಗಿ ದೇವಲಾಪುರ ರಸ್ತೆ ಜಂಕ್ಷನ್‌ನಿಂದ ಉತ್ತನಹಳ್ಳಿ ಕಡೆ ಹಾಗೂ ನಂಜನಗೂಡು ರಸ್ತೆ ಕಡೆಗೆ ರಿಂಗ್ ರಸ್ತೆಯ ವಿಭಜಕದಲ್ಲಿ ಇರುವ 48 ಮರಗಳನ್ನು ತೆರವುಗೊಳಿಸಲು ಗುರುತಿಸಲಾಗಿತ್ತು. ಈ ಸಂಬಂಧ ಮಾ.25ರಂದು ದೇವಲಾಪುರ ರಸ್ತೆಯ ಜಂಕ್ಷನ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ 'ಸಾರ್ವಜನಿಕ ಅಹವಾಲು' ಸಭೆಯಲ್ಲಿ ವಿವಿಧ ಗ್ರಾಮಸ್ಥರು, ಸ್ಥಳೀಯರು ಹಾಗೂ ಪರಿಸರವಾದಿಗಳು ಉದ್ದೇಶಿತ ಫ್ಲೈಓವರ್ ನಿರ್ಮಾಣದ ಪರ ಹಾಗೂ ವಿರೋಧದ ನಿಲುವು ವ್ಯಕ್ತಪಡಿಸಿದ್ದರು. ಅಂದು ನಡೆದ ಸಭೆಯಲ್ಲಿ ಗೊಂದಲ ಉಂಟಾಗಿದ್ದರಿಂದ ಅರಣ್ಯ ಭವನದಲ್ಲಿ ಆಕ್ಷೇಪ ಅಥವಾ ಸಮ್ಮತಿ ಇದ್ದರೆ ಆಧಾರ್ ಕಾರ್ಡ್ ಪ್ರತಿ, ವಿಳಾಸದೊಂದಿಗೆ ಲಿಖಿತವಾಗಿ ಸಲ್ಲಿಸುವಂತೆ ಸಲಹೆ ನೀಡಲಾಗಿತ್ತು.

ಕಾಮಗಾರಿಗೆ ಸಿದ್ಧತೆ: ಮೈಸೂರಿನ ರಿಂಗ್ ರಸ್ತೆಯಲ್ಲಿ ಬ್ಲಾಕ್‌ಸ್ಪಾಟ್ ಎಂದು ಗುರುತಿಸಲ್ಪಟ್ಟಿರುವ ದೇವಲಾಪುರ ರಸ್ತೆಯ ಜಂಕ್ಷನ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 20.8 ಕೋಟಿ ರೂ. ವೆಚ್ಚದಲ್ಲಿ 45 ಮೀಟರ್ ಅಗಲವಿರುವ 800 ಮೀಟರ್ ಉದ್ದದ ಗ್ರೇಡ್ ಸಪರೇಟರ್ ನಿರ್ಮಿಸಲು ಮುಂದಾಗಿದೆ. ಜೂ.15ರಿಂದ ಕಾಮಗಾರಿ ಪ್ರಕ್ರಿಯೆ ಆರಂಭಿಸಿದ್ದು, ವಾಹನಗಳ ಸಂಚಾರಕ್ಕೆ ಸರ್ವಿಸ್ ರಸ್ತೆ ಬಳಸುವಂತೆ ಸೂಚಿಸಲಾಗಿದೆ. ಅಲ್ಲದೆ, ಉದ್ದೇಶಿತ ಸ್ಥಳದಲ್ಲಿ ರಿಂಗ್ ರಸ್ತೆಗೆ ಅಡ್ಡಲಾಗಿ ತಗಡಿನ ಶೀಟ್‌ನ ತಡೆಗೋಡೆ ಅಳವಡಿಸಿದ್ದು, ಮೇಲ್ಸೇತುವೆ ನಿರ್ಮಾಣಕ್ಕಾಗಿ ರಿಂಗ್ ರಸ್ತೆಯಲ್ಲಿ ಡಾಂಬರ್ ತೆರವುಗೊಳಿಸುವ ಕಾರ್ಯಕ್ಕೆ ಮುಂದಾಗಿದೆ.

ಗುಂಡಿ ಮುಚ್ಚಲು ಬಂದಿದ್ದೇವೆ

ದೇವಲಾಪುರ ರಸ್ತೆಯ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಕಾಮಗಾರಿ ನಡೆಸಲು ಬಂದಿದ್ದ ಕೆಲಸಗಾರರು ಪ್ರತಿಕ್ರಿಯೆ ನೀಡಿ, ಈ ಹಿಂದೆ ರಸ್ತೆ ಕಾಮಗಾರಿ ವೇಳೆ ಆಗಿದ್ದ ಗುಂಡಿ ಮುಚ್ಚುವುದಕ್ಕೆ ಮಾತ್ರ ಬಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಪರಿಸರವಾದಿಗಳು ಮಾತ್ರ ಮೇಲ್ಸೇತುವೆ ಕಾಮಗಾರಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದಿದ್ದಾರೆ. ಈ ಮೂಲಕ ಜನಾಭಿಪ್ರಾಯವನ್ನು ಕಡೆಗಣಿಸಲಾಗಿದೆ. ಯಾವುದೇ ಕಾರಣಕ್ಕೂ ಮೇಲ್ಸೇತುವೆ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಮರ ತೆರವಿಗೆ ಅನುಮತಿ ನೀಡಿಲ್ಲ

"ರಿಂಗ್ ರಸ್ತೆಯ ದೇವಲಾಪುರ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಮರಗಳ ತೆರವಿಗೆ ಅನುಮತಿ ನೀಡಿಲ್ಲ. ಈ ಹಿಂದೆ ನಡೆಸಿದ ಸಾರ್ವಜನಿಕರ ಅಹವಾಲು ಸಭೆಯಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಪರ ಮತ್ತು ವಿರೋಧ ವ್ಯಕ್ತವಾಗಿದೆ. ಅರಣ್ಯ ಇಲಾಖೆ ಒಂದೇ ಒಂದು ಮರ ತೆರವಿಗೆ ಅನುಮತಿ ನೀಡಿಲ್ಲ.

–ಕೆ.ಪರಮೇಶ್, ಡಿಸಿಎಫ್, ಮೈಸೂರು ಪ್ರಾದೇಶಿಕ ವಿಭಾಗ

ವಿದ್ವಾನ್ ಎಸ್.ರಘುನಂದನ್ ಸುಂದರ ಕಾಂಡ ಪ್ರದರ್ಶನ





ಎಸ್.ರಘುನಂದನ್

ಮೈಸೂರು: ಭಾರತೀಯ ವಿದ್ಯಾಭವನ, ಮೈಸೂರು ವತಿಯಿಂದ ಜೂ.20ರಂದು ಸಂಜೆ 6ಕ್ಕೆ ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣದಲ್ಲಿ ಕಲಾ ಯೋಗಿ ವಿದ್ವಾನ್ ಎಸ್.ರಘುನಂದನ್ ಅವರಿಂದ ಸುಂದರ ಕಾಂಡ ಪ್ರದರ್ಶನ ಏರ್ಪಡಿಸಲಾಗಿದೆ.

ಕಿರು ಪರಿಚಯ: ಕಲಾಯೋಗಿ ಗುರು ರಘುನಂದನ್ ಅವರು ನಾಟ್ಯಾಚಾರ್ಯ ಗುರು ಬಿ.ಕೆ.ಶ್ಯಾಮಪ್ರಕಾಶ್ ಹಾಗೂ ವೀಣಾ ವಿದುಷಿ ಗೀತಾ ಶ್ಯಾಮ ಪ್ರಸಾದ್ ಅವರ ಪುತ್ರರು. (ಮಗನ ಮಗ) ಭರತನಾಟ್ಯ ಭೀಷ್ಮಾಚಾರ್ಯರಾದ ಎಚ್.ಆರ್.ಕೇಶವಮೂರ್ತಿ ಅವರ ಪೌತ್ರರು. ಶ್ರೀಯುತರು ಭರತನಾಟ್ಯ ಹಾಗೂ ಸಂಸ್ಕೃತ–ಎರಡೂ ಕ್ಷೇತ್ರದಲ್ಲೂ ಸ್ನಾತಕೋತ್ತರ ಪದವೀಧರರು ಹಾಗೂ ಟೆಲಿಕಮ್ಯೂನಿಕೇಷನ್ ಇಂಜಿನಿಯರಿಂಗ್ ಬಿ.ಇ.ನಲ್ಲಿ ತೇರ್ಗಡೆ ಹೊಂದಿದ್ದು, ಸಾಫ್ಟ್‌ವೇರ್ ಉದ್ಯಮಿಯಾಗಿ ಸೇವೆ ಸಲ್ಲಿಸಿದವರು.

ಇವರು ಭರತನಾಟ್ಯ, ಮೃದಂಗ, ನಟುವಾಂಗ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ ರಚನೆಯಲ್ಲಿ ಪರಿಣಿತರು. ನರ್ತಕರಾಗಿ ಇಪ್ಪತ್ತಕ್ಕೂ ಹೆಚ್ಚು ನೃತ್ಯ ರೂಪಕಗಳಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಪ್ರಸಿದ್ಧರಾಗಿದ್ದಾರೆ. ಭರತನಾಟ್ಯವನ್ನು ದೇಶದ ಬಹುತೇಕ ನೃತ್ಯೋತ್ಸವಗಳು ಹಾಗೂ ಅಂತರರಾಷ್ಟ್ರೀಯ ದೇಶಗಳಾದ ಅಮೇರಿಕಾ, ಆಸ್ಟ್ರೇಲಿಯಾ, ಸಿಂಗಪೂರ್, ಸೌತ್ ಆಫ್ರಿಕಾದ ಪ್ರತಿಷ್ಠಿತ ನೃತ್ಯೋತ್ಸವಗಳಲ್ಲಿ ಪ್ರದರ್ಶಿಸಿ ಜನಮನ್ನಣೆ ಪಡೆದಿದ್ದಾರೆ.

ಇಂದು 'ನೇಸರಾ... ನೋಡು' ಸುಗಮ ಸಂಗೀತ ಕಾರ್ಯಕ್ರಮ

ಮೈಸೂರು, ಜೂ.16–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಘಟಕದ ಪರಿಸರ ಮಾಸಾಚರಣೆ ಸಮಿತಿಯು, 'ಸ್ಫೂರ್ತಿ' ಬಿಎಐ ಮಹಿಳಾ ಘಟಕ ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ ಸಹಯೋಗದೊಂದಿಗೆ ಪರಿಸರ ಮಾಸಾಚರಣೆ ಅಂಗವಾಗಿ ಬುಧವಾರ(ಜೂ.17) ಸಂಜೆ 5ಕ್ಕೆ ಬಿಎಐನ ಎಂಬಿಸಿಟಿ ಸಭಾಂಗಣದಲ್ಲಿ 'ನೇಸರಾ.... ನೋಡು' ವಿಶೇಷ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಿದೆ.

ಮೈಸೂರಿನ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ನಾಗರಾಜ್ ವಿ.ಭೈರಿ ಅವರ ನೇತೃತ್ವದಲ್ಲಿ ನಡೆಯಲಿರುವ ಸುಗಮ ಸಂಗೀತ ಸಂಜೆಯಲ್ಲಿ ಗಾಯಕರಾದ ನಿತಿನ್ ರಾಜಾರಾಮ್ ಶಾಸ್ತ್ರಿ, ರಶ್ಮಿ ಚಿಕ್ಕಮಗಳೂರು, ಲಕ್ಷ್ಮೀ ದಿನೇಶ್, ನರಸಿಂಹಮೂರ್ತಿ ಹಾಗೂ ತ್ಯಾಗರಾಜ್ ಅವರು ಕವಿಗಳಿಂದ ರಚಿತವಾದ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ.

ವಾದ್ಯ ವೃಂದದಲ್ಲಿ ಪುರುಷೋತ್ತಮ್ (ಕೀ ಬೋರ್ಡ್), ಗುರುದತ್(ರಿದಂ ಪ್ಯಾಡ್), ರೋಷನ್ ಸೂರ್ಯ(ತಬಲ) ಮತ್ತು ಪುನೀತ್(ಕೊಳಲು) ಸಾಥ್ ನೀಡಲಿದ್ದಾರೆ. ಎಡೆಯೂರ್ ಸಮೀವುಲ್ಲಾ ಕಾರ್ಯಕ್ರಮ ನಿರೂಪಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಬಿಎಐ ಮೈಸೂರು ಘಟಕದ ಛೇರ್ಮನ್ ಕೆ.ಆರ್.ಪ್ರಭಾಕರ್ ರಾವ್, ಗೌರವ ಕಾರ್ಯದರ್ಶಿ ಎಂ.ಡಿ. ಪ್ರವೀಣ್ ಪಾಲ್, ವಿಶ್ವ ಪರಿಸರ ಮಾಸ (ಡಬ್ಲ್ಯೂಇಎಂ)–2026ರ ಅಧ್ಯಕ್ಷ ಸಿ.ಡಿ. ಕೃಷ್ಣ, ಗೌರವ ಕಾರ್ಯದರ್ಶಿ ಎಸ್.ವಾಸುದೇವನ್ ಹಾಗೂ 'ಸ್ಫೂರ್ತಿ' ಘಟಕದ ಅಧ್ಯಕ್ಷೆ ಶ್ರೀಮತಿ ಶಾಂತಿ ಭಾರದ್ವಾಜ್ ಮತ್ತು ಗೌರವ ಕಾರ್ಯದರ್ಶಿ ಶ್ರೀಮತಿ ವೀಣಾ ಅಶೋಕ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಾ.ಮೂರ್ತಿಗೆ ಸನ್ಮಾನ...



ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಅವರನ್ನು ಸರ್ಕಾರಿ ಅತಿಥಿ ಗೃಹದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಪೈಲ್ವಾನ್ ನವೀನ್, ಮಾಜಿ ಉಪಾಧ್ಯಕ್ಷ ಧನಗಳ್ಳಿ ಪ್ರವೀಣ್, ಚಾಮುಂಡೇಶ್ವರಿ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿನೋದ್ ಎಸ್‌ಆರ್‌ಎಸ್, ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಕಾರ್ತಿಕ್ ಇದ್ದರು.

ಶಿಷ್ಯವೇತನರಹಿತ ಸಂಶೋಧಕರ ಪ್ರತಿಭಟನೆ ಮುಂದುವರಿಕೆ



ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರು ಶಿಷ್ಯವೇತನರಹಿತ ಸಂಶೋಧಕರ ಬಳಗದಿಂದ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರೆದಿದೆ.

ಮೈಸೂರು, ಜೂ.16(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್‌ಡಿ ಸಂಶೋಧಕರಿಗೆ ಶಿಷ್ಯವೇತನ ಮಂಜೂರು ಮಾಡುವಂತೆ ಆಗ್ರಹಿಸಿ ಶಿಷ್ಯವೇತನರಹಿತ ಸಂಶೋಧಕರ ಬಳಗದ ವತಿಯಿಂದ ಕ್ರಾಫರ್ಡ್ ಭವನದ ಎದುರು ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರೆದಿದೆ.

ಮೈಸೂರು ವಿವಿಯಲ್ಲಿ ಈ ಹಿಂದೆಯೆಲ್ಲಾ ಎಲ್ಲಾ ಸಂಶೋಧಕರಿಗೆ ಶಿಷ್ಯವೇತನ ನೀಡುತ್ತಾ ಬರಲಾಗಿದೆ. ಪ್ರೊ.ಜಿ. ಹೇಮಂತ್‌ಕುಮಾರ್ ಅವರು ಕುಲಪತಿಗಳಾಗಿದ್ದ ಅವಧಿಯಲ್ಲೂ 150 ಮಂದಿ ಸಂಶೋಧಕರಿಗೆ ಪ್ರತಿ ತಿಂಗಳು ಶಿಷ್ಯವೇತನ ನೀಡಲಾಗಿದೆ. ಆದರೆ, ಪ್ರೊ.ಎನ್.ಕೆ.ಲೋಕನಾಥ್ ಕುಲಪತಿಗಳಾದಾಗಿನಿಂದ ಶಿಷ್ಯವೇತನ ನೀಡುವಲ್ಲಿ ಹಿಂದೇಟು ಹಾಕಲಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ನೂರು ಮಂದಿ ಸಂಶೋಧಕರು ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ್ದರೆ, ಅವರಲ್ಲಿ 20 ಮಂದಿಗೆ ಮಾತ್ರವೇ ಶಿಷ್ಯ ವೇತನ ನೀಡುತ್ತೇವೆ. ವಿವಿಯಲ್ಲಿ ಹಣದ ಕೊರತೆ ಇರುವುದರಿಂದ ಎಲ್ಲರಿಗೂ ಶಿಷ್ಯವೇತನ ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಿರುವವರು ಹಿಂದೆಲ್ಲಾ ಹೇಗೆ ನೀಡುತ್ತಿದ್ದರೂ ಎಂದು ಧರಣಿ ನಿರತರು ಪ್ರಶ್ನಿಸಿದ್ದಾರೆ.

ಬಳಿಕ ಜಿಪಂನಲ್ಲಿ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಎಲ್.ಮೂರ್ತಿ ಅವರನ್ನು ಭೇಟಿ ಮಾಡಿದ ಶಿಷ್ಯವೇತನ ರಹಿತ ಸಂಶೋಧಕರು, ಶಿಷ್ಯವೇತನ ಮಂಜೂರು ಮಾಡಿಸಿಕೊಡಬೇಕು ಎಂದು ಮನವಿ ಮಾಡಿದರು. ಮನವಿಗೆ ಆಯೋಗದ ಅಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ, ಶಿಷ್ಯವೇತನ ನೀಡುವುದಾಗಿ ವಿಶ್ವವಿದ್ಯಾನಿಲಯದ ಕುಲಪತಿಗಳೇ ಆದೇಶ ಮಾಡುವವರೆಗೂ ಪ್ರತಿಭಟನೆ ಮುಂದುವರೆಯಲಿದೆ ಎಂದು ಪ್ರತಿಭಟನಾನಿರತ ಸಂಶೋಧಕರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕುರುಬಾರಹಳ್ಳಿ ಯಜಮಾನರಾದ ಅಪ್ಪುಗೌಡರಿಗೆ ಶ್ರದ್ಧಾಂಜಲಿ...



ಇತ್ತೀಚೆಗೆ ನಿಧನರಾದ ಕುರುಬಾರಹಳ್ಳಿ ಯಜಮಾನರಾದ ಅಪ್ಪುಗೌಡ ಅವರಿಗೆ ಮೈಸೂರು ನಗರ, ಜಿಲ್ಲೆ, ತಾಲೂಕು ಕುರುಬರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು ಈ ವೇಳೆ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ತಾಲೂಕು ಅಧ್ಯಕ್ಷ ಬಸವರಾಜ, ಮುಖಂಡರಾದ ರವಿ, ಶಿವಣ್ಣ, ಪ್ರಕಾಶ್, ಮಾದೇಗೌಡ, ಶಾಂತ ಇನ್ನಿತರರಿದ್ದರು.

ವಿವಿಧ ನಿಯತಕಾಲಿಕೆಗಳ ಅರ್ಧ ಬೆಲೆಗೆ ಮಾರಾಟ

ಮೈಸೂರು, ಜೂ.16– ನಗರ ಕೇಂದ್ರ ಗ್ರಂಥಾಲಯದ ವತಿಯಿಂದ ಏಪ್ರಿಲ್–2025ರಿಂದ ಮಾರ್ಚ್–2026ರ ಅಂತ್ಯದವರೆಗೆ ಲಭ್ಯವಿರುವ ಆಯ್ದ ವಿವಿಧ ನಿಯತಕಾಲಿಕೆಗಳನ್ನು 30ರವರಗೆ ಅರ್ಧ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕರು ತಮ್ಮ ಬಡಾವಣೆಯ ವ್ಯಾಪ್ತಿಗೆ ಬರುವ ಗ್ರಂಥಾಲಯಗಳನ್ನು ಈ ಸಂಬಂಧ ಹೆಚ್ಚಿನ ವಿವರಗಳಿಗಾಗಿ ಶಾಖಾ, ಸೇವಾ ಕೇಂದ್ರ ಗ್ರಂಥಾಲಯದ ಸಮಯದಲ್ಲಿ ಶಾಖೆ/ಸೇವಾ ಕೇಂದ್ರ ಗ್ರಂಥಾಲಯದ ಪ್ರಭಾರದಾರಕರನ್ನು ಭೇಟಿ ಮಾಡಬಹುದಾಗಿದೆ ಹಾಗೂ ನಿಯತಕಾಲಿಕೆಗಳನ್ನು ಖರೀದಿಸಿದಂತಹ ಸಾರ್ವಜನಿಕರು ಸಂಬಂಧಪಟ್ಟ ಶಾಖೆಗಳಿಂದ ರಶೀದಿಗಳನ್ನು ಪಡೆಯಬಹುದಾಗಿದೆ ಎಂದು ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಮೇಯರ್ ಶಿವಕುಮಾರ್‌ಗೆ ಸನ್ಮಾನ...



ನೂತನ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಮೈಸೂರು ಮಹಾನಗರಪಾಲಿಕೆ ಮಾಜಿ ಮೇಯರ್ ಶಿವಕುಮಾರ್ ಅವರನ್ನು ಮೈಸೂರು ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಅಧ್ಯಕ್ಷ ನವೀನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಡಿ.ಮಹೇಶ ನಾಯಕ, ನಾಗೇಂದ್ರ ಹಾಗೂ ರಾಜ್ಯ ಎಸ್‌ಟಿ ಮೋರ್ಚಾ ಕಾರ್ಯಕಾರಿಣಿ ಸದಸ್ಯರಾದ ಗುರುವಿನಾಯಕ್, ಮಹೇಶ್, ಮೆಲ್ಲಹಳ್ಳಿ ಅಪ್ಪು, ಸ್ವಾಮಿನಾಯಕ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಲೇಖನ ಸ್ಪರ್ಧೆಗೆ ಸಮಾಜಮುಖಿ ಚಿಂತನೆ ಲೇಖನಗಳ ಆಹ್ವಾನ

ಮೈಸೂರು: ಪ್ರಗತಿಪರ ಚಿಂತಕ, ವಿಚಾರವಾದಿ ಪ್ರೊ.ಕೆ.ರಾಮದಾಸರ ನೆನಪಿನಲ್ಲಿ ರಾಜ್ಯ ಮಟ್ಟದ ಲೇಖನ ಸ್ಪರ್ಧೆಗಾಗಿ ಸಮಾಜಮುಖಿ ಚಿಂತನೆಯ ಲೇಖನಗಳನ್ನು ಆಹ್ವಾನಿಸಿದೆ. 'ಸಾಮಾಜಿಕ ಬದಲಾವಣೆಯಲ್ಲಿ ಮೀಸಲಾತಿಯ ಪಾತ್ರ–ಸಾಧಕ–ಬಾಧಕಗಳು' ಕುರಿತು ಲೇಖನ ಬರೆಯಬೇಕು. ಲೇಖನವು ವಾಸ್ತವಾಂಶ ತಿಳಿಸುವಂತಿರಬೇಕು. ಬಿಡಿ ಹಾಳೆಯ ಒಂದೇ ಮಗ್ಗುಲಲ್ಲಿ ಬರೆದಿರಬೇಕು ಅಥವಾ ಟೈಪ್ ಆಗಿರಬೇಕು. ಈ ಲೇಖನ ಇನ್ನೆಲ್ಲೂ ಪ್ರಕಟವಾಗಿರಬಾರದು. ಕನ್ನಡದ ಲೇಖನವಾಗಿರಬೇಕು. ವಿಷಯಕ್ಕೆ ಸಂಬಂಧಿಸಿದ ಲೇಖನವಾಗಿರಬೇಕು. ಲೇಖನವು ಜೂ. 20ರೊಳಗೆ ಕೃಷ್ಣಜನಮನ, ಅಧ್ಯಕ್ಷರು, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್, ಅನುದಿನ ನಿಲಯ, ಇಡಬ್ಲ್ಯುಎಸ್–155, 10ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಬಡಾವಣೆ, ಮೈಸೂರು ಇಲ್ಲಿ ಕಳುಹಿಸಬೇಕು. ಆಯ್ಕೆಯಾದ ಲೇಖನಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನವೆಂದು ನಗದು ಪ್ರಶಸ್ತಿ ಪತ್ರದೊಂದಿಗೆ ನೀಡಲಾಗುವುದು. ಪ್ರಶಸ್ತಿಯನ್ನು ಜೂ.28ರಂದು ರಂಗಾಯಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೀಡಲಾಗುವುದು. ಮಾಹಿತಿಗೆ ಮೊ. 7019441509.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.06.2026 ಬುಧವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತೃತೀಯ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ತಂತ್ರಜ್ಞಾನ ತರಂಗ–CDAC ಜೊತೆ, ಪ್ರಾಯೋಜಕರು: Center for Development of Advanced Computing, Bengaluru, 7.45 ಚಿತ್ರಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಿ.ಟಿ.ವಿಶ್ವಮೋಹನ್ ಭಟ್–ಗಿಟಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಧುವಂತಿ ಎಮ್.ಎ.–ಹಾಡು ಗಾರಿಕೆ, 4.00 ಮಹಿಳಾರಂಗ–ಸಾಧನ ಶಿಖರ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕು ಕ್ಯಾತನ ಹಳ್ಳಿಯ ಭರತನಾಟ್ಯ ಕಲಾವಿದೆ ಕೌಸ್ತುಭ ಕೇಶವಸ್ವಾಮಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ವಿ.ಕೀರ್ತನಾ, 4.30 ಹಿಂದಿ ಚಿತ್ರಗೀತೆಗಳು, 4.45 –ಭಾಷಾಭಾರತಿ–ವಿಶೇಷ ಹಿಂದಿ ಪಾಠ ಸರಣಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 Running commentary of ICC Women's T20 World cup cricket match between India and Netherlands being played at Headingley, Leeds

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ) ಚಿಕಿತ್ಸಾ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.

■ **ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಆಯುಷ್ ಇಲಾಖೆ ಆಯುಕ್ತ ಡಾ. ಸುನೀಲ್ ಪವಾರ್ ಆಗಮಿಸಲಿದ್ದಾರೆ. ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ಜಿಗಣಿ ವೈದ್ಯಕೀಯ ನಿರ್ದೇಶಕ ಡಾ. ಆರ್. ನಾಗರತ್ನ, ಡಾ. ವನಿತಾ ಎಸ್. ಶೆಟ್ಟಿ, ಉಜಿರೆ ಡಾ. ವಾದಿರಾಜ ಹೆಚ್.ಎಸ್., ನಾಗಮಂಗಲ ಡಾ. ನಿಖಿಲಾ ಹಿರೇಮಠ್, ಸ್ಥಳ: ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಆವರಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು: ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತೆ ಟಿ.ರಮ್ಯಾ, ಸ್ಥಳ: ಕಾಲೇಜಿನ ನವಜ್ಯೋತಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಅರಿವು ಸಂಸ್ಥೆ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಕಡಕೊಳ ಪಟ್ಟಣ ಪಂಚಾಯತ್ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಪರಿಸರ ಪ್ರೇಮಿ ಕೃಷ್ಣಪ್ಪ (ಘಂಟಯ್ಯ), ಗಗನ್ ಗೌಡ, ಪರಿಸರ ಸ್ನೇಹಿ ತಂಡದ ಅಧ್ಯಕ್ಷ ಲೋಹಿತ್, ಶಿಕ್ಷಕಿ ರೇಣುಕಾ ಅವರಿಗೆ ಪರಿಸರ ಪ್ರೇಮಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆಬಿ ಲಿಂಗರಾಜು, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ, ನಗರ ಪಾಲಿಕ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಸ್ಥಳ: ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಬೃಂದಾವನ ಬಡಾವಣೆಯ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ :** 36ನೇ ವರ್ಷದ ವಾರ್ಷಿಕೋತ್ಸವ, ಬೆಳಗ್ಗೆ 7ಕ್ಕೆ ಪುನಃ ಪೂಜೆ, ಕಲಾ ಹೋಮ, ಪೂರ್ಣಾಹುತಿ, ಮಂಗಳಾರತಿ, ಕಲಾ ಕಲಶ ಅಭಿಷೇಕ, ನಂತರ ಪಂಚಾಮೃತ ಅಭಿಷೇಕ, ಅಲಂಕಾರ, ಗಣಪತಿ ಪೂಜೆ. ಅಧಿದೇವತೆಗಳು– ಮಹಾಲಕ್ಷ್ಮೀ ಪೂಜೆ, ನಾರಾಯಣ ಪೂಜೆ, ಓಂಕಾರೇಶ್ವರ ಪೂಜೆ, ದುರ್ಗಾಬದೇವಿ ಪೂಜೆ. ಉಪದೇವತೆಗಳು– ನವಗ್ರಹ ಪೂಜೆ, ಆಂಜನೇಯ ಪೂಜೆ, ಚಂಡಿಕೇಶ್ವರ ಪೂಜೆ, ಕೋದಂಡರಾಮ ಪೂಜೆ, ಪದ್ಮಾವತಿ ಸಮೇತ ವೆಂಕಟೇಶ್ವರ ಪೂಜೆ, ಮಹಾಮೃತ್ಯುಂಜಯ ಪೂಜೆ, ಬ್ರಹ್ಮ, ವಿಷ್ಣು, ಮಹೇಶ್ವರ ಸಪತ್ನೀ ಸಮೇತ ಪೂಜೆ, ದುರ್ಗಾದಿ ಸಾದ್ಗುಣ್ಯ ಪೂಜೆ, ಎಲ್ಲ ದೇವತೆ ಪೂಜಾ ನಂತರ ಹೋಮ, ಮಹಾ ಬಲಿ, ಪೂರ್ಣಾಹುತಿ, ಮಂಗಳಾರತಿ, ಪ್ರಧಾನ ದೇವರಿಗೆ ಕಲಶ ಅಭಿಷೇಕ, ಪ್ರೋಕ್ಷಣೆ, ವಿಶೇಷ ಪೂಜೆ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರದಾನ ವಿನಿಯೋಗ, ಸ್ಥಳ: ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್, ಬೃಂದಾವನ ಬಡಾವಣೆ.

ಮೈಸೂರು ಮಿತ್ರ
ಬುಧವಾರ 17 ಜೂನ್ 2026

ಮೈಸೂರಿನಲ್ಲಿ ಕಾನೂನುಬಾಹಿರ ಬಿವೈಒಬಿ– BYOB ಹಾವಳಿಯಿಂದ
ಅಧಿಕಾರಿಗಳಿಗೆ ದಿನವೂ ಹಬ್ಬ! ಸರ್ಕಾರಕ್ಕೆ ಭಾರೀ ಖೋತಾ!!

- ಲೈಸೆನ್ಸ್ ಇಲ್ಲದೆಯೂ ಮದ್ಯ ಪೂರೈಕೆ, ಸೇವನೆಗೆ ಅವಕಾಶ
- ಬೆಲೆ ಕಡಿಮೆ, ಜಿಎಸ್‌ಟಿ ಇಲ್ಲ; ಅಗ್ಗದ 'ಮಜಾ'ಕ್ಕೆ ಮುಗಿ ಬೀಳುವ ಮದ್ಯಪ್ರಿಯರು
- ಮೈಸೂರಾದ್ಯಂತ ರಾಜಾರೋಷವಾಗಿ ನಡೆಯುತ್ತಿರುವ ದಂಧೆ

ಮೈಸೂರು, ಜೂ.16(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಪಬ್‌ನಲ್ಲಿ ನಿನ್ನೆ ನಡೆದ ಅಗ್ನಿ ಅವಘಡದಿಂದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಕ್ರಮವಾಗಿ ಅವ್ಯಾಹತವಾಗಿ ನಡೆಯುತ್ತಿರುವ ಬಿವೈಒಬಿ (ನಿಮ್ಮ ಸ್ವಂತ ಮದ್ಯವನ್ನು ತನ್ನಿ– Bring Your Own Booze or Bring your own Liquor) ಒಂದು ರೀತಿಯ ದಂಧೆ ವ್ಯಾಪಕವಾಗಿರುವುದು ಬಹಿರಂಗವಾಗಿದೆ.

ಯಾವುದೇ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಮದ್ಯ ಸೇವನೆ ಅಥವಾ ಮದ್ಯ ಪೂರೈಕೆಗೆ ಕಡ್ಡಾಯವಾಗಿ ಅಬಕಾರಿ ಲೈಸೆನ್ಸ್ ಬೇಕೇ ಬೇಕು. ಆದರೆ ಮೈಸೂರು ನಗರದಲ್ಲಿ ಅದರಲ್ಲೂ ವಿಶೇಷವಾಗಿ ರಿಂಗ್ ರಸ್ತೆ ಉದ್ದಕ್ಕೂ ಅಕ್ಕ ಪಕ್ಕದಲ್ಲಿ ಇರುವ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಯಾವುದೇ ಅಬಕಾರಿ ಲೈಸೆನ್ಸ್ ಇಲ್ಲದೆ ಮದ್ಯ ಸೇವನೆ ಹಾಗೂ ಮದ್ಯ ಪೂರೈಕೆ ರಾಜಾರೋಷವಾಗಿ ನಡೆಯುತ್ತಿದೆ.

ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರು ಪ್ರತಿ ವರ್ಷ ಲೈಸೆನ್ಸ್ ಶುಲ್ಕ ಪಾವತಿ ಮಾಡಬೇಕು. ಈ ಮೊದಲು ಇದ್ದ ಲೈಸೆನ್ಸ್ ಶುಲ್ಕವನ್ನು ಸರ್ಕಾರ ಈಗ 8ರಿಂದ 15 ಲಕ್ಷಕ್ಕೆ ಹೆಚ್ಚಳ ಮಾಡಿದೆ. ಆದರೆ ಬಿವೈಒಬಿ ಪರಿಕಲ್ಪನೆಯಡಿ ಮೈಸೂರಿನ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಇದ್ಯಾವುದೇ ಲೈಸೆನ್ಸ್ ಹಾಗೂ ಲೈಸೆನ್ಸ್ ಶುಲ್ಕದ ಗೋಜು ಇಲ್ಲ.

ಯಾವುದೇ ಲೈಸೆನ್ಸ್ ಪಡೆಯದೆ, ಲೈಸೆನ್ಸ್ ಶುಲ್ಕ ಪಾವತಿಸದೆ ರಾಜಾರೋಷವಾಗಿ ಮದ್ಯ ಪೂರೈಕೆ, ಸೇವನೆಗೆ ಅವಕಾಶ ಕಲ್ಪಿಸಲಾಗುತ್ತಿದೆ. ಗ್ರಾಹಕರು ತಾವು ಖರೀದಿಸಿದ ಸ್ವಂತ ಮದ್ಯದ ಬಾಟಲ್‌ಗಳನ್ನು ಇಂತಹ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ತಂದು ಸೇವನೆ ಮಾಡುತ್ತಿದ್ದಾರೆ. ಆದರೆ ಲೈಸೆನ್ಸ್ ಪಡೆಯದ ಇಂತಹ ಸ್ಥಳಗಳಲ್ಲಿ ಮದ್ಯ ಸೇವನೆ ಕಾನೂನುಬಾಹಿರ. ಈ ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಲೆಕ್ಕಿಸದೆ ರಾಜಾರೋಷವಾಗಿ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಬಿವೈಒಬಿ ಪರಿಕಲ್ಪನೆಯಡಿ ಮದ್ಯ ಖರೀದಿಸಿ ಮನೆಯಲ್ಲಿ ಸೇವನೆ ಮಾಡಬಹುದು. ಬೇಡವೆಂದವರು ಇಂತಹ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಹೋದರೆ ಅಲ್ಲೇ ಊಟದ ಜೊತೆಗೆ ಮದ್ಯ ಕೂಡ ಪೂರೈಕೆ ಮಾಡಲಾಗುತ್ತದೆ.

ಇಂತಹ ಹೋಟೆಲ್, ರೆಸ್ಟೋರೆಂಟ್ ಸನಿಹದಲ್ಲಿ ಸಾಕಷ್ಟು ವೈನ್ ಸ್ಟೋರ್‌ಗಳಿವೆ. ಈ ವೈನ್‌ಸ್ಟೋರ್‌ನವರು ಇಲ್ಲಿಗೆ ಮದ್ಯ ಪೂರೈಕೆ ಮಾಡುತ್ತಾರೆ. ನಿಗದಿತ ದರಕ್ಕಿಂತ ಹೆಚ್ಚು ಹಣ ನೀಡುವ ಕಾರಣ ವೈನ್‌ಸ್ಟೋರ್‌ನವರು ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಮದ್ಯ ಸರಬರಾಜು ಮಾಡಲು ಸದಾ ಸಜ್ಜಾಗಿರುತ್ತಾರೆ.

ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋದರೆ ಜಿಎಸ್‌ಟಿ, ಹಾಳು–ಮೂಳು ಎಂದು ದುಬಾರಿ ಹಣ ಭರಿಸಬೇಕಾಗುತ್ತದೆ. ಆದರೆ ಇಂತಹ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಯಾವ ಗೋಜು ಇಲ್ಲ. ಆದ ಕಾರಣ ಬಹಳಷ್ಟು ಜನರು ಇಂತಹ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಮಾಮೂಲಿ ಗ್ರಾಹಕರಾಗಿದ್ದಾರೆ.

ಈ ಅವ್ಯವಹಾರ ಸಿದ್ದರಾಮಯ್ಯನವರಿಗೆ ತಿಳಿದಿರಲಿಲ್ಲವೆ...!

ಮೊನ್ನೆ ಮೊನ್ನೆಯವರೆಗೂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದರು. ಅವರಿಗೆ ತಮ್ಮ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ ಅಬಕಾರಿ ಅವ್ಯವಹಾರ ಅವರ ಗಮನಕ್ಕೆ ಬಂದಿರಲಿಲ್ಲವೆ. ಈ ಪ್ರಶ್ನೆ ಈಗ ಎದುರಾಗಿದೆ. ವಾರಕ್ಕೆ ಎರಡು ಬಾರಿ ಸಿದ್ದರಾಮಯ್ಯ ಅವರು ಮೈಸೂರಿಗೆ ಬರುತ್ತಿದ್ದರು. ಅಬಕಾರಿ ಅವ್ಯವಹಾರ ಮುಖ್ಯಮಂತ್ರಿಗಳ ಗಮನಕ್ಕೆ ಬಂದರೆ ತಮ್ಮ ಕೆಲಸಕ್ಕೆ ಕುತ್ತು ಬರುತ್ತದೆ ಎಂಬ ಕನಿಷ್ಠ ಭಯ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಇರಲಿಲ್ಲವೆ ಎಂಬ ಪ್ರಶ್ನೆಗಳು ಜನರನ್ನು ಕಾಡುತ್ತಿದೆ. ಹಾಗಾದರೆ ಅಧಿಕಾರಿಗಳಿಗೆ ಯಾರ ಭಯ ಇಲ್ಲವೆ, ಕಾನೂನು ಇವರ ಕಾಲ ಕಸವೆ ಎಂಬ ಅನುಮಾನಗಳು ಕಾಡಿದೆ. ಸುಧಾರಣೆ ತರಲು ಇಂತಹ ಯಾವುದಾದರೊಂದು ದುರ್ಘಟನೆ ನಡೆದು ಅಮಾಯಕರ ಹೆಣಗಳು ಬೀಳಬೇಕೇ?



ಬಿವೈಒಬಿ ಬಗ್ಗೆ ದೂರುಗಳು ಬಂದಿವೆ. ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಕಾನೂನುಬಾಹಿರ ಅವ್ಯವಹಾರ ನಡೆಯುತ್ತಿದೆ. ಇದಕ್ಕೆ ಇನ್ನು ಮುಂದೆ ಕಡಿವಾಣ ಹಾಕಲಾಗುವುದು. ಯಾವುದೇ ಕಾರಣಕ್ಕೂ ಇಂತಹ ಅವ್ಯವಹಾರಕ್ಕೆ ಅವಕಾಶ ನೀಡುವುದಿಲ್ಲ.
–ಡಾ.ಯತೀಂದ್ರ, ನಗರಾಭಿವೃದ್ಧಿ ಸಚಿವ

ಅಗ್ನಿ ಅವಘಡ ಸಂಭವಿಸಿರುವ ಮೈಸೂರಿನ ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಅಂಡ್ ಪಬ್‌ನಲ್ಲಿ ಅಕ್ರಮವಾಗಿ ಗ್ರಾಹಕರಿಗೆ ಮದ್ಯ ಪೂರೈಕೆ ಮಾಡುತ್ತಿದ್ದರು. ಕಳೆದ ತಿಂಗಳು ನಮ್ಮ ಸಿಬ್ಬಂದಿ ದಾಳಿ ಮಾಡಿದ್ದ ವೇಳೆ ಸಿಕ್ಕಿಬಿದ್ದಾಗ 3 ಸಾವಿರ ರೂಪಾಯಿ ದಂಡ ವಿಧಿಸಿ, ಮುಂದೆ ಇಂತಹ ಅಕ್ರಮ ವ್ಯವಹಾರ ನಡೆಸಬಾರದು ಎಂದು ಎಚ್ಚರಿಕೆ ಕೂಡ ನೀಡಲಾಗಿತ್ತು. ಮಾರಾ ರೆಸ್ಟೋಬಾರ್ ಅಂಡ್ ಪಬ್‌ನವರು ಸಿಎಲ್ 9 ಲೈಸೆನ್ಸ್ ಪಡೆದಿದ್ದಾರೆ. ಆದರೆ ರೂಫ್ ಟಾಪ್‌ನಲ್ಲಿ ಗ್ರಾಹಕರಿಗೆ ಮದ್ಯ ಪೂರೈಕೆಗೆ ಯಾವುದೇ ಲೈಸೆನ್ಸ್ ಪಡೆದಿರಲಿಲ್ಲ.
–ನಾಗರಾಜಪ್ಪ, ಅಬಕಾರಿ ಡಿಸಿ, ಮೈಸೂರು ಜಿಲ್ಲೆ

ನಿವೃತ್ತ ಅಬಕಾರಿ ಅಧಿಕಾರಿಗಳ ಬೇನಾಮಿ ಹೆಸರಿನಲ್ಲಿವೆ ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್!

ಮೈಸೂರಿನಲ್ಲಿರುವ ಬಹಳಷ್ಟು ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು ಅಬಕಾರಿ ಇಲಾಖೆಯ ಅಧಿಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳ ಬೇನಾಮಿ ಮಾಲೀಕತ್ವದಲ್ಲಿವೆ! ಮೇಲ್ನೋಟಕ್ಕೆ ಇವುಗಳ ಲೈಸೆನ್ಸ್ ಅಧಿಕೃತವಾಗಿ ಒಬ್ಬರ ಹೆಸರಿನಲ್ಲಿದ್ದರೆ, ವಾಸ್ತವವಾಗಿ ಇದರ ಮಾಲೀಕತ್ವ, ಬಂಡವಾಳ ಹೂಡಿಕೆ ಹಾಗೂ ಲಾಭ ವಹಿವಾಟು ಅಬಕಾರಿ ಅಧಿಕಾರಿಗಳದ್ದಾಗಿರುತ್ತದೆ.

ಅಬಕಾರಿ ಇಲಾಖೆಯ ಅಧಿಕಾರಿಗಳು ಸೇವೆಯಲ್ಲಿ ಇರುವಾಗಲೇ ತಮಗೆ ನಂಬಿಕಾರ್ಹ, ಬೇಕಾದವರ ಹೆಸರಿನಲ್ಲಿ ಬೇನಾಮಿಯಾಗಿ ಲೈಸೆನ್ಸ್ ಮಾಡಿಸಿಕೊಂಡಿರುತ್ತಾರೆ. ಅಧಿಕಾರದಲ್ಲಿ ಇರುವಾಗ ಹಾಗೂ ನಿವೃತ್ತಿ ಹೊಂದಿದಾಗ ಪ್ರತಿ ದಿನ ಖಜಾನೆ ತುಂಬುವ ಇಂತಹ ವೈನ್ ಸ್ಟೋರ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್‌ಗಳೇ ಇವರ ಕುಟುಂಬದ ಆಸ್ತಿಗಳಾಗಿವೆ.



ಹೆಸರಿಗೆ ಮಿಲ್ಟ್ರಿ ಹೋಟೆಲ್, ಒಳ ಹೊಕ್ಕರೆ ಮದ್ಯ ಸೇವನೆ

ಮೈಸೂರಿನಲ್ಲಿ ಮಿಲ್ಟ್ರಿ ಹೋಟೆಲ್ ಎಂದು ಬೋರ್ಡ್ ಹಾಕಿಕೊಂಡಿರುತ್ತಾರೆ. ಆದರೆ ಒಳಗೆ ಹೋದರೆ ಪ್ರತಿ ಟೇಬಲ್ ಮೇಲೆ ಬಾಟಲ್ ಜೋಡಿಸಿಕೊಂಡು ಮದ್ಯದ ನಶೆಯಲ್ಲಿ ಹರಟುತ್ತಿರುವುದು ಕಂಡು ಬರುತ್ತದೆ. ನಾನ್‌ವೆಜ್ ಹೋಟೆಲ್‌ಗಳಲ್ಲಿ ಇಂತಹದ್ದು ಮಾಮೂಲು. ಮಾಂಸಾಹಾರಿ ಹೋಟೆಲ್‌ಗಳ ಮದ್ಯ ಸೇವನೆಗೆ ಅವಕಾಶ ನೀಡಿದರೆ ಅವರಿಗೆ ದುಪ್ಪಟ್ಟು ವ್ಯಾಪಾರ–ವಹಿವಾಟು. ಕೆಲವೆಡೆ ಅವರೇ ಅನಧಿಕೃತವಾಗಿ ಮದ್ಯ ಸಂಗ್ರಹಿಸಿ ಗ್ರಾಹಕರಿಗೆ ಪೂರೈಸುತ್ತಿದ್ದಾರೆ. ಇಲ್ಲದಿದ್ದರೆ ಪೂರೈಕೆಗೆ 'ಏಜೆಂಟ್' ಇಟ್ಟುಕೊಂಡಿದ್ದಾರೆ. ಮತ್ತೊಂದೆಡೆ ವೈನ್ ಸ್ಟೋರ್‌ನವರು ಸುತ್ತಮುತ್ತಲಿನ ಮಿಲ್ಟ್ರಿ ಹೋಟೆಲ್‌ಗಳಿಗೆ ಮದ್ಯವನ್ನು ರಾಜಾರೋಷವಾಗಿ ಸರಬರಾಜು ಮಾಡುತ್ತಾರೆ. ಇದರಿಂದ ವೈನ್ ಸ್ಟೋರ್‌ನವರಿಗೂ ಲಾಭ, ಮಿಲ್ಟ್ರಿ ಹೋಟೆಲ್‌ನವರಿಗೂ ಲಾಭವಾಗಿದೆ.

ಅಬಕಾರಿ ಅಧಿಕಾರಿ, ಪೊಲೀಸರ ಕಿಸೆಗೆ 'ಮಾಮೂಲು'

ಮೈಸೂರಿನಲ್ಲಿ ಬಿವೈಒಬಿ ಪರಿಕಲ್ಪನೆಯ ಅಕ್ರಮ ಮದ್ಯ ಸೇವನೆ ಹಾಗೂ ಮದ್ಯ ಮಾರಾಟ ಅಬಕಾರಿ ಅಧಿಕಾರಿಗಳು ಹಾಗೂ ಪೊಲೀಸರಿಗೆ ಚೆನ್ನಾಗಿಯೇ ತಿಳಿದಿದೆ. ಆದರೆ 'ಮಾಮೂಲು' ಕಿಸೆಗೆ ಸೇರುವ ಕಾರಣ ಗೊತ್ತಿದ್ದೂ ಗೊತ್ತಿಲ್ಲದವರಂತೆ ಜಾಣ ಮೌನ–ಕುರುಡು ವಹಿಸಿದ್ದಾರೆ.

ಮೈಸೂರಿನ ರಿಂಗ್ ರಸ್ತೆ ಮಾತ್ರವಲ್ಲದೆ ವಿಜಯನಗರ, ವಿವಿ ಮೊಹಲ್ಲಾ, ಕಾಳಿದಾಸ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಅದರಲ್ಲೂ ನಾನ್‌ವೆಜ್ ಹೋಟೆಲ್‌ಗಳಲ್ಲಿ ಬಿವೈಒಬಿ ಪರಿಕಲ್ಪನೆಯಡಿ ಮದ್ಯ ಸೇವನೆ, ಪೂರೈಕೆ ರಾಜಾರೋಷವಾಗಿ ನಡೆಯುತ್ತಿದೆ.

ರಾತ್ರಿ 11 ಗಂಟೆಗೆ ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್ ಬಾಗಿಲು ಹಾಕಬೇಕೆಂಬ ಆದೇಶವಿದೆ. ಆದರೆ ತಡ ರಾತ್ರಿವರೆಗೆ ಹಾಗೂ ಕೆಲವು ಕಡೆ ಮುಂಜಾನೆವರೆಗೂ ರಾಜಾರೋಷವಾಗಿ ವ್ಯವಹಾರ ನಡೆಯುತ್ತಿದೆ. ಪೊಲೀಸರಿಗೆ ಇದೂ ತಿಳಿದಿದ್ದರೂ ಮಾಮೂಲು ಸಿಗುವ ಕಾರಣ ಇತ್ತ ತಲೆ ಕೂಡ ಹಾಕುವುದಿಲ್ಲ.

ಜನರು, ರಾತ್ರಿ ಊಟ ಮಾಡುವ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳನ್ನು ಪೊಲೀಸರು ಬಾಗಿಲು ಹಾಕಿಸುತ್ತಾರೆ. ಆದರೆ ರಾತ್ರಿ 11ರ ನಂತರವೂ ಅಕ್ರಮ ವ್ಯವಹಾರ ನಡೆಸುವ ಬಾರ್ ಅಂಡ್ ರೆಸ್ಟೋರೆಂಟ್‌ನವರಿಗೆ ಮಾತ್ರ ಯಾವುದೇ ರೀತಿಯ ನಿರ್ಬಂಧ ಹಾಕುತ್ತಿಲ್ಲ ಎಂಬ ವ್ಯಾಪಕ ದೂರು ಮೊದಲಿಂದಲೂ ಇದೆ.





ಬಿವೈಒಬಿ ಬಗ್ಗೆ ಇನ್ಸ್ಟಾಗ್ರಾಂನಲ್ಲಿ ಪೋಸ್ಟ್

ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು ನಿಯಮ ಬಾಹಿರ ಬಿವೈಒಬಿ ಬಗ್ಗೆ ಇನ್ಸ್ಟಾಗ್ರಾಂನಲ್ಲಿ ಯಾವ ಅಂಜಿಕೆ ಇಲ್ಲದೆ ಪ್ರಚಾರ ಮಾಡುತ್ತಿವೆ. ಅಲ್ಲದೆ ಮದ್ಯದ ಕಾಂಪ್ಲಿಮೆಂಟರಿ ನೀಡುವುದಾಗಿಯೂ ಆಮಿಷ ತೋರಲಾಗುತ್ತದೆ. ಮದ್ಯದ ಬಗ್ಗೆ ಸಾರ್ವಜನಿಕವಾಗಿ ಯಾವುದೇ ರೀತಿಯಲ್ಲೂ ಪ್ರಚಾರ ಮಾಡಬಾರದೆಂದು ಕಟ್ಟುನಿಟ್ಟಿನ ಕಾನೂನು ಇದೆ. ಆದರೆ ಇದಕ್ಕೆ ಇವರು ಮಾತ್ರ ಡೋಂಟ್ ಕೇರ್! ಇತ್ತೀಚಿಗೆ ಸೋಷಿಯಲ್ ಮೀಡಿಯಾ ವೇಗವಾಗಿ ಜನರನ್ನು ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ ಅಕ್ರಮ ವ್ಯಾಪಾರಕ್ಕೆ ಸೋಷಿಯಲ್ ಮೀಡಿಯಾವನ್ನು ದುರುಪಯೋಗ ಮಾಡಿಕೊಂಡು, ಅಧಿಕ ಲಾಭ ಮಾಡುವ ಹಾವಳಿ ಹೆಚ್ಚಾಗಿದೆ.



ವೈನ್ ಸ್ಟೋರ್ ಪಕ್ಕದಲ್ಲೆ ಮದ್ಯ ಸೇವನೆಗೆ ಅವಕಾಶ

ಮೈಸೂರಿನಲ್ಲಿ ನಾಮಕಾವಸ್ತೆಗೆ ಸಿಎಲ್ 2 ಲೈಸೆನ್ಸ್‌ವುಳ್ಳ ವೈನ್ ಸ್ಟೋರ್‌ಗಳು ಕಣ್ಣಿಗೆ ಕಾಣಿಸುತ್ತವೆ. ಆದರೆ ವೈನ್ ಸ್ಟೋರ್ ಪಕ್ಕದಲ್ಲೇ ಖಾಲಿ ಮಳಿಗೆ ಇಲ್ಲವೆ ಸಣ್ಣ ಶೆಡ್‌ನಲ್ಲಿ ಮದ್ಯ ಸೇವನೆ ಜೋರಾಗಿರುತ್ತದೆ. ಬಹುತೇಕ ಮದ್ಯಪ್ರಿಯರು ವೈನ್ ಸ್ಟೋರ್‌ನಲ್ಲಿ ಮದ್ಯ ಖರೀದಿಸಿದ ನಂತರ ಇಂತಹ ಶೆಡ್‌ಗೆ ಹೋಗಿ ಮದ್ಯ ಹೀರುತ್ತಾರೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ಪ್ಯಾಕ್ ಮಾಡಿದ ಮದ್ಯ ಮಾರಾಟ ಮಾತ್ರ ಮಾಡಬೇಕೆಂಬ ನಿಯಮ ಇದ್ದರೂ ಪಕ್ಕದಲ್ಲೇ ಮದ್ಯ ಸೇವನೆಗೂ ವೈನ್ ಸ್ಟೋರ್‌ನವರು ಅವಕಾಶ ನೀಡುತ್ತಿದ್ದಾರೆ.

ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋದರೆ ಜಿಎಸ್‌ಟಿ ಸೇರಿ ದುಬಾರಿ ಪಾವತಿ ಮಾಡಬೇಕು. ಆದರೆ ಇಲ್ಲಿ ಕಡಿಮೆ ಬೆಲೆ ಹಾಗೂ ತೆರಿಗೆ ಗೋಜು ಇಲ್ಲವೆಂದು ಮದ್ಯಪ್ರಿಯರು ವೈನ್ ಸ್ಟೋರ್‌ನಲ್ಲಿ ಮದ್ಯ ಖರೀದಿಸಿ, ಪಕ್ಕದ ಶೆಡ್‌ನಲ್ಲಿ ಮದ್ಯ ಸೇವಿಸಿ ನಶೆಯಲ್ಲಿ ತೇಲಾಡುತ್ತಾರೆ. ಇಂತಹ ಕಡೆ ಪ್ರತಿ ದಿನ ಗಲಾಟೆ. ದಾರಿಹೋಕರು ಹಾಗೂ ಮಹಿಳೆಯರಿಗೆ ಮುಜುಗರ. ಇದೆಲ್ಲಾ ಅಬಕಾರಿ ಹಾಗೂ ಪೊಲೀಸರಿಗೂ ಗೊತ್ತು. ಆದರೆ ಮೊದಲೇ ಹೇಳಿದಂತೆ 'ಮಾಮೂಲು' ಮೌನ ವಹಿಸುವಂತೆ ಮಾಡಿದೆ.

ಮನೆ ಬಾಡಿಗೆ, ಲೀಸ್‌ಗೆ ನೀಡಿದಂತೆ ಲೈಸೆನ್ಸ್ ನೀಡಿದ್ದಾರೆ

ನಿವೇಶನ, ಮನೆಯನ್ನು ಬಾಡಿಗೆ ಹಾಗೂ ಲೀಸ್‌ಗೆ ನೀಡಿದಂತೆ ವೈನ್ಸ್ ಸ್ಟೋರ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ಲೈಸೆನ್ಸ್ ಅನ್ನು ಮಾಲೀಕರು ಬಾಡಿಗೆ ಹಾಗೂ ಲೀಸ್‌ಗೆ ನೀಡಿದ್ದಾರೆ. ವೈನ್ ಸ್ಟೋರ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ಬಹಳಷ್ಟು ವ್ಯವಹಾರಸ್ಥರು ನಿಜವಾದ ಮಾಲೀಕರಲ್ಲ. ಯಾರದೋ ಹೆಸರಿನ ಲೈಸೆನ್ಸ್ ಅನ್ನು ಬಾಡಿಗೆ ಇಲ್ಲವೆ ಲೀಸ್‌ಗೆ ಪಡೆದು ಮದ್ಯ ಮಾರಾಟ ಮಾಡುತ್ತಿದ್ದಾರೆ.

ನಾಮಕಾವಸ್ಥೆಗೆ ಮಾಲೀಕರ ಫೋಟೋ ಇರುವ ಲೈಸೆನ್ಸ್ ಫಲಕ ಅಳವಡಿಸಿರುತ್ತಾರೆ. ಆದರೆ ಅದರ ನಿಜವಾದ ಮಾಲೀಕರು ಬೇರೆಯವರಾಗಿರುತ್ತಾರೆ. ಪ್ರತಿ ದಿನ ಅಥವಾ ತಿಂಗಳಿಗೆ ಇಷ್ಟೆಂದು ಹಣ ಕೊಟ್ಟು ವ್ಯವಹಾರ ನಡೆಸುತ್ತಾರೆ. ಆದರೆ ಅಬಕಾರಿ ಇಲಾಖೆ ನಿಯಮಾವಳಿಯಲ್ಲಿ ಅವಕಾಶ ಇಲ್ಲ. ಹಾಗಾದರೆ ಇದನ್ನು ಪತ್ತೆ ಹಚ್ಚುವರ್‍ಯಾರು? ಕ್ರಮ ಕೈಗೊಳ್ಳುವರ್‍ಯಾರು?

ಸರ್ಕಾರಕ್ಕೆ ಹೋಗಬೇಕಾದ ಆದಾಯ ಅಧಿಕಾರಿಗಳ ಕಿಸೆ ಸೇರುತ್ತಿದೆ

ವೈನ್ ಸ್ಟೋರ್ ಮತ್ತು ಬಾರ್ ಅಂಡ್ ರೆಸ್ಟೋರೆಂಟ್ ಲೈಸೆನ್ಸ್ ಪಡೆಯಲು ಹಾಗೂ ನವೀಕರಣಕ್ಕೆ ಪ್ರತಿ ವರ್ಷ ಲಕ್ಷ ಲಕ್ಷ ಶುಲ್ಕ ಪಾವತಿ ಮಾಡಬೇಕು. ಹಾಗಾಗಿ ಇದರ ಗೋಜೇ ಬೇಡವೆಂದು ಬಹಳಷ್ಟು ಪ್ರಭಾವಿಗಳು ಮದ್ಯದ ಲೈಸೆನ್ಸ್ ಪಡೆಯದೆಯೇ ಬರೀ ಹೋಟೆಲ್ ಹಾಗೂ ರೆಸ್ಟೋರೆಂಟ್ ತೆರೆದು, ಅಲ್ಲಿ ಮದ್ಯ ಮಾರಾಟ, ಪೂರೈಕೆ ಮಾಡುತ್ತಾರೆ. ಲಾಭದ ಸ್ವಲ್ಪ ಭಾಗವನ್ನು ಅಬಕಾರಿ ಅಧಿಕಾರಿಗಳು, ಪೊಲೀಸರು ಹಾಗೂ ನಗರ ಪಾಲಿಕೆಯವರಿಗೆ ನೀಡುತ್ತಾರೆ. ಹಾಗಾಗಿ ಸರ್ಕಾರಕ್ಕೆ ಬರಬೇಕಾದ ಆದಾಯ ಈಗ ಅಧಿಕಾರಿಗಳ ಪಾಲಾಗುತ್ತಿದೆ. ಈ ಬಹಿರಂಗ ಸತ್ಯ ಆಡಳಿತ ನಡೆಸುವವರಿಗೂ ತಿಳಿದಿದೆ. ಇಂತಹ ಅಧಿಕಾರಿಗಳ ವರ್ಗಾವಣೆ ದಂಧೆಯಿಂದ ಕೋಟಿ ಕೋಟಿ ಹಣ ಬರುವ ಕಾರಣ ಅವರು ಕೂಡ ಜಾಣ ಮೌನ ವಹಿಸಿದ್ದಾರೆ.

ಕೊಡಗಿನಲ್ಲಿ ಆನೆ-ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಿ
ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ ವನ ಯೋಜನೆ ಜಾರಿಗೆ ಕ್ರಮ ವಹಿಸಿ
ಕೇಂದ್ರ ಅರಣ್ಯ ಸಚಿವರಲ್ಲಿ ಸಂಸದ ಯದುವೀರ್ ಒಡೆಯರ್ ಮನವಿ

ಮೈಸೂರು, ಜೂ.16(ಪಿಎಂ)– ಕೊಡಗಿನಲ್ಲಿ ಆನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಹಾಗೂ ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ ವನ ಯೋಜನೆ ಜಾರಿಗೊಳಿಸಬೇಕೆಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು.

ಕೇಂದ್ರ ಸಚಿವರನ್ನು ಭೇಟಿ ಮಾಡಿದ ಸಂಸದರು, ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಈ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆನೆಗಳು ಕೃಷಿ ಭೂಮಿ ಮತ್ತು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿರುವ ಘಟನೆಗಳು ನಿರಂತರವಾಗಿ ಹೆಚ್ಚುತ್ತಿವೆ. ಇದು ಜಿಲ್ಲೆಯ ಜನರ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಚಿವರ ಗಮನಕ್ಕೆ ತಂದರು.

ಆನೆಗಳ ದಾಳಿಯಿಂದ ಮಾನವ ಜೀವಹಾನಿ, ಗಾಯ, ಬೆಳೆ ನಷ್ಟ, ಆಸ್ತಿ ಹಾನಿ ಮತ್ತು ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ಪ್ರಮುಖವಾಗಿ ಅರಣ್ಯದಂಚಿನ ಗ್ರಾಮಗಳಲ್ಲಿ ವಾಸಿಸುವ ರೈತರು, ತೋಟಗಾರರು ಮತ್ತು ಕಾರ್ಮಿಕರು ಈ ಸಮಸ್ಯೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಆನೆ–ಮಾನವ ಸಂಘರ್ಷವನ್ನು ಕಡಿಮೆಗೊಳಿಸಲು ಸಮಗ್ರ ಹಾಗೂ ದೀರ್ಘಕಾಲೀನ ಕಾರ್ಯತಂತ್ರವನ್ನು ರೂಪಿಸಲು ಕೇಂದ್ರ ಸರ್ಕಾರದ ನೆರವು ಅಗತ್ಯವಿದೆ. ಆನೆ ತಡೆಗೋಡೆಗಳ ಬಲವರ್ಧನೆ, ಸೌರ ಬೇಲಿ ವ್ಯವಸ್ಥೆ, ಆನೆಗಳ ಚಲನವಲನದ ವೈಜ್ಞಾನಿಕ ಮೇಲ್ವಿಚಾರಣೆ, ಮುನ್ನೆಚ್ಚರಿಕೆ ವ್ಯವಸ್ಥೆ, ಅರಣ್ಯ ವಾಸಸ್ಥಳಗಳ ಸುಧಾರಣೆ, ತ್ವರಿತ ಪ್ರತಿಕ್ರಿಯಾ ತಂಡಗಳ ರಚನೆ ಹಾಗೂ ಪೀಡಿತ ಕುಟುಂಬಗಳಿಗೆ ಮತ್ತು ರೈತರಿಗೆ ಸೂಕ್ತ ಪರಿಹಾರ ನೀಡುವ ವ್ಯವಸ್ಥೆಯನ್ನು ಬಲಪಡಿಸುವಂತೆ ಸಂಸದರು ಕೋರಿದರು.



ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು.

ವನ್ಯಜೀವಿ ಸಂರಕ್ಷಣೆ ಅತ್ಯಂತ ಮುಖ್ಯವಾದರೂ ಅರಣ್ಯ ಅಂಚಿನ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವ ಮತ್ತು ಜೀವನೋಪಾಯದ ರಕ್ಷಣೆಯೂ ಅಷ್ಟೇ ಮಹತ್ವದ್ದಾಗಿದೆ ಎಂದು ಅವರು ಒತ್ತಿ ಹೇಳಿದರು.

ತಿಪ್ಪಯ್ಯನ ಕೆರೆ: ಸಂಸದರು ಇದೇ ಸಂದರ್ಭದಲ್ಲಿ ಮೈಸೂರಿನ ಹೊರ ವರ್ತುಲ ರಸ್ತೆಯ ಸರ್ದಾರ್ ವಲ್ಲಭ ಭಾಯಿ ಪಟೇಲ್ ನಗರದ ಬಳಿ ಇರುವ ತಿಪ್ಪಯ್ಯನ ಕೆರೆಯನ್ನು ನಗರ ವನ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಪ್ರತ್ಯೇಕ ಮನವಿಯನ್ನೂ ಸಲ್ಲಿಸಿದರು.


ತಿಪ್ಪಯ್ಯನ ಕೆರೆ ಇಂದು ಮೈಸೂರಿನ ಪ್ರಮುಖ ಪರಿಸರ, ಜೀವವೈವಿಧ್ಯ ಮತ್ತು ಮನರಂಜನಾ ತಾಣವಾಗಿ ರೂಪುಗೊಂಡಿದ್ದು, ನಗರ ನಿವಾಸಿಗಳಿಗೆ ಹಸಿರು ವಾತಾವರಣವನ್ನು ಒದಗಿಸುವುದರ ಜೊತೆಗೆ ಅನೇಕ ಪಕ್ಷಿಗಳು ಮತ್ತು ಇತರ ಜೀವಿಗಳ ಆಶ್ರಯ ತಾಣವಾಗಿಯೂ ಬೆಳೆಯುತ್ತಿದೆ ಎಂದು ಸಂಸದರು ವಿವರಿಸಿದರು.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಮಹತ್ವಾಕಾಂಕ್ಷೆ ಯೋಜನೆಯಾದ ನಗರ ವನ ಯೋಜನೆಯು ನಗರ ಪ್ರದೇಶಗಳಲ್ಲಿ ಹಸಿರು ವನಗಳನ್ನು ನಿರ್ಮಿಸಿ ಪರಿಸರ ಸಮತೋಲನ ಕಾಪಾಡುವುದು, ಜೀವವೈವಿಧ್ಯವನ್ನು ವೃದ್ಧಿಸುವುದು ಹಾಗೂ ನಾಗರಿಕರಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ತಿಪ್ಪಯ್ಯನ ಕೆರೆ ನಗರ ವನ ಯೋಜನೆ ಜಾರಿಗೆ ಅತ್ಯಂತ ಸೂಕ್ತ ಸ್ಥಳವಾಗಿದ್ದು, ಈ ಯೋಜನೆಗೆ ಅಗತ್ಯ ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡುವಂತೆ ಸಚಿವಾಲಯವನ್ನು ಕೋರಿದರು.

ಈ ಯೋಜನೆ ಜಾರಿಯಾದಲ್ಲಿ ಮೈಸೂರಿನ ನಗರ ಹಸಿರು ವಲಯ ವಿಸ್ತರಣೆಯಾಗುವ ಜೊತೆಗೆ ಪರಿಸರ ಸಂರಕ್ಷಣೆ, ಜೀವವೈವಿಧ್ಯ ಅಭಿವೃದ್ಧಿ, ವಿದ್ಯಾರ್ಥಿಗಳಿಗೆ ಪ್ರಕೃತಿ ಅಧ್ಯಯನ ಅವಕಾಶ ಹಾಗೂ ಸಾರ್ವಜನಿಕರಿಗೆ ಉತ್ತಮ ಆರೋಗ್ಯಕರ ಪರಿಸರ ಒದಗಿಸಲು ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಜನಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಗೆ ಬದ್ಧತೆ: ಮನವಿ ಸಲ್ಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಸಂಸದರು, ಕೊಡಗಿನಲ್ಲಿ ಆನೆ–ಮಾನವ ಸಂಘರ್ಷ ತಡೆ ಮತ್ತು ಮೈಸೂರಿನ ಹಸಿರು ಮೂಲಸೌಕರ್ಯ ಅಭಿವೃದ್ಧಿ ಎರಡರ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದಿಂದ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಹೇಳಿದರು. ಜನರ ಸುರಕ್ಷತೆ, ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಸಮನ್ವಯಗೊಳಿಸುವ ನಿಟ್ಟಿನಲ್ಲಿ ತಾವು ನಿರಂತರವಾಗಿ ಪ್ರಯತ್ನಿಸುತ್ತಿರುವುದಾಗಿ ಅವರು ತಿಳಿಸಿದರು.

ಸಂಸದರ ಮನವಿಗಳನ್ನು ಸಕಾರಾತ್ಮಕವಾಗಿ ಪರಿಗಣಿಸುವುದಾಗಿ ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಭರವಸೆ ನೀಡಿದರು.



ಭೇಟಿ

ಕಾವೇರಿ ನದಿ ನೀರು ಹಂಚಿಕೆ ತೀರ್ಪಿನ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ರಿಟ್ ಅರ್ಜಿಯು ವಿಚಾರಣೆಗೆ ಲಿಸ್ಟ್ ಆಗಿರುವ ಸಂಬಂಧ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಗೋಪಾಲಗೌಡ ಅವರನ್ನು ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರು, ಮಂಗಳವಾರ ಭೇಟಿ ಮಾಡಿದ್ದರು.

ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,
ಗುಂಡ್ಲುಪೇಟೆ– 571111, ಚಾಮರಾಜನಗರ ಜಿಲ್ಲೆ.

ಪ್ರಕಟಣೆ

ಈ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆಯುವ ಚುನಾವಣೆಗೆ ಮತದಾನಕ್ಕೆ ಸಾಲಗಾರರ ಕ್ಷೇತ್ರದ ಅರ್ಹ ಮತ್ತು ಅನರ್ಹ ಕರಡು ಮತದಾರರ ಪಟ್ಟಿ ಸಾಲಗಾರರಲ್ಲದ ಕ್ಷೇತ್ರದ ಅರ್ಹ ಮತ್ತು ಅನರ್ಹ ಕರಡು ಮತದಾರರ ಪಟ್ಟಿಯನ್ನು ಸಂಘದ ಸೂಚನ ಫಲಕದಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ : 30–06–2026ರ ಒಳಗಾಗಿ ಸಂಘದ ವ್ಯವಸ್ಥಾಪಕರಿಗೆ ಅಥವಾ ಸಹಕಾರ ಸಂಘಗಳ ಉಪನಿಬಂಧಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಕಚೇರಿ ಇವರಿಗೆ ಲಿಖಿತವಾಗಿ ದಾಖಲಾತಿಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ಆಕ್ಷೇಪಣೆ ಸಲ್ಲಿಕೆಯಾಗದೇ ಇದ್ದಲ್ಲಿ ಇದನ್ನು ಅಂತಿಮ ಅರ್ಹ ಮತದಾರರ ಪಟ್ಟಿ ಎಂದು ಪರಿಗಣಿಸಿ ಆಡಳಿತ ಮಂಡಳಿ ಚುನಾವಣೆ ನಡೆಸಲಾಗುವುದು ಎಂದು ಸಂಘದ ಸದಸ್ಯರು ತಿಳಿಯುವುದು

ಸಹಿ/– ವ್ಯವಸ್ಥಾಪಕರು
ಪ್ರಾಥಮಿಕ ಸಹಕಾರ ಕೃಷಿ ಮತ್ತು
ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಗುಂಡ್ಲುಪೇಟೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ಹೆಚ್.ಎಸ್.ಆರ್. ಬಡಾವಣೆ, ಸೆಕ್ಟಾರ್ 1, 29 ಬಿ ಮುಖ್ಯರಸ್ತೆ, 9ನೇ ತಿರುವಿನ ರಸ್ತೆ, ಮನೆ ನಂ.331 ರಲ್ಲಿ ವಾಸವಾಗಿರುವ ಗಣೇಶ್ ನಾಗೇಶ್ ರಾವ್ ರವರ ಮಗನಾದ ಅವಿನಾಶ್ ಗಣೇಶ್ ರವರು ಈ ಪ್ರಕಟಣೆಯ ಷೆಡ್ಯೂಲಿನಲ್ಲಿ ಕಾಣಿಸಿರುವ ಸ್ವತ್ತನ್ನು ನೋಂದಣಿ ಖರೀದಿ ಮಾಡಲು ಇಚ್ಛಿಸಿದ್ದು, ಈ ಸ್ವತ್ತಿನ ಬಗ್ಗೆ ಯಾರದಾದರು ಹಕ್ಕು, ತಂಟೆ, ಕ್ಲೇಮು ಅಥವ ತಕರಾರು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಖುದ್ದಾಗಿ ಆಗಲಿ ಅಥವ ನೋಂದಣಿ ಅಂಚೆ ಮೂಲಕವಾಗಲಿ ಮೇಲ್ಕಾಣಿಸಿದ ನನ್ನ ಕಛೇರಿಯ ವಿಳಾಸಕ್ಕೆ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದು ಹಕ್ಕು, ತಂಟೆ, ಕ್ಲೇಮು ಅಥವ ತಕರಾರು ಇಲ್ಲವೆಂದು ತಿಳಿದು ಸ್ವತ್ತನ್ನು ನೋಂದಣಿ ಮಾಡಿಕೊಳ್ಳಲಾಗುತ್ತದೆ. ತಿಳಿಯುವುದು.

ಷೆಡ್ಯೂಲು

1. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲೋಕು, ಹಂಪಾಪುರ ಹೋಬಳಿ, ತೋಟಹಳ್ಳಿ ಗ್ರಾಮದ ಸರ್ವೆ ನಂಬರ್ ಆರು ಹಿಸ್ಸಾ ನಂಬರ್ ಐದು (ಸ.ನಂ.6/5) (ಹಳೆ ನಂಬರು 6/3) ರಲ್ಲಿರುವ ಒಟ್ಟು ವಿಸ್ತೀರ್ಣ ಒಂದು ಎಕರೆ ಮೂವತ್ತೇಳುವರೆ ಗುಂಟೆ (1.37.08.00) ಅಕಾರ್ 2.36 ಪೈಸೆ ವುಳ್ಳ ಖುಷ್ಕಿ ಜಮೀನು ಮಾತ್ರನೇ ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ. 6/3(ಬ್ಲಾಕ್ 1ರ ಜಮೀನು), ಪಶ್ಚಿಮಕ್ಕೆ : ಸರ್ವೆ ನಂ. 6/6/ (ಬ್ಲಾಕ್ 3 ರ ಜಮೀನು), ಉತ್ತರಕ್ಕೆ : ಸರ್ವೆ ನಂ. 6/2 (ಲಾಹಿ 2ರ ಜಮೀನು), ದಕ್ಷಿಣಕ್ಕೆ : ಲಾಸನಂ 5 ರ ಜಮೀನು
2. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲೋಕು, ಹಂಪಾಪುರ ಹೋಬಳಿ, ತೋಟಹಳ್ಳಿ ಗ್ರಾಮದ ಸರ್ವೆ ನಂಬರ್ ಆರು ಹಿಸ್ಸಾ ನಂಬರ್ ಆರು (ಸ.ನಂ. 6/6) (ಹಳೆ ನಂಬರು 6/3) ರಲ್ಲಿರುವ ಒಟ್ಟು ವಿಸ್ತೀರ್ಣ ಒಂದು ಎಕರೆ ಮೂವತ್ತೈದು ಗುಂಟೆ (1.35.00.00) ಅಕಾರ 2.29 ಪೈಸೆ ವುಳ್ಳ ಖುಷ್ಕಿ ಜಮೀನು ಮಾತ್ರವೇ ಇದಕ್ಕೆ ಚೆಕ್ಕುಬಂದಿ : ಪೂರ್ವಕ್ಕೆ : ಸರ್ವೆ ನಂ. 6/5 (ಬ್ಲಾಕ್ ನಂ. 1 ರ ಜಮೀನು), ಪಶ್ಚಿಮಕ್ಕೆ : ವಡೆಯರಹೊಸಹಳ್ಳಿ ಗಡಿ, ಉತ್ತರಕ್ಕೆ : ಸರ್ವೆ ನಂ. 6/2 (ಲಾಹಿ.ನಂ. 2 ರ ಜಮೀನು), ದಕ್ಷಿಣಕ್ಕೆ : ಲಾಸ. ನಂ 5 ರ ಜಮೀನು

Sd/- M.R. SUDHARSHAN,
B.Sc., LL.B., ADVOCATE.
Reg. No.KAR 415/88
#1493, 5th Cross, Sharada Vilas College Road, Krishnamurthypuram,
Mysuru-570 004, Mob : 9591714822
ದಿನಾಂಕ : 16–06–2026

ನಕ್ಕರೆ ಅದೇ ಸ್ವರ್ಗ

ಗಂಡ : ನಮಗೆ ಇಷ್ಟ ಇಲ್ಲದ ಮದುವೆ ಆದರೂ ಸಹ ಏನಾಗುತ್ತೆ ಗೊತ್ತಾ?
ಹೆಂಡ್ತಿ : ಏನಾಗುತ್ತೆ..ನಮಗೆ ಗೊತ್ತಿಲ್ಲದ ಹಾಗೆ ಎರಡು, ಮೂರು ಮಕ್ಕಳು ಆಗಿ ಬಿಡ್ತಾವೆ..!!

ಮೈಸೂರು ಮಿತ್ರ

ಬುಧವಾರ, ಜೂನ್ 17, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಿಮಗಾಗಿ ಮಾಡಿಕೊಂಡ ಕೆಲಸಗಳು ನಿಮ್ಮೊಂದಿಗೆ ಮುಗಿದು ಹೋಗಿ ಬಿಡುತ್ತವೆ. ಆದರೆ, ಇತರರಿಗಾಗಿ ಮಾಡಿದ ಕೆಲಸಗಳು ನಿಮ್ಮ ನಂತರವೂ ಉಳಿದಿರುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ.

ನಿಮ್ಮ ಪತ್ರಗಳು

ಹುಣಸೂರಿನಿಂದ ಮೈಸೂರಿಗೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,



ಹುಣಸೂರಿನಿಂದ ಮೈಸೂರಿಗೆ ಹಾಗೂ ಮೈಸೂರಿನಿಂದ ಹುಣಸೂರಿಗೆ ಪ್ರತಿದಿನ 10000ಕ್ಕೂ ಹೆಚ್ಚು ಸರ್ಕಾರಿ ಹಾಗೂ ಖಾಸಗಿ ನೌಕರರು ಕೆಎಸ್ಆರ್‌ಟಿಸಿ ಬಸ್‌ನಲ್ಲಿ ತಿರುಗಾಡುತ್ತಾರೆ.

ಆರು ತಾಲೂಕುಗಳನ್ನು ಒಳಗೊಂಡ ಹುಣಸೂರು ಉಪ ವಿಭಾಗ ಕೇಂದ್ರವಾಗಿ ರುವುದರಿಂದ ಜಿಲ್ಲಾ ಕೇಂದ್ರವಾಗುವ ಎಲ್ಲಾ ಅರ್ಹತೆಗಳಿದ್ದು, ಅತೀ ಹೆಚ್ಚು ಜನಸಂದಣಿ ಇರುವುದರಿಂದ ಪಿರಿಯಾಪಟ್ಟಣ–ಹುಣಸೂರು ಮಾರ್ಗವಾಗಿ ಮೈಸೂರಿಗೆ ಸಿಟಿ ಬಸ್ಸುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಬೇಕು.

ಮೈಸೂರಿನಿಂದ ಹುಣಸೂರು ಮಾರ್ಗವಾಗಿ ಕುಶಾಲನಗರ–ಮಡಿಕೇರಿ–ಮಂಗಳೂರಿಗೆ ತೆರಳುವ ಬಸ್ಸುಗಳಲ್ಲಿ ಹುಣಸೂರಿಗೆ ಹತ್ತುವ ಪ್ರಯಾಣಿಕರನ್ನು ನೀವು ಹುಣಸೂರಾದರೆ ಹತ್ತಬೇಡಿ ಎಂದು ದಬ್ಬಾಳಿಕೆಯಿಂದ ಇಳಿಸುತ್ತಿರುವ ಪ್ರಸಂಗವು ನಡೆಯುತ್ತಿದೆ. ಈ ಬಗ್ಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಶಾಲಾ–ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಗೂ ಗಾರ್ಮೆಂಟ್ಸ್‌ಗಳಿಗೆ ತೆರಳುವ ಮಹಿಳಾ ಉದ್ಯೋಗಿಗಳು ಸರಿಯಾದ ಸಮಯಕ್ಕೆ ಮೈಸೂರು ಕಡೆಗೆ ಬಸ್ ಇಲ್ಲದೆ, ಒಂದೊಮ್ಮೆ ಮಡಿಕೇರಿ ಕಡೆಯಿಂದ ಬಸ್ಸುಗಳು ಬಂದರೂ ಸಹ ತುಂಬಿ ತುಳುಕುತ್ತಿರುವ ಬಸ್ಸುಗಳಲ್ಲಿ ಹತ್ತಲಾಗದೆ ಅಸಹಾಯಕತೆಯಿಂದ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬಸ್ಸುಗಳ ಅಭಾವದಿಂದಾಗಿ ಅಧಿಕಾರಿಗಳು ಸರಿಯಾದ ಸಮಯಕ್ಕೆ ತಮ್ಮ ಕಾರ್ಯ ಕಲಾಪಗಳಿಗೆ ಬರಲಾಗದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಸರ್ಕಾರ ಸರಿಯಾಗಿ 10 ಗಂಟೆಯ ಒಳಗಡೆ ಕಚೇರಿಗೆ ತಲುಪ ಬೇಕೆಂದು ಕಟ್ಟುನಿಟ್ಟಿನ ಆದೇಶವನ್ನೂ ಮಾಡಿದೆ.

ಆದರೆ, ನೌಕರರು ಎಷ್ಟೇ ಬೇಗ ಬಸ್ ನಿಲ್ದಾಣಕ್ಕೆ ಬಂದು ಕಾದು ನಿಂತರೂ ಸರಿಯಾದ ಸಮಯಕ್ಕೆ ಬಸ್ಸುಗಳಿಲ್ಲದೆ ಗಂಟೆಗಟ್ಟಲೇ ಬಸ್ಸು ನಿಲ್ದಾಣದಲ್ಲಿಯೇ ಆತಂಕದಿಂದ ಕಾಲ ಕಳೆಯುವ ಪರಿಸ್ಥಿತಿ ಇದೆ.

ಶಾಲಾ–ಕಾಲೇಜುಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸರಿಯಾದ ಸಮಯಕ್ಕೆ ಬಸ್ಸು ಸಿಗದೇ ಇರುವ ಕಾರಣ ಪರೀಕ್ಷೆಗಳನ್ನು, ತರಗತಿಗಳನ್ನು ತಪ್ಪಿಸಿಕೊಳ್ಳುವುದು ಹಾಗೂ ಶಿಕ್ಷಕರಿಂದ ಶಿಕ್ಷೆಗೊಳಗಾಗುವುದು ನಡೆಯುತ್ತಲೇ ಬರುತ್ತಿದೆ. ಸ್ಥಳೀಯ ಪ್ರತಿನಿಧಿಗಳಿಗೆ ಇದರ ಬಗ್ಗೆ ಇಚ್ಛಾಶಕ್ತಿ ಕೊರತೆ ಇರುವುದರಿಂದ ಸಾರಿಗೆ ಸಂಸ್ಥೆಗೆ ದೂರುಗಳ ಮೇಲೆ ದೂರುಗಳು ಬರುತ್ತಿವೆ.

ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಇನ್ನು 15 ದಿನಗಳ ಒಳಗಾಗಿ ಹೆಚ್ಚುವರಿ ಬಸ್ ಕಲ್ಪಿಸದೆ ಹೋದರೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಒಳಭಾಗ ದಲ್ಲಿಯೇ ಪ್ರಯಾಣಿಕರೊಂದಿಗೆ ಸೇರಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ.

– ಸತ್ಯಪ್ಪ, ಅಧ್ಯಕ್ಷರು, ಸತ್ಯ ಎಂಎಎಸ್ ಫೌಂಡೇಶನ್, ಹುಣಸೂರು.

ಯಕ್ಷಪ್ರಶ್ನೆ!

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ ಮಾರಾ ರೆಸ್ಟೋಬಾರ್ ಪಬ್ಬಿನಲ್ಲಿ ಸೋಮವಾರ ಭಾರೀ ಅಗ್ನಿ ಅವಘಡ ಸಂಭವಿಸಿದ್ದು ಇಬ್ಬರು ಸಜೀವ ದಹನವಾಗಿದ್ದಾರೆ. ಒಣಹುಲ್ಲು ಮತ್ತು ಬಿದಿರು ಬಳಸಿ ದಕ್ಷಿಣ ಆಫ್ರಿಕಾದ ಮಾರಾ ಜನಾಂಗದ ಶೈಲಿಯಲ್ಲಿ ಈ ರೆಸ್ಟೋಬಾರನ್ನು ಅಲಂಕರಿಸಲಾಗಿತ್ತಂತೆ! (ಮೈಸೂರು ಮಿತ್ರ 16.06.2026)

ಹಬ್ಬದ ಸಮಯದಲ್ಲಿ ಗಣೇಶನ ಮೂರ್ತಿಯನ್ನು ಕೂರಿಸುವ ಮುನ್ನ ನಮ್ಮ ಮೈಸೂರು ನಗರದ ಪೊಲೀಸರು, ನಗರ ಪಾಲಿಕೆ, ವಿದ್ಯುಚ್ಛಕ್ತಿ ಮಂಡಳಿ ಹಾಗೂ ಅಗ್ನಿಶಾಮಕ ಇಲಾಖೆಯ ಅನುಮತಿ ಪಡೆಯುವುದು ಕಡ್ಡಾಯ!

ಗಣೇಶನ ವಿಷಯದಲ್ಲಿ ಇಷ್ಟೊಂದು ಕಟ್ಟುಪಾಡುಗಳಿರುವಾಗ ಮಾರಾ ರೆಸ್ಟೋಬಾರ್ ಪಬ್ ನಿರ್ಮಿಸಲು ಇವರೆಲ್ಲರೂ ಕಣ್ಣುಮುಚ್ಚಿ ಅನುಮತಿ ನೀಡಿದ್ದಾದರೂ ಹೇಗೆ? ಗಣೇಶನಿಗಿರುವ ಕಟ್ಟುಪಾಡುಗಳು ಪಬ್ಬು–ಬಾರುಗಳಿಗೇಕಿಲ್ಲ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ವಿದ್ಯುತ್ ಅವಘಡಕ್ಕೆ ಪಾಲಿಕೆ, ಚೆಸ್ಕಾಂ ನಿರ್ಲಕ್ಷ್ಯವೇ ಕಾರಣ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿಯ ಪಬ್‌ನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಸಜೀವ ದಹನವಾದ ಪ್ರಕರಣದ ಹಿಂದೆ ಪಬ್ ಮಾಲೀಕರ ಹಾಗೂ ಮೈಸೂರು ಮಹಾನಗರ ಪಾಲಿಕೆ, ವಿದ್ಯುತ್ ಸರಬರಾಜು ಇಲಾಖೆಯ ನಿರ್ಲಕ್ಷ್ಯವೇ ಕಾರಣವಾಗಿದ್ದು ಇವರೆಲ್ಲರ ಮೇಲೆ ಪೊಲೀಸ್ ಕ್ರಮದ ಅಗತ್ಯವಿದೆ.

ಅನುಮತಿಯಿಲ್ಲದೇ ರೂಫ್ ಟಾಪ್ ಕಟ್ಟಲು ಕಟ್ಟಡದ ಮಾಲೀಕ ಕಾರಣರಾದರೆ ಕಟ್ಟಡ ಕಟ್ಟುವಾಗ ಪರಿಶೀಲಿಸದೇ ನಂತರ ಸಿಆರ್ ಕೊಟ್ಟ ಪಾಲಿಕೆಯ ನಿರ್ಲಕ್ಷ್ಯವು ಕಾರಣ ವಾಗುತ್ತದೆ. ಕಟ್ಟಡಕ್ಕೆ ಸೂಕ್ತ ಪರವಾನಿಗೆ ಇದೆಯೋ ಇಲ್ಲವೋ ಎಂಬುವುದನ್ನು ಪರಿಶೀಲಿಸದೇ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಚೆಸ್ಕಾಂ ಕೂಡಾ ತನ್ನ ಜವಾಬ್ದಾರಿಯನ್ನು ಮರೆದಿದೆ.

ಜನವಸತಿ ಇರುವಲ್ಲಿ ಪಬ್‌ಗಳಿಗೆ ಪರವಾನಿಗೆಯನ್ನು ನೀಡಿದ ಅಬಕಾರಿ ಇಲಾಖೆಯ ಹೊಣೆಗೇಡಿತನವನ್ನೂ ನಾವು ಮರೆಯುವಂತಿಲ್ಲ.

ನಗರದಲ್ಲಿ 1+3 ಅಂತಸ್ತಿನ ನಂತರ ಇನ್ನೊಂದು ಹಂಗಾಮಿ ರೂಫ್ ಟಾಪ್ ನಿರ್ಮಿಸಿ ಅದನ್ನು ಪಬ್‌ಗಳಿಗೆ ಬಾಡಿಗೆಗೆ ನೀಡುವ ಕಟ್ಟಡದ ಮಾಲೀಕರ ಹಣದಾಸೆ ಇಂತಹ ದುರಂತಗಳಿಗೆ ಕಾರಣವಾಗುತ್ತಿದೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ



ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರ ವಿವಾಹವು **1910**ರ ಜೂನ್ **17**ರಂದು ವಿಜೃಂಭಣೆ ಯಿಂದ ನೆರವೇರಿತು. ಈ ಛಾಯಾಚಿತ್ರದಲ್ಲಿ ಅರಮನೆಯ (ಆಗಿನ್ನೂ ನಿರ್ಮಾಣ ಹಂತದಲ್ಲಿತ್ತು) ಮುಂಭಾಗದಲ್ಲಿ ನಡೆದ 'ಕಾಶಿ ಯಾತ್ರೆ' ಕಾರ್ಯಕ್ರಮದ ದೃಶ್ಯ ಕಾಣಬಹುದು. ವರನ ಎಡಭಾಗದಲ್ಲಿ ಎರಡು ಬೃಹತ್ ಛತ್ರಿಗಳ ನಡುವೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಕಾಣಬಹುದು. ಹಿಂಭಾಗದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾದ ಐದು ಕಮಾನುಗಳುಳ್ಳ ಪ್ರವೇಶ ಮಂಟಪದಿಂದ ಹೊರಬರುತ್ತಿರುವ ಮೈಸೂರು ಲ್ಯಾನ್ಸರ್ಸ್ ಪಡೆಯ ತಂಡವನ್ನು ಕಾಣಬಹುದು.

ನಾಗವಲ್ಲಿ ಶಾಸ್ತ್ರದವರೆಗೆ (ಸಂತಾನಸೌಭಾಗ್ಯದ ಆಶೀರ್ವಾದ ಪಡೆಯಲು ಹಾಗೂ ವಧುವನ್ನು ವರನ ಕುಟುಂಬಕ್ಕೆ ಔಪಚಾರಿಕ ವಾಗಿ ಪರಿಚಯಿಸುವ ಪದ್ಧತಿ) ವಾಸ್ತವವಾಗಿ ವಿವಾಹ ಸಮಾ ರಂಭವು ಜಗನ್ಮೋಹನ ಅರಮನೆಯ ಭವ್ಯ ಸಭಾಂಗಣದಲ್ಲಿ ನೆರವೇರಿತು (**1900**ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿವಾಹಕ್ಕಾಗಿ ಈ ಅರಮನೆಯನ್ನು ನಿರ್ಮಿಸಲಾಗಿತ್ತು).

ಆಲ್ಬಮ್‌ನಲ್ಲಿರುವ ವಿವರಣೆಯ ಪ್ರಕಾರ, 'ಕಾಶಿ ಯಾತ್ರೆ ಅಥವಾ ಬನಾರಸ್‌ಗೆ ತೀರ್ಥಯಾತ್ರೆ' ವಿವಾಹ ಸಮಾರಂಭದ ಈ ಭಾಗವು ಕೇವಲ ವರನಿಗೆ ಸಂಬಂಧಿಸಿದ್ದು. ಇದು ಸಂಪೂರ್ಣ ಸಾಂಕೇತಿಕ ಆಚರಣೆಯಾಗಿದೆ. ಇದರಲ್ಲಿ ಯುವರಾಜರನ್ನು 'ಬ್ರಹ್ಮಚಾರಿ'ಯಾಗಿ ಚಿತ್ರಿಸಲಾಗಿದೆ. ಧಾರ್ಮಿಕ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ ಗೃಹಸ್ಥಾಶ್ರಮವನ್ನು ಪ್ರವೇಶಿಸುವ ಮೊದಲು ಅವರು ಪವಿತ್ರ ನಗರವಾದ ಬನಾರಸ್‌ಗೆ ತೀರ್ಥಯಾತ್ರೆ ಮಾಡಿ ಅದರ ಪವಿತ್ರ ಜಲದಲ್ಲಿ ಸ್ನಾನ ಮಾಡಲು ಹೊರಟಿರುವುದನ್ನು ಇದು ಪ್ರತಿಬಿಂಬಿಸುತ್ತದೆ.

ಯಾತ್ರೆ ಮಾರ್ಗದಲ್ಲಿ ಅವರಿಗೆ ಗೃಹಸ್ಥ ಅಥವಾ ಕುಟುಂಬದ ಮುಖ್ಯಸ್ಥನೊಬ್ಬ ಎದುರಾಗುತ್ತಾನೆ. ತನ್ನ ಪುತ್ರಿಗೆ ಸೂಕ್ತ ವರನನ್ನು ಹುಡುಕುತ್ತಿರುವವನಾಗಿ ಅವನನ್ನು ಚಿತ್ರಿಸಲಾಗಿದೆ. ಆ ಗೃಹಸ್ಥನು ಮುಂದಿಟ್ಟ ವಾದಗಳನ್ನು ಯುವ ತೀರ್ಥಯಾತ್ರಿಕನು ಅನುಕೂಲಕರವಾಗಿ ಪರಿಗಣಿಸಿ, ತನ್ನ ಯಾತ್ರೆಯನ್ನು ಕೈಬಿಟ್ಟು ಹಿಂದಿರುಗಿ ವಿವಾಹಿತ ಜೀವನವನ್ನು ಪ್ರವೇಶಿಸಲು ನಿರ್ಧರಿಸುತ್ತಾನೆ. ಈ ಛಾಯಾಚಿತ್ರವು 'ಬ್ರಹ್ಮಚಾರಿ ವೇಷದಲ್ಲಿರುವ ಯುವರಾಜರು ತಮ್ಮ ಊಹಾತ್ಮಕ ಪ್ರಯಾಣದಲ್ಲಿ 'ಬ್ರಹ್ಮಚಾರಿ' ವೇಷ ಧರಿಸಿರುವುದನ್ನು ಬಿಂಬಿಸುತ್ತದೆ.

ಇದು ಮೇಲಿನ ಶೀರ್ಷಿಕೆ ಪುಟವನ್ನು ಹೊಂದಿರುವ ಚರ್ಮದ ಹೊದಿಕೆಯೊಂದಿಗೆ ಸಿದ್ಧಪಡಿಸಿರುವ ವಿಶೇಷ ಆಲ್ಬಮ್‌ನಲ್ಲಿರುವ **46** ಛಾಯಾಚಿತ್ರಗಳ ಸಂಗ್ರಹದ ಒಂದು ಭಾಗವಾಗಿದೆ.



(ಚಿತ್ರದ ಗಾತ್ರ: 28.5X21 ಸೆಂ.ಮೀ; ಆಲ್ಬಮ್ ಸಂಗ್ರಹ: ರಾಮ್‌ಸನ್ಸ್ ಕಲಾ ಪ್ರತಿಷ್ಠಾನ)



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ದೇವುಡು ಅವರ 'ಮಹಾಕ್ಷತ್ರಿಯ'

ದೇವುಡು ನರಸಿಂಹಶಾಸ್ತ್ರಿಗಳು ಸುಮಾರು ನೂರು ವಿವಿಧ ಸಾಹಿತ್ಯ ಕೃತಿಗಳನ್ನು ರಚಿಸಿದ್ದು, ಅವುಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಭಾಜನವಾದ ಏಕೈಕ ಗ್ರಂಥ ಮಹಾಕ್ಷತ್ರಿಯ. ಮರಣೋತ್ತರವಾಗಿ ಈ ಪ್ರಶಸ್ತಿ ಬಂದಿತ್ತೆಂಬುದು ಸ್ವಲ್ಪ ದುಃಖದ ವಿಷಯ. ಇದೊಂದು ಪೌರಾಣಿಕ ಕಾದಂಬರಿಯೆನ್ನಬಹುದು. ಇದರಲ್ಲಿ ವರ್ಣಿತವಾದ ಅನೇಕ ಘಟನೆಗಳು ನಡೆಯುವುದು ಸ್ವರ್ಗದಲ್ಲಿ, ಇಂದ್ರನ ರಾಜಧಾನಿ ಅಮರಾವತಿಯಲ್ಲಿ. ದೇವಾಸುರ ಶತ್ರುತ್ವದ ಹಿನ್ನೆಲೆಯಲ್ಲಿ, ಇಂದ್ರ ಪದವಿಗಾಗಿ ನಡೆದ ಸಂಘರ್ಷದಲ್ಲಿ ಕಾದಂಬರಿಯ ಕಥೆ ಅಥವಾ ಇತಿವೃತ್ತ ರೂಪುಗೊಂಡಿದೆ. ವೇದಗಳಲ್ಲೂ ಇದರ ಬೇರುಗಳಿವೆ. ವೇದ–ಪುರಾಣ–ಇತಿಹಾಸಗಳ ಗಟ್ಟಿಯಾದ ಅಧ್ಯಯನವನ್ನು ಮಾಡಿದವರು ಮಾತ್ರ ಇಂತಹ ಕಾದಂಬರಿಯನ್ನು ಬರೆಯಬಲ್ಲರು ಎಂಬುದರಲ್ಲಿ ಸಂದೇಹವಿಲ್ಲ. ಇದರಲ್ಲಿ ಬರುವ ಪಾತ್ರಗಳು ಇಂದ್ರ, ಶಚೀದೇವಿ, ಬೃಹಸ್ಪತಿ, ಶುಕ್ರಾಚಾರ್ಯ, ವೃತ್ರಾಸುರ, ವಿಶ್ವರೂಪಾಚಾರ್ಯ ಮುಂತಾದವರೇ ಆದ ಕಾರಣ ಕಾದಂಬರಿಯಲ್ಲಿ ಬಳಸಲಾಗಿರುವ ಭಾಷೆ ಪ್ರೌಢವೂ ಸಂಸ್ಕೃತ ಭೂಯಿಷ್ಠವೂ ಆಗಿದೆ. ಮೊದಲನೆಯ ಪುಟದಲ್ಲಿರುವ ಆರಂಭ ವಾಕ್ಯಗಳನ್ನೇ ನೋಡೋಣ:

'ದೇವಾಧೀಶ್ವರನಾದ ಇಂದ್ರನು ಶಚೀಸಮೇತನಾಗಿ ದೇವಸಭೆಯಲ್ಲಿ ಸಿಂಹಾಸನದಲ್ಲಿ ಕುಳಿತು ವಿರಾಜಿಸುತ್ತಿದ್ದಾನೆ'. ದೇವತೆಗಳು, ಋಷಿಗಳು, ತಮ್ಮ ತಮ್ಮ ಪುಣ್ಯಕರ್ಮಗಳಿಂದ ಸ್ವರ್ಗಲೋಕವನ್ನು ಸಾಧಿಸಿದವರು, ಎಲ್ಲರೂ ಸ್ವಸ್ಥಾನಗಳನ್ನು ಅಲಂಕರಿಸಿದ್ದಾರೆ. ಒಂದು ಕಡೆ ಅಪ್ಸರೆಯರೂ ಗಂಧರ್ವರೂ ನರ್ತನ ಸಂಗೀತಗಳಿಂದ ಆ ಸಭೆಯನ್ನು ಆರಾಧಿಸುತ್ತಿದ್ದಾರೆ. ಇನ್ನೊಂದು ಕಡೆ ಚತುರ್ವೇದಗಳೂ ಮೂರ್ತಿಮತ್ತಾಗಿ ನಿಂತು ವೇದಾಧ್ಯಯನ ಮಾಡುತ್ತಾ ಆ ದೇವಸಭೆಯನ್ನೆಲ್ಲಾ ಆಶೀರ್ವಾದ ಮಾಡುತ್ತಿವೆ. ಮರುತ್ತರು, ವಸುಗಳು, ರುದ್ರರು ಮೊದಲಾದವರು ಗಣಗಣಗಳಾಗಿ ನಿಂತು ಇಂದ್ರನನ್ನು ಓಲಗಿಸುತ್ತಿದ್ದಾರೆ. ದಿವ್ಯಾಯುಧಗಳೆಲ್ಲವೂ ದೇವೇಂದ್ರನ ಸಿಂಹಾಸನದ ಹಿಂದೆ ನಿಂತು ತೇಜೋವಿರಾಜಮಾನವಾಗಿ ಆತನಿಗೆ ರಕ್ಷೆಯನ್ನು ನೀಡುತ್ತಿವೆ.

ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳೂ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳೂ ಸರ್ವಸಿದ್ಧಿಗಳೂ ಎಡದಲ್ಲಿ ನಿಂತು ಪರಾಕು ಹೇಳುತ್ತಿವೆ ಇತ್ಯಾದಿ.

ದೇವುಡು ಅವರ ಇಂತಹ ಭಾಷೆ ಓದುಗನನ್ನು ಭವ್ಯತೆಯ ಕಡೆಗೆ ಕೊಂಡೊಯ್ಯುತ್ತದೆ. ಇದು ಅವರದೇ ಆದ ವಿಶಿಷ್ಟ ಶೈಲಿ. ನಾಲ್ಕು ವಾಕ್ಯಗಳನ್ನು ಓದಿದರೆ ಸಾಕು, ಇದು ದೇವುಡು ಅವರದೇ ಬರವಣಿಗೆ ಎಂದು ಗುರುತಿಸಬಹುದು.

ಮಹಾಕ್ಷತ್ರಿಯ ಯಾರು? ನಮ್ಮ ನಾಡು ನೂರಾರು ಶ್ರೇಷ್ಠ ಕ್ಷತ್ರಿಯರನ್ನು ಕಂಡಿದೆ. ರಾಮಚಂದ್ರನೂ ಶ್ರೀ ಕೃಷ್ಣನೂ ಮಹಾವಿಷ್ಣುವಿನ ಅವತಾರಗಳಾದರೂ ಕ್ಷತ್ರಿಯ ಕುಲೋತ್ಪನ್ನರೇ. ದುಷ್ಯಂತ ಮುಂತಾದ ಕ್ಷತ್ರಿಯರು ದೇವಾಸುರರ ಯುದ್ಧಗಳಲ್ಲಿ ಇಂದ್ರನಿಗೆ ನೆರವನ್ನು ನೀಡಲು ಹೋಗಿ ಹೋರಾಡಿದ್ದರು. ಅವರಾರನ್ನೂ ಮಹಾಕ್ಷತ್ರಿಯ ಎಂದು ಪರಿಗಣಿಸದೆ, ದೇವುಡು ನಹುಷನನ್ನು ಮಹಾ ಕ್ಷತ್ರಿಯ ಎಂದು ವರ್ಣಿಸಿದ್ದಾರೆ. ಕಾರಣವೇನು? ನಹುಷನೊಬ್ಬನೇ ಮಾನವನಾಗಿ, ಕ್ಷತ್ರಿಯನಾಗಿ ಹುಟ್ಟಿ ಇಂದ್ರಪದವಿಗೆ ಏರಿದವನು. ಅವನು ಇಂದ್ರ ಪದವಿಗೆ ಭಾಜನನಾಗಿದ್ದುದು ಸ್ವಲ್ಪ ಕಾಲವೇ ಆದರೂ ಆ ವೈಶಿಷ್ಟ್ಯ ಅವನೊಬ್ಬನದೇ. ಅವನೇ ಈ ಕಾದಂಬರಿಯ ನಾಯಕ ನೆನ್ನಬಹುದು. ಅವನ ಹೆಸರು ಕಾದಂಬರಿಯಲ್ಲಿ ಕಾಣಿಸಿಕೊಳ್ಳು ವುದು 97ನೆಯ ಪುಟದಲ್ಲಿ ನಹುಷ ಆಗ ಚಕ್ರವರ್ತಿ. ಅವನ ರಾಜ್ಯದಲ್ಲಿದ್ದ ಬೆಸ್ತರು ಮೀನುಗಳನ್ನು ಹಿಡಿಯಲು ಬಲೆ ಬೀಸಿದಾಗ ನೀರಿನಲ್ಲಿ ತಪಸ್ಸನ್ನು ಮಾಡುತ್ತಿದ್ದ ಚ್ಯವನ ಮಹರ್ಷಿಯೂ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಾನೆ. ಬೆಸ್ತರಿಗೆ ಅವನು ಇಲ್ಲಿ ಆಳುತ್ತಿರುವ ದೊರೆ ಯಾರು? ಎಂದು ಕೇಳಿದಾಗ ಅವರು ನಹುಷ ಚಕ್ರವರ್ತಿ ಎಂದು ಹೇಳುತ್ತಾರೆ. ಆಮೇಲೆ ಚಕ್ರವರ್ತಿ ನಹುಷನೇ ಮಹರ್ಷಿಯ ದರ್ಶನಕ್ಕಾಗಿ ಬರುತ್ತಾನೆ.

ಪುರಾಣಗಳಲ್ಲಿ ನಾವು ಕಾಣುವ ನಹುಷ ಅಷ್ಟೇನೂ ಉದಾತ್ತನಲ್ಲ. ಇಂದ್ರನಾಗಲು ಅನೇಕ ಅಶ್ವಮೇಧಗಳನ್ನು ಮಾಡಿ ಇಂದ್ರನಾಗಿ ಅವನು ಮೊದಲಿದ್ದ ಇಂದ್ರನ ಪತ್ನಿ ಶಚೀಯನ್ನು ಕಾಮದೃಷ್ಟಿಯಿಂದ ಅಪೇಕ್ಷಿಸುತ್ತಾನೆ. ಆಗ ಅವಳು ನೀನು ಋಷಿಗಳು ಹೊತ್ತ ಶಿಬಿಕೆಯಲ್ಲಿ



ದೇವುಡು ನರಸಿಂಹಶಾಸ್ತ್ರಿಗಳು

ಕೂತು ಬರಬೇಕೆಂಬ ಶರತ್ತನ್ನು ಹಾಕಲು ಅವನು ಒಪ್ಪಿ ಋಷಿಗಳಿಗೆ ತನ್ನ ಶಿಬಿಕೆಯನ್ನು ಹೊರಲು ಆಜ್ಞೆ ಮಾಡುತ್ತಾನೆ. ಅವರು ಒಪ್ಪಿದಾಗ ಹಾಗೆ ಶಿಬಿಕೆ (ಮೇನೆ)ಯ ಮೇಲೆ ಕುಳಿತು ಅವರಿಗೆ 'ಸರ್ಪ ಸರ್ಪ' (ಮುಂದೆ ನಡೆ, ನಡೆ) ಎಂದು ಗದರಿಸುತ್ತಾನೆ. ಅವರು ಕೋಪದಿಂದ 'ಸರ್ಪೋ ಭವ' (ಹಾವು ಆಗು) ಎಂದು ಶಾಪಕೊಡಲು ಇಂದ್ರ ಪದವಿಯನ್ನು ಕಳೆದುಕೊಂಡು ಅಜಗರ (ಹೆಬ್ಬಾವು) ಆಗಿ ಭೂಮಿಗೆ ಬೀಳುತ್ತಾನೆ – ಎಂಬ ಕಥೆಯನ್ನು ನಾವು ನೋಡುತ್ತೇವೆ.

ಆದರೆ, ಮಹಾಕ್ಷತ್ರಿಯ ಕಾದಂಬರಿಯಲ್ಲಿ ದೇವುಡು ನಹುಷನನ್ನು ಉದಾತ್ತೀಕರಿಸಿದ್ದಾರೆ. ಅವನ ಔದಾರ್ಯ ಅದ್ಭುತವಾಗಿ ಚಿತ್ರಿತವಾಗಿದೆ. ಚ್ಯವನನನ್ನು ಅವನು ಕೇಳಿಕೊಳ್ಳುತ್ತಾನೆ. 'ಮಹರ್ಷಿ, ಒಂದೆರಡು ದಿನ ನಮ್ಮಲ್ಲಿದ್ದು ನಮಗೆ ಧರ್ಮ ವಿಚಾರಗಳನ್ನು ತಿಳಿಯ ಹೇಳಿ ಅನುಗ್ರಹ ಮಾಡಬೇಕು.' ಇಷ್ಟು ಒಳ್ಳೆಯ ಚಕ್ರವರ್ತಿ. ಆಗ ಚ್ಯವನನು ಅರಮನೆಗೆ ಬಂದು ಮಾಡಿದ ಧರ್ಮೋಪದೇಶ ಒಂದು ಪೂರ್ಣ ಅಧ್ಯಾಯವೇ ಆಗಿದೆ (ಪು. 104–113). ಇದರಲ್ಲಿ ಬರುವ ಮಾತುಗಳನ್ನು ಮೀಮಾಂಸಾಶಾಸ್ತ್ರವನ್ನು ಅಧ್ಯಯನ ಮಾಡಿದ್ದವರು ಮಾತ್ರ ಬರೆಯಲು ಸಾಧ್ಯ. ಉದಾಹರಣೆ 'ಈ ಧರ್ಮವು ಚೋದನಾತ್ಮಕವಾದುದು ಎಂದರೆ ಇದೇ ಎಲ್ಲರನ್ನೂ ಕಾರ್ಯಪರರನ್ನಾಗಿ ಮಾಡುವುದು. ತಾನು ಮಾಡಬೇಕಾದ ಕಾರ್ಯವೊಂದುಂಟು ಎಂದು ಮಾನವನಿಗೆ ತೋರುವುದು ಇದೆಯಲ್ಲವೆ? ಇದೇ ಚೋದನೆಯು (ಪು. 111) ಮೀಮಾಂಸಾ ಶಾಸ್ತ್ರದಲ್ಲಿ ಹೇಳಿರುವ 'ಚೋದನಾಲಕ್ಷಣೋ ಧರ್ಮಃ' ಎಂಬುದನ್ನು ಅರಿಯದವರು ಮೇಲಿನ ಮಾತುಗಳನ್ನು ಬರೆಯಲು ಶಕ್ಯವೆ? ಧರ್ಮದ ವಿಷಯದಲ್ಲಿ ತಾವು ಹೇಳಬೇಕೆಂದಿದ್ದ ಮಾತುಗಳನ್ನು ದೇವುಡು ಚ್ಯವನನ ಬಾಯಿಂದ ಹೇಳಿಸಿದ್ದಾರೆ ಎನಿಸುತ್ತದೆ.

ಕಾದಂಬರಿಯಲ್ಲಿರುವ ನಹುಷನು ಇಂದ್ರಪದವಿಯನ್ನು ಬಯಸಿರುವುದಿಲ್ಲ. ದೇವತೆಗಳೇ ಬಂದು 'ನೀನು ಸ್ವರ್ಗಲೋಕಕ್ಕೆ ಬಂದು ಇಂದ್ರನಾಗಿರು' ಎಂದು ಕೇಳಿಕೊಳ್ಳುವ ವಿಶಿಷ್ಟ ಸಂದರ್ಭ ಬಂದು ಬಿಡುತ್ತದೆ. ಅದರ ಹಿನ್ನೆಲೆ (ಕಾದಂಬರಿಗೆ ಅನುಗುಣವಾಗಿ) ಹೀಗಿದೆ. ದೇವಗುರು ಬೃಹಸ್ಪತಿಯು ಇಂದ್ರನ ಆಸ್ಥಾನದಲ್ಲಿ ತನಗೆ ಅವಮಾನವಾಯಿತೆಂದು ಅದೃಶ್ಯನಾಗುತ್ತಾನೆ. ಇಂದ್ರನು ದಾನವರ ಗುರುವಾಗಿದ್ದ ವಿಶ್ವರೂಪವನ್ನು ಪುಸಲಾಯಿಸಿ ಸ್ವರ್ಗದಲ್ಲಿ ತನ್ನ ಗುರುವಾಗಿ ನಿಯಮಿಸಿಕೊಳ್ಳುತ್ತಾನೆ. ವಿಶ್ವರೂಪನು ಸುರಾಪಾನವನ್ನು ದಾನವರಲ್ಲಿ ಪಕ್ಷಪಾತವನ್ನು ಬಿಡದಿದ್ದಾಗ ಇಂದ್ರನೇ ಅವನ ವಧೆಯನ್ನು ಮಾಡಿಬಿಡುತ್ತಾನೆ. ಆಗ ಕೆರಳಿದ ವಿಶ್ವರೂಪನ ತಂದೆ ತ್ವಷ್ಟ್ರ. ಇಂದ್ರನನ್ನೇ ಕೊಲ್ಲಲು ಶಕ್ತನಾಗುವ ಮಗನನ್ನು ಪಡೆಯಲು ಯಜ್ಞವನ್ನು ಮಾಡುತ್ತಾನೆ. ಆಗ ಹುಟ್ಟಿದವನೇ ವೃತ್ರಾಸುರ. ಆದರೆ ಯಜ್ಞದ ಮಂತ್ರವನ್ನು ಹೇಳಿ ಹವಿಸ್ಸನ್ನು ಅರ್ಪಿಸುವಾಗ ಹೇಳಿದ ಮಂತ್ರ 'ಇಂದ್ರ ಶತ್ರುರ್ವರ್ಧಸ್ವ' ಎಂಬುದರಲ್ಲಿ ಸ್ವರ ವ್ಯತ್ಯಾಸವಾಯಿತು. ಶತ್ರು ಎಂದರೆ ಕೊಲ್ಲುವವನು. ಇಂದ್ರ ನನ್ನು ಕೊಲ್ಲುವ ಮಗ ಎಂದಾಗ ಬೇಕಾಗಿದ್ದುದು ಸ್ವರವ್ಯತ್ಯಾಸದಿಂದ ಇಂದ್ರನಿಂದ ಕೊಲ್ಲಿಸಿಕೊಳ್ಳುವ ಮಗ ಎಂಬ ಅರ್ಥವನ್ನು ಕೊಟ್ಟಿತು. ವೃತ್ರನು ಅಪಾರಶಕ್ತಿಯುಳ್ಳವನಾಗಿ ದೇವತೆಗಳನ್ನು ಸೋಲಿಸಿ ಸ್ವರ್ಗವನ್ನು ಗೆದ್ದರೂ ಅವನೇ ಇಂದ್ರನಿಂದ ತನ್ನನ್ನು ಕೊಲ್ಲಿಸಿಕೊಳ್ಳುವಂತಾಯಿತು. ಆದರೆ ವೃತ್ರಹತ್ಯೆಯ ಪಾಪ ಇಂದ್ರನನ್ನು ಕಾಡಿತು. ಅವನು ಯಾರಿಗೂ ತಿಳಿಯದಂತೆ ಓಡಿ ಹೋಗಿ ಮಾನಸ ಸರೋವರದಲ್ಲಿ ಅಡಗಿಕೊಂಡನು. ದೇವತೆಗಳು ಬೇರೆ ದಾರಿಯನ್ನು ಕಾಣದೆ ನಹುಷನನ್ನು ಬೇಡಿ ಒಪ್ಪಿಸಿ ಅವನನ್ನೇ ಇಂದ್ರನನ್ನಾಗಿ ಮಾಡಿದರು.

ನಹುಷನು ಇಂದ್ರನಾದ ಮೇಲೂ ಶಚೀತಾಗಿ ಆಶೆ ಪಡಲಿಲ್ಲ. ತನ್ನ ಧರ್ಮಪತ್ನಿ ವಿರಜಾದೇವಿಯನ್ನೇ ಅವನು ಪ್ರೇಮಿಸುತ್ತಿದ್ದುದು. ಈ ಸಂದರ್ಭದಲ್ಲಿ ಅವನ ನಡೆವಳಿಕೆ ಆದರ್ಶಪ್ರಾಯವಾಗಿದೆ. ಅರಮನೆಗೆ ಬಂದ ಶಚೀದೇವಿಗೆ ಅವನು ಗೌರವವನ್ನೇ ತೋರಿಸುತ್ತಾನೆ. ಎಲ್ಲೋ ಅಡಗಿಕೊಂಡಿದ್ದ ಹಿಂದಿನ ಇಂದ್ರನನ್ನು ಹುಡುಕಿಸಬೇಕೆಂದು ಸಲಹೆಯನ್ನು ಕೊಡುತ್ತಾನೆ. ನಹುಷನು ಪರನಾರೀ ಸಹೋದರ ಎಂಬ ಮಾತು ದೇವತೆಗಳಿಂದಲೇ ಬರುತ್ತದೆ. ಇಂದ್ರನಾಗಿರುವಾಗಲೇ ನಹುಷನು ವಿರಜಾದೇವಿಗೆ ಹೇಳುತ್ತಾನೆ. 'ವಾನಪ್ರಸ್ಥರಾಗೋಣ. ದೈವಕೃಪೆಯಿಂದ ನಾವಿನ್ನೂ ಮಾನುಷತ್ವವನ್ನು ಉಳಿಸಿಕೊಂಡಿದ್ದೇವೆ. ಈ ಗದ್ದಲವನ್ನೆಲ್ಲ ಬಿಟ್ಟು ಶಾಂತವಾಗಿ ತಪಸ್ಸು ಮಾಡಿಕೊಂಡಿರೋಣ.'

ದೇವುಡು ಅವರು ಚಿತ್ರಿಸಿರುವ ನಹುಷನು ಸಪ್ತರ್ಷಿ ಶಿಬಿಕೆಯನ್ನು ಏರಲು ಬಯಸಿದವನಲ್ಲ. ಅವನಿಗೆ ಅದನ್ನು ಸೂಚಿಸಿದವಳು ಶಚೀದೇವಿಯೇ. ಆ ಶಿಬಿಕೋತ್ಸವಕ್ಕೆ ಭೂಲೋಕದಿಂದ ಯಯಾತಿ ಇತ್ಯಾದಿಗಳೆಲ್ಲ ಸ್ವರ್ಗಕ್ಕೆ ಬರುತ್ತಾರೆ. ನಹುಷನೇ ಹಿಂದಿನ ದೇವೇಂದ್ರನು ಹತ್ಯಾದೋಷದಿಂದ ವಿಮುಕ್ತನಾಗಿ ಬರುವುದಕ್ಕೆ ಏರ್ಪಾಡುಗಳನ್ನು ಮಾಡುತ್ತಾನೆ. ಅಸುರರ ಗುರುವಾದ ಶುಕ್ರಾಚಾರ್ಯ ಮತ್ತು ಸುರಗುರು ಬೃಹಸ್ಪತಿ – ಇಬ್ಬರೂ ನಹುಷನಿಗೆ ಹೇಳುತ್ತಾರೆ 'ನಹುಷ, ನೀನು ಇಂದ್ರನಲ್ಲ, ಅತೀಂದ್ರ'.

ಅನಂತರ ಹಿಂದಿನ ಇಂದ್ರನು ಹತ್ಯಾಮುಕ್ತನಾಗಿ ಶಚಿಯೊಡನೆ ಸ್ವರ್ಗಕ್ಕೆ ಆಗಮಿಸುತ್ತಾನೆ. ಶಿಬಿಕೋತ್ಸವದ ದಿನ ಸಪ್ತರ್ಷಿಗಳು ಬಂದು ನಹುಷನನ್ನು ಶಿಬಿಕೆಯಲ್ಲಿ (ಪಲ್ಲಕ್ಕಿಯಲ್ಲಿ) ಕುಳ್ಳಿರಿಸುತ್ತಾರೆ. ಅವನಿಗೆ ಅವರ ಹಸ್ತಸ್ಪರ್ಶದಿಂದಲೇ ನಿರ್ವಿಕಲ್ಪಸಮಾಧಿ ಸ್ಥಿತಿ ಬರುತ್ತದೆ. ಆರು ದಿನ ಉತ್ಸವ ಚೆನ್ನಾಗಿ ನಡೆಯುತ್ತದೆ. ಏಳನೆಯ ದಿನ ಅರಸನ ಸಮಾಧಿ ಶಿಥಿಲವಾಗುತ್ತದೆ. ಸಪ್ತರ್ಷಿಗಳು ಪಲ್ಲಕ್ಕಿಯನ್ನು ಎಸೆಯುತ್ತಾರೆ. ಪಲ್ಲಕ್ಕಿಯಲ್ಲಿದ್ದ ನಹುಷನು ಮೂರು ಉರುಳು ಉರುಳಿ ಭೂಗತನಾಗುತ್ತಾನೆ. ಶಿಥಿಲ ಸಮಾಧಿಯಾದ ಅಪರಾಧಕ್ಕೆ ನಹುಷನು ತನಗೇ ತಾನು ಭೂಮಿಯಲ್ಲಿ ಅಜಗರನಾಗುವ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಾನೆ.

ಇದು ಮಹಾಕ್ಷತ್ರಿಯದ ಕಥೆ. ಇದನ್ನು ಕಾದಂಬರಿಯಾಗಿ ವಿಸ್ತರಿಸಿದುದು ದೇವುಡು ನರಸಿಂಹಶಾಸ್ತ್ರಿಗಳು. ಇದರಲ್ಲಿರುವ ಶಾಸ್ತ್ರೀಯ ಧರ್ಮ ಚಿಂತನೆ ಅನ್ಯತ್ರ ದುರ್ಲಭ. ಮುನ್ನುಡಿಯನ್ನು ಬರೆದಿರುವ ಶ್ರೀ ಸಿ.ಆರ್. ಶ್ರೀನಿವಾಸ ಅಯ್ಯಂಗಾರ್ ಹೇಳಿದ್ದಾರೆ 'ತರುಣ ಜನಾಂಗದ ಕಣ್ತೆರೆಸುವ, ಹಿರಿಯರು ಹೆಮ್ಮೆ ಪಡುವ, ಅಮೋಘ ಕೃತಿ, ಮಹಿಳೆಯರಿಗೆ ಮಾಣಿಕ್ಯ' ಎಂದು. ಉಪಸಂಹಾರದಲ್ಲಿ ದೇವುಡು ಅವರೇ ಬರೆದಿದ್ದಾರೆ. 'ಇದರಂತೆಯೇ ಸಂಹಿತೆ, ಇತಿಹಾಸ, ಪುರಾಣಗಳಲ್ಲಿ ಬಂದಿರುವ ಕಥೆಗಳು ಇನ್ನೂ ಎಷ್ಟೋ ಇವೆ. ಅವುಗಳನ್ನು ಅಧ್ಯಯನ ಮಾಡಿ ಉಪಬೃಂಹಣ ಮಾಡಿ, ವಿಸ್ತಾರವಾಗಿ, ಸಮಂಜಸವಾಗಿ ಹೇಳುವ ಪುಣ್ಯವಂತರ ಪಡೆಯು ಹೆಚ್ಚಾಗಲಿ. ಭಾರತೀಯ ಪೂರ್ವವೈಭವವು ಮತ್ತೆ ಗೋಚರಿಸಲಿ.' ಹಾಗಾಗಲೆಂದು ನಾವೂ ಆಶಿಸೋಣ.

(ಮಹಾಕ್ಷತ್ರಿಯದ ಇಪ್ಪತ್ತಮೂರನೆಯ ಮುದ್ರಣ, 2016ರಲ್ಲಿ ಅಧಿಕ ಮುದ್ರಣ ದೋಷಗಳಿವೆ. ದೇವುಡು ಅವರಂತಹ ವಿದ್ವನ್ಮಣಿಗಳ ಗ್ರಂಥವನ್ನು ಮುದ್ರಿಸುವಾಗ ಹೆಚ್ಚು ಎಚ್ಚರಿಕೆ ವಹಿಸಿದ್ದರೆ ಚೆನ್ನಾಗಿರುತ್ತಿತ್ತು).

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ; ಚರ್ಚೆ



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿಯಾಗಿ ಚರ್ಚಿಸಿದರು.

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.


ಕಾವೇರಿ ನಿವಾಸದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಡಿ.ಕೆ.ಶಿವಕುಮಾರ್ ಹಲವು ಮಹತ್ವದ ವಿಷಯಗಳ ಬಗ್ಗೆ ಚರ್ಚಿಸಿದ್ದು, ಭೇಟಿ ಬಗ್ಗೆ ಉಭಯ ನಾಯಕರೂ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಂದು ನನ್ನನ್ನು ಭೇಟಿಯಾಗಿ ಹಲವು ಮಹತ್ವದ ವಿಚಾರಗಳ ಕುರಿತು ಮಾತುಕತೆ ನಡೆಸಿದರು' ಎಂದು ಸಿದ್ದರಾಮಯ್ಯ ತಿಳಿಸಿದ್ದು, 'ನಿಕಟಪೂರ್ವ ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಸಿದ್ದರಾಮಯ್ಯ ಅವರನ್ನು ಇಂದು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ, ವಿವಿಧ ವಿಷಯಗಳ ಕುರಿತು ಸಮಾಲೋಚಿಸಲಾಯಿತು' ಎಂದು ಡಿ.ಕೆ.ಶಿವಕುಮಾರ್ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ. ಆದರೆ, ಯಾವ ವಿಷಯಗಳ ಬಗ್ಗೆ ಚರ್ಚೆ ನಡೆದಿದೆ ಎಂಬುದನ್ನು ಯಾರೂ ಬಹಿರಂಗಪಡಿಸಿಲ್ಲ.

ಆರ್‌ಎಸ್‌ಎಸ್ ಸಾಂಸ್ಕೃತಿಕ ಸಂಘಟನೆಯಲ್ಲ; ಅದೊಂದು ರಾಜಕೀಯ ಸಂಘಟನೆ

ಮೈಸೂರಲ್ಲಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಆರೋಪ

ಮೈಸೂರು, ಜೂ.16(ಬಿಎಲ್‌ಯು)– ಆರ್‌ಎಸ್‌ಎಸ್ ರಾಜಕೀಯ ಸಂಘಟನೆಯೇ ಹೊರತು ಸಾಂಸ್ಕೃತಿಕ ಸಂಘಟನೆಯಲ್ಲ. ಪ್ರತಿಯೊಂದು ಚುನಾವಣೆಯಲ್ಲಿ ಅದರ ಪಾತ್ರದಿಂದ ಇದು ಸ್ಪಷ್ಟವಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಆರೋಪಿಸಿದರು.



ಡಾ.ಯತೀಂದ್ರ

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಸದಸ್ಯರು ಹಿಂದೂಗಳಲ್ಲ, ಬದಲಿಗೆ ಹಿಂದುತ್ವವಾದಿಗಳು. ಆರ್‌ಎಸ್‌ಎಸ್ ಅನ್ನು ಏಕೆ ನೋಂದಣಿ ಮಾಡಿಸಬೇಕು ಎಂಬ ಆರ್‌ಎಸ್‌ಎಸ್ ನವರ ವಾದದ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಯತೀಂದ್ರ, ಆರ್‌ಎಸ್‌ಎಸ್ ಅನ್ನು ಏಕೆ ನೋಂದಣಿ ಮಾಡಿಸಬಾರದು ಎಂದು ಪ್ರಶ್ನಿಸಿದರು.

ದೇಶದಲ್ಲಿ ಪ್ರತಿಯೊಬ್ಬರಿಗೂ, ಪ್ರತಿಯೊಂದು ಸಂಘಟನೆಗೂ ಒಂದೇ ಕಾನೂನು. ಆರ್‌ಎಸ್‌ಎಸ್‌ಗೆ ಪ್ರತ್ಯೇಕವಾದ ಬೇರೆ ಕಾನೂನು ಇಲ್ಲ. ಅದು ಬಿಜೆಪಿ ಪರ ಕೆಲಸ ಮಾಡುವ ಸಂಸ್ಥೆ. ಹಲವು ಚುನಾವಣೆಗಳಲ್ಲಿ ಆರ್‌ಎಸ್‌ಎಸ್ ಪಾತ್ರ ಹೇಗಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ ಎಂದರು.

ಆರ್‌ಎಸ್‌ಎಸ್‌ಗೆ ಕೋಟ್ಯಾಂತರ ರೂಪಾಯಿ ಹಣ ಹರಿದು ಬರುತ್ತಿದೆ. ದುಬಾರಿ ಬೆಲೆ ಬಾಳುವ ಕಟ್ಟಡಗಳಿವೆ. ಇವೆಲ್ಲವೂ ಎಲ್ಲಿಂದ ಬಂತು. ನೋಂದಣಿ ಮಾಡಿಸಿದರೆ ಇದೆಲ್ಲವೂ ತಿಳಿದು ಬರಲಿದೆ. ಈ ಹಿನ್ನೆಲೆಯಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ನೋಂದಣಿಗೆ ಆಗ್ರಹಿಸಿದ್ದಾರೆ ಎಂದು ಹೇಳಿದರು.

ಧರ್ಮದ ಹೆಸರಿನಲ್ಲಿ ಏನು ಬೇಕಾದರೂ ಮಾಡಬಹುದೇ ಎಂದು ಪ್ರಶ್ನಿಸಿದ ಡಾ.ಯತೀಂದ್ರ, ಒಂದು ಸಂಸ್ಥೆ ಹಾಗೂ ದೇಶ ಎರಡೂ ಒಂದೇ ಅಲ್ಲ. ಒಂದು ಸಂಸ್ಥೆಯ ವ್ಯವಹಾರ ತಿಳಿಯಬೇಕಾದರೆ ನೋಂದಣಿ ಅತ್ಯಗತ್ಯ. ದೇಶದ ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದು ಅಭಿಪ್ರಾಯಪಟ್ಟರು.

ರೈತರೇ ಒಪ್ಪಿದ್ದಾರೆ: ಬಿಡದಿ ಟೌನ್‌ಶಿಪ್ ನಿರ್ಮಾಣ ಮಾಡಲು ಭೂಮಿ ನೀಡಲು ಶೇ.80ರಷ್ಟು ರೈತರು ಒಪ್ಪಿದ್ದಾರೆ. ಆದರೆ ಈ ವಿಚಾರದಲ್ಲಿ ಜೆಡಿಎಸ್ ರಾಜಕಾರಣ ಮಾಡುತ್ತಿದೆ ಎಂದು ಡಾ.ಯತೀಂದ್ರ ಆರೋಪಿಸಿದರು.

ಬೆಂಗಳೂರು ನಗರದ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಈ ಟೌನ್‌ಶಿಪ್ ನಿರ್ಮಾಣ ಮಾಡಲಾಗುತ್ತಿದೆ. ರೈತರ ಭೂಮಿಗೆ ಸರ್ಕಾರ ಒಳ್ಳೆಯ ಬೆಲೆ ನೀಡುತ್ತಿದೆ. ಈ ಕಾರಣದಿಂದಲೇ ಶೇಕಡ 80 ರಷ್ಟು ರೈತರು ಜಮೀನು ನೀಡಲು ಒಪ್ಪಿದ್ದಾರೆ ಎಂದು ಹೇಳಿದರು.

5ನೇ ಅಭ್ಯರ್ಥಿ ಗೆಲವು: ವಿಧಾನ ಪರಿಷತ್ ಚುನಾವಣೆಯಲ್ಲಿ 5ನೇ ಅಭ್ಯರ್ಥಿ ವಿನಯ್ ಗೆಲವು ಸಾಧಿಸುತ್ತಾರೆ ಎಂದು ಡಾ.ಯತೀಂದ್ರ ವಿಶ್ವಾಸ ವ್ಯಕ್ತಪಡಿಸಿದರು. ಸಿಎಲ್‌ಪಿ ನಡೆಸುವ ಉದ್ದೇಶದಿಂದ ಶಾಸಕರನ್ನು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದೆ. ಈ ಸಭೆಯಲ್ಲಿ ನಾನು ಕೂಡ ಭಾಗಿಯಾಗುತ್ತಿದ್ದೇನೆ. ಚುನಾವಣೆ ಸಂದರ್ಭದಲ್ಲಿ ಈ ಪ್ರಕ್ರಿಯೆಗಳು ಸಾಮಾನ್ಯ ಎಂದು ಸಚಿವ ಡಾ.ಯತೀಂದ್ರ ಸ್ಪಷ್ಟಪಡಿಸಿದರು.

ಕಾಮಾಕ್ಷಿ ಆಸ್ಪತ್ರೆಯಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಕಾಮಾಕ್ಷಿ ಆಸ್ಪತ್ರೆ ರಕ್ತನಿಧಿ ಕೇಂದ್ರದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಮೈಸೂರು,ಜೂ.16– ಮೈಸೂರಿನ ವಿಶ್ವ ರಕ್ತದಾನಿಗಳ ದಿನಾಚರಣೆ ಹಿನ್ನೆಲೆ, ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘ, ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ ಅಂಡ್ ನರ್ಸಿಂಗ್ ಹೋಮ್ಸ್ ಸಹಯೋಗದಲ್ಲಿ ಮೈಸೂರಿನ ಕುವೆಂಪುನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆಯ ರಕ್ತ ಕೇಂದ್ರದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಡಾ.ಸೋನಿಯಾ ಮಂಡಪ್ಪ ಮಾತನಾಡಿ, ಸ್ವಯಂಪ್ರೇರಿತ ರಕ್ತದಾನವು ಅತ್ಯಂತ ಅಮೂಲ್ಯವಾದ ಸೇವಾಕಾರ್ಯ. ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಅಪಘಾತ, ಹೆರಿಗೆಯ ನಂತರದ ರಕ್ತಸ್ರಾವ ಸೇರಿದಂತೆ ಇತರೆ ತುರ್ತು ಸಂದರ್ಭಗಳಲ್ಲಿ ರೋಗಿಗಳಿಗೆ ಜೀವದಾನ ನೀಡುತ್ತದೆ ಎಂದು ತಿಳಿಸಿದರು.


ಆರೋಗ್ಯವಂತರು ನಿಯಮಿತವಾಗಿ ಸ್ವಯಂಪ್ರೇರಿತ ರಕ್ತದಾನ ಮಾಡಿ ಸಮಾಜಕ್ಕೆ ಸುರಕ್ಷಿತ ಮತ್ತು ಸಮರ್ಪಕ ರಕ್ತ ಪೂರೈಕೆ ಮಾಡಬೇಕು ಎಂದು ಕರೆ ನೀಡಿದರು.

ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ ಅಂಡ್ ನರ್ಸಿಂಗ್ ಹೋಮ್ಸ್ ಕಾರ್ಯಕಾರಿ ಸಮಿತಿ ಸದಸ್ಯ ಡಾ. ರಾಜೀವ್ ಮಾತನಾಡಿ, ಸ್ವಯಂಪ್ರೇರಿತ ರಕ್ತದಾನದ ಮಹತ್ವ, ಸಾರ್ವಜನಿಕ ಜಾಗೃತಿ, ಸಮುದಾಯದ ಭಾಗವಹಿಸುವಿಕೆ ಉತ್ತೇಜಿಸುವುದು ಶಿಬಿರದ ಉದ್ದೇಶವಾಗಿದೆ ಎಂದರು.

ಇದಕ್ಕೂ ಮುನ್ನ ಶಿಬಿರಕ್ಕೆ ಎಂಓಜಿಎಸ್ ಅಧ್ಯಕ್ಷೆ ಡಾ.ಸೋನಿಯಾ ಮಂಡಪ್ಪ, ಡಾ.ಸಿಂಧು ಲಕ್ಷ್ಮೀ ದುರ್ಗೇಶ್ ರಕ್ತ ದಾನ ಮಾಡುವ ಮೂಲಕ ಚಾಲನೆ ನೀಡಿದರು.

ರಕ್ತದಾನ ಮಾಡಿದ ಸ್ವಯಂಸೇವಕರಿಗೆ ಪ್ರಶಂಸಾ ಪತ್ರಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಕಾಮಾಕ್ಷಿ ಆಸ್ಪತ್ರೆ ವ್ಯವಸ್ಥಾಪಕ ಟ್ರಸ್ಟಿ ಮಹೇಶ್ ಶೆಣೈ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ಸದಸ್ಯರಾದ ಡಾ.ಅಂಬರೀಶ್ ಬಂಧಿವಾಡ, ಡಾ.ರೂಪಾ ಪ್ರಕಾಶ್, ಡಾ.ಪೂರ್ಣಿಮಾ, ಡಾ.ನೂರ್ ಫರ್ಹಾನಾ ಸೇರಿದಂತೆ ಆಸ್ಪತ್ರೆ ವೈದ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಮಂಜುಳಾ ನಿಧನ



ಮೈಸೂರು, ಜೂ.16– ವಕೀಲರ ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ನಿರ್ದೇಶಕ, ಹಿರಿಯ ವಕೀಲ ಪುಟ್ಟಸ್ವಾಮಿ ಅವರ ಪತ್ನಿ ವಕೀಲರಾದ ಮಂಜುಳಾ(55) ಅವರು ಮಂಗಳವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ನಗರದ ಗಿರಿದರ್ಶಿನಿ ಬಡಾವಣೆ ನಿವಾಸಿಯಾದ ಇವರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆಗೆ ಶ್ರೀರಂಗಪಟ್ಟಣ ತಾಲೂಕು ಚನ್ನಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಂಜುಳಾ ಅವರ ನಿಧನಕ್ಕೆ ಮೈಸೂರು ವಕೀಲರ ಸಂಘ ಸಂತಾಪ ಸೂಚಿಸಿದೆ.

ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವ–2026

ಮೈಸೂರಲ್ಲಿ ಪ್ರಚಾರ ಬೆಳ್ಳಿ ರಥಕ್ಕೆ ಶ್ರೀಗಳಿಂದ ಚಾಲನೆ

ಮೈಸೂರು, ಜೂ.16(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಬಂದಂತಮ್ಮ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ–2026ರ ಪ್ರಚಾರ ಬೆಳ್ಳಿ ರಥಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ (ಚಾಮರಾಜನಗರ ಜಿಲ್ಲೆ ಒಳಗೊಂಡಂತೆ), ರಾಜ್ಯ ಒಕ್ಕಲಿಗರ ಸಂಘ ಹಾಗೂ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಪ್ರಚಾರ ಬೆಳ್ಳಿ ರಥಕ್ಕೆ ಪೂಜೆ ಸಲ್ಲಿಸಿ, ನಾಡಪ್ರಭು ಕೆಂಪೇಗೌಡ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೆಂಪೇಗೌಡರು ಒಂದು ಸಮುದಾಯಕ್ಕೆ ಸೀಮಿತರಾಗಿ ನಾಡು ಕಟ್ಟಿಲ್ಲ. ಎಲ್ಲಾ ಸಮುದಾಯಕ್ಕೂ ಅನುಗುಣವಾಗಿ ಪೇಟೆಗಳನ್ನು ನಿರ್ಮಿಸಿ ಮಾದರಿಯಾಗಿದ್ದಾರೆ. ಅವರ ಕೊಡುಗೆಗಳನ್ನು ಸ್ಮರಿಸುವ ದಿಸೆಯಲ್ಲಿ ನಡೆಯುವ ಜಯಂತಿ ಕಾರ್ಯಕ್ರಮದ ಪ್ರಚಾರ ರಥಕ್ಕೆ ಚಾಲನೆ ನೀಡಲಾಗಿದೆ. ಇಂದಿನಿಂದ ಜಿಲ್ಲೆ, ತಾಲೂಕು ಹಾಗೂ ನಗರ ಭಾಗದಲ್ಲಿ ಕೆಂಪೇಗೌಡರ ರಥಯಾತ್ರೆ ಸಂಚರಿಸಲಿದೆ. ಜೂ.27ರಂದು ಕಲಾಮಂದಿರದಲ್ಲಿ ನಡೆಯುವ ಜಯಂತಿ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸುವಂತೆ ತಿಳಿಸಿದರು.

ಕುವೆಂಪುನಗರದಿಂದ ಸಾಗಿದ ಬೆಳ್ಳಿ ರಥ ಬೆಳಗ್ಗೆ 11 ಗಂಟೆಗೆ ಹಿನಕಲ್, ನಂತರ ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ, ಮೈದನಹಳ್ಳಿ, ಆನಂದೂರು, ಹೊಸಕೋಟೆ, ಗುಂಗ್ರಾಲ್ ಛತ್ರ, ಯಲಚಹಳ್ಳಿ ಹಾಗೂ ಇಲವಾಲದ ಪ್ರಮುಖ ರಸ್ತೆಗಳಲ್ಲಿ ಸಾಗಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ–2026ದ ಕುರಿತು ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ.ಗಂಗಾಧರ್, ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಗೌರವಾಧ್ಯಕ್ಷ ಆಲತೂರು ಜಯರಾಮ್ ಉಪಾಧ್ಯಕ್ಷರಾದ ರವಿಕುಮಾರ್, ಬನ್ನೂರು ಮಹೇಶ್, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕರಾದ ಒಂಟಿಕೊಪ್ಪಲು ಗುರುರಾಜ್, ರವಿ, ಬಿ.ಪಿ.ಬೋರೇಗೌಡ, ಗಿರೀಶ್‌ಗೌಡ, ಜಿ.ಕುಮಾರ್‌ಗೌಡ, ಎಂ.ಸುಶೀಲ ನಂಜಪ್ಪ ಉಮೇಶ್, ಸಮುದಾಯದ ಮುಖಂಡರಾದ ಬೀಡನಹಳ್ಳಿ ಸತೀಶ್‌ಗೌಡ ಮತ್ತಿತರರಿದ್ದರು.



ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ–2026ರ ಪ್ರಚಾರ ಬೆಳ್ಳಿ ರಥಕ್ಕೆ ಮೈಸೂರಲ್ಲಿ ಮಂಗಳವಾರ ಚಾಲನೆ ನೀಡಲಾಯಿತು.

ಸಿಎಂಗೆ ರಾಯಬಾರಿಗಳ ನಿಯೋಗ ಅಭಿನಂದನೆ...



ಕಿರಣ್ ಮಜುಂದಾರ್ ಶಾ, ಸುರೇಶ್, ಗೀತಾಂಜಲಿ ಕಿರ್ಲೋಸ್ಕರ್,ವಿಕ್ರಂ ವಿಶ್ವನಾಥ್, ಮೋಹನ್ ಸುರೇಶ್, ಶಬೀನಾ ಸುಲ್ತಾನ, ಕಾರ್ತಿಕ್ ತಲ್ಲಮ್, ರಾಘವೇಂದ್ರ ಪೂಜಾರಿ, ರವಿಶಂಕರ್ ಮತ್ತಿತರರನ್ನೊಳಗೊಂಡ ವಿವಿಧ ದೇಶಗಳ ಗೌರವಾನ್ವಿತ ರಾಯಭಾರಿಗಳ ನಿಯೋಗವು ಬೆಂಗಳೂರಿನ ವಿಧಾನಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮಂಗಳವಾರ ಭೇಟಿಯಾಗಿ ಅಭಿನಂದನೆ ಸಲ್ಲಿಸಿತು.

ಬಿವಿಎ ಸ್ನಾತಕೋತ್ತರ ಪದವಿಗೆ ಅರ್ಜಿ ಆಹ್ವಾನ

ಮೈಸೂರು: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ವತಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿವಿಎ ದೃಶ್ಯ ಕಲೆಯಲ್ಲಿ 4 ವರ್ಷದ 8 ಸೆಮಿಸ್ಟರ್‌ಗಳ ರಾಜ್ಯ ಶಿಕ್ಷಣ ಪದ್ಧತಿಯಡಿ ಪಿ.ಯು.ಸಿ./ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಷಯಗಳಲ್ಲಿ ವಿಶೇಷ ಅಧ್ಯಯನ ಒಳಗೊಂಡಿರುತ್ತದೆ. ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜೂ.23ರಂದು ನಡೆಸಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ಜೂನ್ 22ರೊಳಗೆ https://uucms.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಕಾರ್ಯಾಲಯದ ದೂ.ಸಂ.0821–2438931 ಅನ್ನು ಸಂಪರ್ಕಿಸಬಹುದೆಂದು ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಣಿಗೆ ವಿತರಣೆ...



ಮೈಸೂರಿನ ಕೆ.ಜಿ.ಕೊಪ್ಪಲು 4ನೇ ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಶ್ರೀ ಶನೇಶ್ವರ ದೇವಸ್ಥಾನಕ್ಕೆ ಕೆಜಿ ಕೊಪ್ಪಲು ಮಾರಮ್ಮನ ದೇವಸ್ಥಾನ ಸಮಿತಿಯಿಂದ 1 ಲಕ್ಷ ರೂ. ದೇಣಿಗೆ ನೀಡಲಾಯಿತು. ಚಿತ್ರದಲ್ಲಿ ದೇವಸ್ಥಾನದ ರಾಮೇಗೌಡರು, ಸಮಿತಿಯವರು ಇದ್ದಾರೆ.

ಪ್ರಾಂಜಲಿ ರಾಜ್‌ಗೆ ಗ್ರಾಂಡ್ ಮಾಸ್ಟರ್ ಅವಾರ್ಡ್–2026



ಮೈಸೂರು,ಜೂ.16– ಮೈಸೂರಿನ ಜೆಎಸ್‌ಎಸ್ ಬಡಾವಣೆಯ 2ನೇ ಹಂತದ ನಿವಾಸಿ ಅನಿಲ್ ರಾಜ್ ಮತ್ತು ಶ್ರೀಮತಿ ರಂಜಿತಾ ಅವರ ಪುತ್ರಿ ಪ್ರಾಂಜಲಿರಾಜ್ ತನ್ನ ಅಸಾಧಾರಣಾ ಪ್ರತಿಭೆ ಮೂಲಕ ಏಷ್ಯಾ ಬುಕ್ ಆಫ್ ರೆಕಾರ್ಡ್‌ನ ಗ್ರಾಂಡ್ ಮಾಸ್ಟರ್ 2026 ಪ್ರಶಸ್ತಿಗೆ ಭಾಜನರಾಗಿದ್ದಾರೆ. 2 ವರ್ಷ 8 ತಿಂಗಳ ಪುಟ್ಟ ಬಾಲಕಿ ಪ್ರಾಂಜಲಿ ರಾಜ್ 22 ಕನ್ನಡ ಹಾಡುಗಳನ್ನು ಹಾಡುವ ಮೂಲಕ ಏಷ್ಯಾ ಗ್ರಾಂಡ್ ಮಾಸ್ಟರ್ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ಮಗು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾಳೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.16– ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಸಂಭ್ರಮ ಚಿಟ್ಸ್ ಪ್ರೈ.ಲಿ. ಸಂಸ್ಥೆಯ 34ನೇ ಸಂಭ್ರಮೋತ್ಸವದ ಅಂಗವಾಗಿ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಸರ್ಕಾರಿ ಶಾಲೆಯ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆಯಾದ ಮೂವರು ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರತಿಭಾ ಪುರಸ್ಕಾರದ ಅರ್ಹತಾ ಪತ್ರ ನೀಡಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವಿವರಗಳನ್ನು ಜೂ.24 ರೊಳಗೆ ಸಂಸ್ಥೆಯ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ: 0821–2424321, 2424155 ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಬಸ್‌ಗೆ ಕಲ್ಲು ತೂರಿ ಗಾಜು ಒಡೆದವರ ವಿರುದ್ಧ ಕೇಸ್

ಮೈಸೂರು, ಜೂ.16(ಎಂಕೆ)– ಸಾರಿಗೆ ಬಸ್‌ಗೆ ಕಲ್ಲು ಹೊಡೆದ ಇಬ್ಬರ ವಿರುದ್ಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆ.ಆರ್.ಪೇಟೆ ಕಾಳೇಗೌಡನ ಕೊಪ್ಪಲಿನ ಮನು(29) ಮತ್ತು ವೇಣು(26) ವಿರುದ್ಧ ಪ್ರಕರಣ ದಾಖಲಾಗಿದ್ದು, ಜೂ.14ರ ಸಂಜೆ ಮೈಸೂರು–ಚನ್ನರಾಯಪಟ್ಟಣ ಮಾರ್ಗವಾಗಿ ಸಂಚರಿಸುವ ಕೆಎ–11–ಎಫ್–0508 ಸಾರಿಗೆ ಬಸ್ ಮೈಸೂರಿನ ಫೈವ್‌ಲೈಟ್ ಬಳಿಯ ಬಸ್ ನಿಲ್ದಾಣದಲ್ಲಿ ನಿಲ್ಲಲಿಲ್ಲ ಎಂಬ ಕಾರಣಕ್ಕೆ ಹಿಂದಿನಿಂದ ಕಲ್ಲು ಹೊಡೆದು ಗಾಜನ್ನು ಪುಡಿ ಮಾಡಿದ್ದಾರೆ. ಈ ಸಂಬಂಧ ಬಸ್ ಡ್ರೈವರ್ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಬಸ್ ಭರ್ತಿಯಾಗಿದ್ದರಿಂದ ನಿಲ್ಲಿಸಲು ಸಾಧ್ಯವಾಗಲಿಲ್ಲ. ಆದರೂ ಬಸ್‌ಗೆ ಕಲ್ಲು ಹೊಡೆದು 20 ಸಾವಿರ ರೂ.ಮೌಲ್ಯದ ಬಸ್ ಗಾಜನ್ನು ನಾಶ ಮಾಡಿದ್ದಾರೆಂದು ದೂರಿನಲ್ಲಿ ತಿಳಿಸಿದ್ದಾರೆ.

ಆರ್‌ಎಂಸಿ ಮಾರುಕಟ್ಟೆ ಬಳಿಯೇ ಸಯ್ಯಾಜಿರಾವ್ ರಸ್ತೆಯಲ್ಲಿ ಹಣ್ಣುಗಳ ಹೋಲ್‌ಸೇಲ್ ವ್ಯಾಪಾರ

- ಸದಾ ವಾಹನ ದಟ್ಟಣೆ ನಡುವೆ ವಾಹನ ಚಾಲಕರು, ಸವಾರರಿಗೆ ಮತ್ತೊಂದು ತಲೆನೋವು
- ಮೈಸೂರು ನಗರಪಾಲಿಕೆ, ಸಂಚಾರಿ ಪೊಲೀಸರ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಅಸಮಾಧಾನ

ಮೈಸೂರು,ಜೂ.16(ಎಂಕೆ)–ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಆರ್‌ಎಂಸಿ ಹಣ್ಣಿನ ಮಾರುಕಟ್ಟೆಯೊಳಗೆ ನಡೆಯಬೇಕಿದ್ದ ಹೋಲ್‌ಸೇಲ್ ವ್ಯಾಪಾರ ರಸ್ತೆಗೆ ವ್ಯಾಪಿಸಿದ್ದು, ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯುಂಟಾಗುತ್ತಿದೆ.

ಸಯ್ಯಾಜಿರಾವ್ ರಸ್ತೆಯಲ್ಲಿರುವ ಆರ್‌ಎಂಸಿ ಮಾರುಕಟ್ಟೆ ಸಮೀಪದಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ವೃತ್ತದ ಸಿಗ್ನಲ್ ಬಳಿ(ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಎದುರು) ನೇರಳೆ, ಮಾವು ಇನ್ನಿತರೆ ಹಣ್ಣುಗಳ ಹೋಲ್‌ಸೇಲ್ ವ್ಯಾಪಾರ ನಡೆಯುತ್ತಿದ್ದು, ಸಿಗ್ನಲ್‌ನಲ್ಲಿ ನಿಲ್ಲುವ ವಾಹನಗಳು ಮತ್ತು ರಸ್ತೆ ದಾಟುವ ಪಾದಚಾರಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಬೆಳಗ್ಗೆಯಿಂದಲೇ ಸಾವಿರಾರು ಟ್ರೈಗಳಲ್ಲಿ ಹಣ್ಣುಗಳನ್ನು ತರುವ ಗೂಡ್ಸ್ ವಾಹನಗಳು ರಸ್ತೆಬದಿಯಲ್ಲೇ ನಿಲ್ಲಲಿದ್ದು, ಅಲ್ಲಿಯೇ ಅನ್‌ಲೋಡ್ ಮಾಡಲಾಗುತ್ತಿದೆ. ನಂತರ ಅಲ್ಲಿಂದಲೇ ಪ್ಯಾಸೆಂಜರ್ ಮತ್ತು ಗೂಡ್ಸ್ ಆಟೋಗಳಿಗೆ ಲೋಡ್ ಮಾಡಿಕೊಂಡು ಮಾರುಕಟ್ಟೆಗಳತ್ತ ಸಾಗಿಸುವುದರ ಜೊತೆಗೆ ಇಡೀ ದಿನ ರಸ್ತೆ ಬದಿಯಲ್ಲೇ ವ್ಯಾಪಾರವನ್ನು ಸಹ ನಡೆಸಲಾಗುತ್ತಿದೆ.



ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಆರ್‌ಎಂಸಿ ಮಾರುಕಟ್ಟೆ ಸಮೀಪದ ಸುಭಾಷ್ ಚಂದ್ರಬೋಸ್ ವೃತ್ತದ ಸಿಗ್ನಲ್ ಬಳಿ (ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಎದುರು) ನೇರಳೆ ಹಾಗೂ ಇನ್ನಿತರೆ ಹಣ್ಣುಗಳ ಹೋಲ್‌ಸೇಲ್ ವ್ಯಾಪಾರ ನಡೆಯುತ್ತಿರುವುದು.

ಹತ್ತಿರದಲ್ಲೇ ಸುವಿಶಾಲವಾದ ಮಾರುಕಟ್ಟೆ ಇದೆ. ಅಲ್ಲಿ ನೂರಾರು ಮಳಿಗೆಗಳು ಇದ್ದರೂ ರಸ್ತೆಯಲ್ಲಿ ಹೋಲ್‌ಸೇಲ್ ವ್ಯಾಪಾರ ಮಾಡುವುದರಿಂದ ಸಿಗ್ನಲ್‌ನಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗುವುದಲ್ಲದೆ ಹೆಂಗಸರು ಮತ್ತು ಮಕ್ಕಳು ರಸ್ತೆ ದಾಟುವುದಕ್ಕೆ ಪರಿತಪಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಅಲ್ಲದೆ ರಸ್ತೆಯಲ್ಲೇ ತ್ಯಾಜ್ಯವನ್ನು ಬಿಸಾಡುತ್ತಿರುವುದರಿಂದ ಕಸದ ರಾಶಿಯೂ ಹೆಚ್ಚಾಗುತ್ತಿದೆ.

ಗಮನಿಸುವವರಿಲ್ಲ..: ನಗರದ ಪ್ರಮುಖ ರಸ್ತೆಯಾಗಿರುವ ಸಯ್ಯಾಜಿರಾವ್ ರಸ್ತೆಯಲ್ಲಿ ಫುಟ್‌ಪಾತ್ ನಂತರ ನಡುರಸ್ತೆಗೆ ಬಂದಿರುವ ವ್ಯಾಪಾರಿಗಳು ಮನಸ್ಸೋ ಇಚ್ಛೆ ನಡೆದುಕೊಳ್ಳುತ್ತಿದ್ದಾರೆ. ಹೋಲ್‌ಸೇಲ್ ವ್ಯಾಪಾರಕ್ಕೆ ನಿಗದಿತ ಸ್ಥಳವಿದ್ದರೂ ರಸ್ತೆಯಲ್ಲಿ ಹತ್ತಾರು ಗೂಡ್ಸ್ ವಾಹನಗಳನ್ನು ನಿಲ್ಲಿಸಿಕೊಂಡು ಸಂಚಾರಕ್ಕೆ ಅಡಚಣೆಯನ್ನುಂಟು ಮಾಡುತ್ತಿದ್ದಾರೆ. ಅಲ್ಲದೆ ಸ್ವಚ್ಛತೆ ಕಾಪಾಡದೆ ಪ್ರಶ್ನಿಸಿದವರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದಾರೆ. ಆದರೆ, ಪಾಲಿಕೆ ಮತ್ತು ಪೊಲೀಸ್ ಇಲಾಖೆಯ ಯಾರೊಬ್ಬರು ಗಮನಿಸುತ್ತಿಲ್ಲ ಎಂದು ಕೆಲ ಪಾದಚಾರಿಗಳು ಮತ್ತು ವಾಹನ ಸವಾರರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಮಾರುಕಟ್ಟೆ ಬಿಟ್ಟು ರಸ್ತೆಗೆ ಇಳಿದಿರುವ ವ್ಯಾಪಾರಿಗಳು ಮುಂದೊಂದು ದಿನ ನಡುರಸ್ತೆ ಮತ್ತು ಸರ್ಕಲ್‌ನಲ್ಲಿ ಮಾರಾಟಕ್ಕೆ ಮುಂದಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಎಂಜಿ ರಸ್ತೆಯ ಪರಿಸ್ಥಿತಿ ಸಯ್ಯಾಜಿರಾವ್ ರಸ್ತೆಗೂ ಬರಲಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಡಿವಾಣ ಹಾಕಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮೈಸೂರು ಮಿತ್ರ

ಬುಧವಾರ 17 ಜೂನ್ 2026

ಮಂಡ್ಯದಲ್ಲಿ 5 ಸಾವಿರ ನಿವೇಶನ ಹಂಚಿಕೆಗೆ ಕ್ರಮ ಕೈಗೊಳ್ಳಿ

ಅಭಿವೃದ್ಧಿ, ಪಾರದರ್ಶಕ ಆಡಳಿತ, ದೀರ್ಘಾವಧಿ ಭೂ ಸಂರಕ್ಷಣೆಗೆ ಶಾಸಕ ಪಿ.ರವಿಕುಮಾರ್ ಗಣಿಗ ಸೂಚನೆ

ಮಂಡ್ಯ, ಜೂ.16– ಮಂಡ್ಯ ಕ್ಷೇತ್ರದ ಸಮಗ್ರ ಅಭಿವೃದ್ಧಿ, ವಸತಿ ಸೌಲಭ್ಯ ವಿಸ್ತರಣೆ ಹಾಗೂ ಭವಿಷ್ಯದ ಸಾರ್ವಜನಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಶಾಸಕ ಪಿ.ರವಿಕುಮಾರ್ ಗೌಡ ಗಣಿಗ ಅವರು ನಗರದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಹತ್ವದ ನಿರ್ದೇಶನಗಳನ್ನು ನೀಡಿದರು.

ಕ್ಷೇತ್ರ ವ್ಯಾಪ್ತಿ ಮುಂದಿನ ದಿನಗಳಲ್ಲಿ 5 ಸಾವಿರ ನಿವೇಶನಗಳನ್ನು ವಿತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು ವಸತಿ ರಹಿತ ಕುಟುಂಬಗಳಿಗೆ ಸ್ವಂತ ನಿವೇಶನ ಒದಗಿಸುವುದು ತಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ತಿಳಿಸಿದರು.

ತಂಗಳಗೆರೆ ಹಾಗೂ ಹೊನಗನಹಳ್ಳಿ ಗ್ರಾಮಗಳಲ್ಲಿ ನಿವೇಶನ ಹಂಚಿಕೆಗೆ ಅಗತ್ಯವಾದ ಟೌನ್ ಪ್ಲಾನಿಂಗ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರ ಯೋಜನೆ ಅನುಷ್ಠಾನಕ್ಕೆ ಬರಲಿದೆ. ಹುಲಿವಾನ ಹಾಗೂ ಬಸರಾಳು ಗ್ರಾಮಗಳಲ್ಲಿ ನಿವೇಶನ ವಿತರಣೆಗೆ ಸಂಬಂಧಿಸಿದ ಹಕ್ಕುಪತ್ರಗಳ ತಿದ್ದುಪಡಿ ಕಾರ್ಯ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಮಂಡ್ಯ ನಗರ ವ್ಯಾಪ್ತಿ ಸರ್ಕಾರಿ ನೌಕರರ ವಸತಿ ಸಮಸ್ಯೆ ನಿವಾರಣೆಗೆ ಅಪಾರ್ಟ್‌ಮೆಂಟ್ ಮಾದರಿಯ ಸರ್ಕಾರಿ ಕ್ವಾರ್ಟರ್ಸ್ ನಿರ್ಮಾಣಕ್ಕೆ ಸೂಕ್ತ ಜಾಗ ಗುರುತಿಸುವಂತೆ ಸೂಚಿಸಿದ ಶಾಸಕ ರವಿಕುಮಾರ್ ಅಗತ್ಯ ಅನುದಾನ ಬಿಡುಗಡೆ ಮಾಡುವ ಭರವಸೆ ನೀಡಿದರು. ಉದ್ಯೋಗ ಸೃಷ್ಟಿ ಹಾಗೂ ಕೈಗಾರಿಕಾ ಬೆಳವಣಿಗೆ ಉತ್ತೇಜಿಸುವ ಉದ್ದೇಶದಿಂದ ಮುದ್ದನಘಟ್ಟ ಹಾಗೂ ಹೆಗ್ಗಡಹಳ್ಳಿ ಗ್ರಾಮಗಳಲ್ಲಿ ಕೈಗಾರಿಕಾ ವಲಯಕ್ಕಾಗಿ ಭೂಮಿ ಗುರುತಿಸಿ ಮೀಸಲಿಡುವಂತೆ, ಜೊತೆಗೆ ಸ್ಥಳದಲ್ಲಿ ನಾಮಫಲಕ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಅಕ್ರಮ ಭೂ ಒತ್ತುವರಿ ವಿಚಾರ ಪ್ರಸ್ತಾಪಿಸಿದ ಶಾಸಕರು ಸರ್ಕಾರಿ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು.

ಅಧಿಕಾರಿಗಳ ಕಾರ್ಯ ವೈಖರಿ ಕುರಿತು ಮಾತನಾಡಿದ ಅವರು, PDO, RI ಹಾಗೂ ಗ್ರಾಮ ಆಡಳಿತಾಧಿಕಾರಿಗಳು (VA) ಪಾರದರ್ಶಕವಾಗಿ ಕಾರ್ಯನಿರ್ವಹಿಸಿ, ಜನಸಾಮಾನ್ಯರ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಬೇಕು. ಅನಾವಶ್ಯಕವಾಗಿ ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆದಾಡುವಂತೆ ಮಾಡಬಾರದು ಎಂದು ಎಚ್ಚರಿಕೆ ನೀಡಿದರು.


ಮಂಡ್ಯ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವನ್ನಾಗಿ ರೂಪಿಸುವ ಸಂಕಲ್ಪ ನಮ್ಮದು. ಅಭಿವೃದ್ಧಿ, ಉತ್ತಮ ಆಡಳಿತ ಹಾಗೂ ಜನಸೇವೆ ಎಂಬ ಮೂರು ಗುರಿಗಳನ್ನು ಸಾಧಿಸಲು ಎಲ್ಲಾ ಅಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು.



ಮಂಡ್ಯದ ತಹಸೀಲ್ದಾರ್ ಕಚೇರಿಯಲ್ಲಿ ಶಾಸಕ ಪಿ.ರವಿಕುಮಾರ್ ಗೌಡ ಗಣಿಗ ಅಧಿಕಾರಿಗಳ ಸಭೆ ನಡೆಸಿದರು.

ಕಂಬದಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಸ್ಥಾಪನೆಗೆ ಅಗತ್ಯ ಜಾಗ ಗುರುತಿಸಲಾಗಿದೆ. ಕ್ಷೇತ್ರದ ಭವಿಷ್ಯದ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಮಂಡ್ಯ ಕ್ಷೇತ್ರ ವ್ಯಾಪ್ತಿಯ ಗೋಮಾಳಗಳನ್ನು ಸಮಗ್ರವಾಗಿ ಗುರುತಿಸಿ, ಮುಂದಿನ 30 ವರ್ಷಗಳ ದೀರ್ಘಾವಧಿಯ ಸಾರ್ವಜನಿಕ ಸೇವಾ ಯೋಜನೆಗಳಿಗೆ ಸಂರಕ್ಷಿಸುವ ಕಾರ್ಯಯೋಜನೆ ರೂಪಿಸಬೇಕು. ಅಲ್ಲದೇ ಆಶ್ರಯ ಯೋಜನೆಯಡಿ ಹನುಗನಹಳ್ಳಿ, ಗಣಿಗ, ಕೆರಗೋಡು, ಮಾರಗೌಡನಹಳ್ಳಿ ಹಾಗೂ ತುಂಬಕೆರೆ ಗ್ರಾಮಗಳಲ್ಲಿ 10 ರಿಂದ 20 ಎಕರೆವರೆಗೆ ಲಭ್ಯವಿರುವ ಗೋಮಾಳ, ಖರಾಬು ಹಾಗೂ ಇತರೆ ಸರ್ಕಾರಿ ಭೂಮಿಯನ್ನು ವಸತಿ ಯೋಜನೆಗಳಿಗಾಗಿ ಕಾಯ್ದಿರಿಸಬೇಕು. - ರವಿಕುಮಾರ್, ಶಾಸಕ.

ತಹಸೀಲ್ದಾರ್ ನಿಯೋಜಿಸುವಂತೆ ಒತ್ತಾಯಿಸಿ ಪ್ರತಿಭಟನೆ



ಮದ್ದೂರಿನಲ್ಲಿ ತಹಸೀಲ್ದಾರ್ ನಿಯೋಜಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಮದ್ದೂರು, ಜೂ.16– ನಗರದ ತಾಲೂಕು ಕಚೇರಿಗೆ ತಕ್ಷಣ ತಹಸೀಲ್ದಾರ್ ನಿಯೋಜಿಸುವಂತೆ ಒತ್ತಾಯಿಸಿ ಸ್ವಾಭಿಮಾನಿ ಕರ್ನಾಟಕ ಜನಪರ ವೇದಿಕೆ ಕಾರ್ಯಕರ್ತರು ತಾಲೂಕು ಕಚೇರಿ ಮುತ್ತಿಗೆ ಹಾಕಿ ಮಂಗಳವಾರ ಪ್ರತಿಭಟನೆ ನಡೆಸಿದರು.

ವೇದಿಕೆ ಜಿಲ್ಲಾಧ್ಯಕ್ಷ ವಿ.ಸಿ.ಉಮಾಶಂಕರ್ ಮಾತನಾಡಿ, 15 ದಿನಗಳ ಹಿಂದೆ ವರ್ಗಾವಣೆಗೊಂಡ ತಹಸೀಲ್ದಾರ್ ಅವರ ಜಾಗಕ್ಕೆ ನೂತನ ತಹಸೀಲ್ದಾರ್ ನಿಯೋಜಿಸದ ಕಾರಣ ಕಚೇರಿಯಲ್ಲಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ದೂರದ ಗ್ರಾಮಗಳಿಂದ ತಾಲೂಕು ಕಚೇರಿಯ ಕೆಲಸ ಕಾರ್ಯಗಳಿಗೆ ಬರುವ ರೈತರಿಗೆ ಹಾಗೂ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತಿದ್ದು, ಕಚೇರಿಯ ಎಲ್ಲಾ ವಿಭಾಗಗಳ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುತ್ತಿವೆ. ಈ ಬಗ್ಗೆ ಮೌನ ವಹಿಸಿರುವ ಜಿಲ್ಲಾಧಿಕಾರಿಗಳು ಕೂಡಲೇ ಸರ್ಕಾರಕ್ಕೆ ಮನವಿ ಸಲ್ಲಿಸಿ ಸಾರ್ವಜನಿಕ ಕೆಲಸ ಕಾರ್ಯಗಳು ಹಾಗೂ ಆಡಳಿತ ವ್ಯವಸ್ಥೆಗೆ ತೊಂದರೆಯಾಗದಂತೆ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿಗೆ ಮತ್ತೆ ಅರ್ಜಿ ಸಲ್ಲಿಸಬೇಕೆಂಬ ಆದೇಶ ಹೊರಡಿಸಲು ಮುಂದಾಗಿರುವುದು ಖಂಡನಾರ್ಹ. ಈ ಬಗ್ಗೆ ಪರಿಶೀಲಿಸಲು ಗ್ರಾಮ ಲೆಕ್ಕಿಗರು, ರಾಜಸ್ವ ನಿರೀಕ್ಷಕರು ಹಾಗೂ ವಿದ್ಯುತ್ ಇಲಾಖೆ ಸಿಬ್ಬಂದಿ ನಿಯೋಜಿಸಿ ಅರ್ಹ ಫಲಾನುಭವಿಗಳಿಗೆ ತೊಂದರೆಯಾಗದಂತೆ ಅರ್ಜಿ ಮಾಡಲು ಮುಂದಾಗಬೇಕು. ಹೀಗಾಗಿ ಸರ್ಕಾರ ಈ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ರೈತ ಸಂಘದ ಪ್ರತಿಕಾ ಕಾರ್ಯದರ್ಶಿ ಸೊ.ಸಿ.ಪ್ರಕಾಶ್ ಮಾತನಾಡಿ, ಬಾಂಗ್ಲಾದೇಶ ಮತ್ತು ನೇಪಾಳದಿಂದ ಬೆಂಗಳೂರು ಹಾಗೂ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಿಗೆ ನಿತ್ಯ ನೂರಾರು ಮಂದಿ ವಲಸೆ ಬರುತ್ತಿದ್ದು ಇದು ಆಘಾತಕಾರಿ ವಿಷಯ. ಸರ್ಕಾರ, ಗುಪ್ತಚರ ಇಲಾಖೆ, ಸ್ಥಳೀಯ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ವಲಸಿಗರ ಮೇಲೆ ತೀವ್ರ ನಿಗಾ ಇಟ್ಟು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕು ಎಂದರು.

ಸರ್ಕಾರದ ಜನೋಪಯೋಗಿ ಯೋಜನೆಗಳನ್ನು ಪ್ರತಿಯೊಂದು ಇಲಾಖೆ ಅಧಿಕಾರಿಗಳು ಸಾರ್ವಜನಿಕರಿಗೆ ಮಾಹಿತಿ ಒದಗಿಸಿ ಅನುಕೂಲ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಸಿ.ಲಿಂಗರಾಜು, ಜಿಲ್ಲಾ ಉಪಾಧ್ಯಕ್ಷ ಯರಗನಹಳ್ಳಿ ಮಹಾಲಿಂಗ, ತಾಲೂಕು ಅಧ್ಯಕ್ಷ ತಿಪ್ಪೂರು ರಾಜೇಶ್, ಯುವ ಘಟಕದ ಅಧ್ಯಕ್ಷ ವಿಶ್ವಾಸ್, ಪ್ರಧಾನ ಕಾರ್ಯದರ್ಶಿ ಸೋಂಪುರ ಉಮೇಶ್, ಮುಖಂಡರಾದ ಪಟೇಲ್ ಹರೀಶ್, ಎಸ್.ಎಲ್. ಉಮೇಶ್, ಎಂ. ವೀರಪ್ಪ, ಕಲ್ಯಾಣಿ, ರಾಮಣ್ಣ, ವೀರಭದ್ರಾಚಾರಿ, ವೀರಪ್ಪ, ವೆಂಕಟೇಗೌಡ, ಸಿದ್ದರಾಮ, ನಂದೀಶ, ಕೃಷ್ಣ ಹಾಗೂ ಸಂಘಟನೆಯ ಪದಾಧಿಕಾರಿಗಳು ಹಾಜರಿದ್ದರು.

ಅರ್ಹ ಫಲಾನುಭವಿಗಳಿಗೆ ಮಾತ್ರ ಗ್ಯಾರಂಟಿ ಯೋಜನೆ

ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ

ಮಂಡ್ಯ, ಜೂ.16– ಪ್ರಸ್ತುತ ಪಂಚ ಗ್ಯಾರಂಟಿ ಸೌಲಭ್ಯ ಪಡೆಯುತ್ತಿರುವ ಯಾವುದೇ ಅರ್ಹ ಫಲಾನುಭವಿಗೆ ಯೋಜನೆಯಿಂದ ಯಾವುದೇ ತೊಂದರೆ ಅಥವಾ ನಷ್ಟ ಸಂಭವಿಸುವುದಿಲ್ಲ, ಕೇವಲ ಅರ್ಹ ಫಲಾನುಭವಿಗಳಿಗೆ ಮಾತ್ರ ಯೋಜನೆ ತಲುಪುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ತಿಳಿಸಿದರು.

ನಗರದ ಜಿಪಂ ಮಿನಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಂಚ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಗೆ ಮುಂದಾಗಿದ್ದು ಪ್ರಕ್ರಿಯೆಯ ಮೂಲ ಉದ್ದೇಶ ಮೃತಪಟ್ಟ ಹಾಗೂ ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಿ, ಸರ್ಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸುವುದು ಆಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 9,946 ಅಭ್ಯರ್ಥಿಗಳು ಯುವನಿಧಿ ಯೋಜನೆಯಡಿ 2026ರ ಮೇ ಅಂತ್ಯದವರೆಗೆ ನೋಂದಣಿ ಆಗಿದ್ದು, 8,723 ಅಭ್ಯರ್ಥಿಗಳಿಗೆ 88,360 ಕಂತುಗಳ ಮೂಲಕ 26,28,34,500 ರೂ. ಏಪ್ರಿಲ್ –2026 ರ ಅಂತ್ಯಕ್ಕೆ ವರ್ಗಾವಣೆಯಾಗಿರುತ್ತದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಗಳು ಸಭೆಯಲ್ಲಿ ತಿಳಿಸಿದರು.

ಜಿಲ್ಲೆಯಲ್ಲಿ ಎಪಿಎಲ್ ನಿಂದ ಬಿಪಿಎಲ್‌ಗೆ ಪರಿವರ್ತನೆಗಾಗಿ ಒಟ್ಟು 515 ಪಡಿತರ ಅರ್ಜಿ ಬಂದಿದ್ದು, ಎಪಿಎಲ್‌ನಿಂದ ಬಿಪಿಎಲ್‌ಗೆ 515 ಪಡಿತರ ಚೀಟಿಗಳನ್ನು ಪರಿವರ್ತಿಸಲಾಗಿದೆ ಎಂದು ತಿಳಿಸಿದರು.

ಶಕ್ತಿ ಯೋಜನೆ ಜಿಲ್ಲೆಯಲ್ಲಿ ಮಹಿಳಾ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿದ್ದು ಮೇ –2026 ರ ಅಂತ್ಯದವರೆಗೆ 21.64 ಕೋಟಿ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯ ಸದುಪಯೋಗ ಪಡೆದುಕೊಂಡಿದ್ದು, ಸಾರಿಗೆ ಆದಾಯ 603.64 ಕೋಟಿ ರೂ. ಗಳಾಗಿರುತ್ತದೆ ಎಂದು ಹೇಳಿದರು.

ಹೊಸಬರಿಗೆ ಸಚಿವ ಸ್ಥಾನ ನೀಡುವುದು ಹೈಕಮಾಂಡ್ ತೀರ್ಮಾನ

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಕೆ.ಎಂ.ಉದಯ್



ಗುರುದೇವರಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ.ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಜೂ.16– ನೂತನ ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ದೆಹಲಿಗೆ ಒಂದು ನಿಯೋಗ ಹೋಗಿದ್ದು ನಿಜ. ಆ ನಿರ್ಣಯ ಕೈಗೊಳ್ಳುವ ಬಗ್ಗೆ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಇಲ್ಲಿಗೆ ಸಮೀಪದ ಗುರುದೇವರಹಳ್ಳಿ ಹಾಗೂ ಗುರುದೇವರಹಳ್ಳಿ ಕಾಲೋನಿಯಲ್ಲಿ ತಲಾ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಚಿವ ಸಂಪುಟದಲ್ಲಿ ಯಾವಾಗಲು ಹಿರಿಯರಿಗೆ ಮಾತ್ರ ಅವಕಾಶ ಸಿಗುತ್ತದೆ. ಶಾಸಕರಾಗಿ ಆಯ್ಕೆಗೊಂಡ ಹೊಸ ಮುಖಗಳಿಗೆ ಸಚಿವ ಸ್ಥಾನದಲ್ಲಿ ಅವಕಾಶ ನೀಡಬೇಕೆಂದು ಹೈಕಮಾಂಡ್‌ಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಆ ನಿರ್ಣಯ ಕೈಗೊಳ್ಳುವ ವಿಚಾರ ಅವರಿಗೆ ಬಿಟ್ಟದ್ದು ಎಂದರು. ಮುಂದಿನ ದಿನಗಳಲ್ಲಿ ರಾಜ್ಯದ ಅಭಿವೃದ್ಧಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೆಚ್ಚು ಒತ್ತು ನೀಡಲಿದ್ದಾರೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಕೆಲವರು ಸಹಿಸಲಾಗದೆ ಅಪಪ್ರಚಾರದಲ್ಲಿ ತೊಡಗಿದ್ದಾರೆ ಎಂದರು.


ಮಂಡ್ಯ ಜಿಲ್ಲೆಯಲ್ಲಿ ಸಚಿವ ಸ್ಥಾನ ಒಬ್ಬರಿಗಂತೂ ಸಿಗುವುದು ಖಚಿತ. ಇನ್ನುಳಿದವರಿಗೆ ನೀಡುವುದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಿಟ್ಟ ವಿಚಾರವಾಗಿದೆ ಎಂದರು. ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಪ್ರತಿ ಸಾಧಿಸಲು ಮುಂದಾಗಿದ್ದೇನೆ. ಪ್ರತಿಯೊಂದು ಗ್ರಾಮಕ್ಕೂ ಹಂತ ಹಂತವಾಗಿ ಅನುದಾನ ಬಿಡುಗಡೆ ಗೊಳಿಸುತ್ತಾ ಅಭಿವೃದ್ಧಿ ಮಾಡುವುದಾಗಿ ಭರವಸೆ ನೀಡಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಎ.ಎಸ್.ರಾಜೀವ್, ಮುಖಂಡರಾದ ಅಪ್ಪಾಜಿ, ಮನೋಜ, ದೇವರಾಜು, ಈರೇಗೌಡ, ಶಿವಲಿಂಗೇಗೌಡ, ಬೋರೇಗೌಡ, ಜವರಾಯೀಗೌಡ, ಪುಟ್ಟೇಗೌಡ, ವಿನು ಸೇರಿದಂತೆ ಹಲವರಿದ್ದರು.

ವರ್ಗಾವಣೆಗೊಂಡ ವೈದ್ಯಾಧಿಕಾರಿಗೆ ಬೀಳ್ಕೊಡುಗೆ



ಕೆ.ಆರ್.ಪೇಟೆ ದುಂಡಶೆಟ್ಟಿ–ಲಕ್ಷ್ಮಮ್ಮ ಸ್ಮಾರಕ ತಾಲೂಕು ಆಸ್ಪತ್ರೆಯಲ್ಲಿ ಕಳೆದ 10 ವರ್ಷಗಳಿಂದ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆಯಾಗಿ ಸೇವೆ ಸಲ್ಲಿಸಿ ಚನ್ನಪಟ್ಟಣಕ್ಕೆ ವರ್ಗಾವಣೆಗೊಂಡ ವೈದ್ಯಾಧಿಕಾರಿ ಡಾ.ಪ್ರಿಯಾಂಕಾ ಅವರನ್ನು ಪಟ್ಟಣದ ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ಸಾರ್ವಜನಿಕರು ಸನ್ಮಾನಿಸಿ ಬೀಳ್ಕೊಟ್ಟರು.

ಪ್ರೊ.ಜೆ.ವೀರೇಗೌಡ ನಿಧನ



ಪಾಂಡವಪುರ, ಜೂ.16– ಮಂಡ್ಯ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಜೆ.ವೀರೇಗೌಡ(87) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಮಂಡ್ಯ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, 2 ಬಾರಿ ಮೈಸೂರು ವಿವಿ ಸೆನೆಟ್ ಸದಸ್ಯರಾಗಿ, ಪಾಂಡವಪುರ ತಾಲೂಕಿನ ಬೆಳ್ಳಾಳೆ ಗ್ರಾಮದ ನಾ.ಭದ್ರಯ್ಯ ಗ್ರಾಮೀಣ ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮೃತರು ಪತ್ನಿ ಪದ್ಮ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆ ಸ್ವಗ್ರಾಮ ಗಿಡದ ಶಂಭೂವಿನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಒಂದನೇ ಪುಟದಿಂದ

ಅಬಕಾರಿ ಡಿಸಿ ಅಮಾನತಿಗೆ ಶಿಫಾರಸ್ಸು

ವಿರುದ್ಧವೂ ಕ್ರಮ ಜರುಗಿಸಲಾಗುವುದು. ಈ ಪ್ರಕರಣದಲ್ಲಿ ಬೇಜವಾಬ್ದಾರಿ ತೋರಿರುವ ಯಾವುದೇ ಅಧಿಕಾರಿಗಳಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಅಬಕಾರಿ ಇಲಾಖೆಯ ಅಧಿಕಾರಿಗಳು ಸಮರ್ಥವಾಗಿ ಕೆಲಸ ಮಾಡದೆ ಕಣ್ಮುಚ್ಚಿ ಕುಳಿತಿದ್ದ ಕಾರಣ ಈ ದುರ್ಘಟನೆ ಸಂಭವಿಸಿದೆ. ಅಧಿಕಾರಿಗಳ ನಿರ್ಲಕ್ಷ್ಯತನ ಎದ್ದು ಕಾಣುತ್ತಿದೆ ಎಂದು ಅಭಿಪ್ರಾಯಪಟ್ಟರು. ಮಾರಾ ರೆಸ್ಟೋಬಾರ್ ಪಬ್ ಮಾಲೀಕರು ಸಿಎಲ್ 9 ಲೈಸೆನ್ಸ್ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ ಹಾಗೂ ಪೊಲೀಸ್ ಇಲಾಖೆಯವರು ನೀಡಿರುವ ಮಾಹಿತಿ ಪ್ರಕಾರ ಈ ಪಬ್‌ಗೆ ಯಾವುದೇ ಅಬಕಾರಿ ಲೈಸೆನ್ಸ್ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಈ ಮೂಲಕ ಯಾವುದೇ ಲೈಸೆನ್ಸ್ ಇಲ್ಲದೆ ಪಬ್ ನಡೆಸುತ್ತಿರುವುದು ಕಂಡು ಬಂದಿದೆ ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿದರು. ಈ ಕುರಿತು ಖಚಿತ ಮಾಹಿತಿ ನೀಡುವ ಸಂಬಂಧ ಪರಿಶೀಲನೆಗೆ ಆದೇಶ ನೀಡಿದ್ದೇನೆ. ಈ ಘಟನೆ ಸಂಬಂಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ಮುಂದೆ ಇಂತಹ ಘಟನೆ ಸಂಭವಿಸದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಅಗ್ನಿ ಅವಘಡದಲ್ಲಿ ಮೃತಪಟ್ಟ ಕುಟುಂಬಗಳಿಗೆ ಅಗತ್ಯ ಪರಿಹಾರ ನೀಡುವ ವಿಚಾರವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತಂದಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್ ಸೇರಿದಂತೆ ಇತರೆ ಅಧಿಕಾರಿಗಳು ಹಾಜರಿದ್ದರು.

ಪ್ರತಿ ಹೋಟೆಲ್, ರೆಸ್ಟೋರೆಂಟ್‌ಗೆ ಭೇಟಿ ನೀಡಿ ಪರಿಶೀಲನೆಗೆ ಆದೇಶ

ಅಬಕಾರಿ ಲೈಸೆನ್ಸ್ ಇಲ್ಲದೆ ಅಕ್ರಮವಾಗಿ ಮದ್ಯ ಮಾರಾಟ, ಪೂರೈಕೆ ಮಾಡುತ್ತಿರುವ ಮೈಸೂರಿನ ರಿಂಗ್ ರಸ್ತೆ ಸೇರಿದಂತೆ ನಗರದ ಎಲ್ಲಾ ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಅಬಕಾರಿ ಹಾಗೂ ಪೊಲೀಸ್ ಇಲಾಖೆಯವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ ಎಂದು ಡಾ.ಯತೀಂದ್ರ ತಿಳಿಸಿದರು.

ಅಬಕಾರಿ ಪರವಾನಗಿ ಇಲ್ಲದ ಸ್ಥಳಗಳಲ್ಲಿ ಮದ್ಯ ಸೇವನೆ ಹಾಗೂ ಮದ್ಯ ಪೂರೈಕೆ ಕಾನೂನುಬಾಹಿರ. ಆದರೆ ಮೈಸೂರಿನ ರಿಂಗ್ ರಸ್ತೆ ಸೇರಿದಂತೆ ನಗರದ ಒಳಗೆ ಯಾವುದೇ ಲೈಸೆನ್ಸ್ ಪಡೆಯದೆ ಪಬ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವ ಬಗ್ಗೆ ದೂರುಗಳು ಬಂದಿವೆ ಎಂದರು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಲೋಪ ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಯಾವುದೇ ಮುಲಾಜು ನೋಡಬಾರದು ಎಂದು ಕಟ್ಟಾಜ್ಞೆ ಮಾಡಿದ್ದೇನೆ ಎಂದು ಹೇಳಿದರು.

ನಿಯಮ ಪಾಲಿಸಿ, ಅಗತ್ಯ ಅನುಮತಿ ಪಡೆದಿದ್ದರೆ ಮಾತ್ರ ಅಬಕಾರಿ ಪರವಾನಗಿ ನೀಡಬೇಕು. ನಿಯಮ ಉಲ್ಲಂಘನೆ ಮಾಡುವ ಬಾರ್ ಅಂಡ್ ರೆಸ್ಟೋರೆಂಟ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಸಾರ್ವಜನಿಕರಿಂದ ದೂರುಗಳು ಬಂದರೆ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

ದುರಂತಗಳು ಸಂಭವಿಸಿದ ನಂತರ ಕ್ರಮ ಕೈಗೊಳ್ಳುವ ಮೊದಲೇ ಮುನ್ನೆಚ್ಚರಿಕಾ ಕ್ರಮ ಕೈಗೊಂಡರೆ ಪ್ರಾಯಶಃ ಇಂತಹ ದುರ್ಘಟನೆಗಳನ್ನು ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಅಗತ್ಯ ಸುಧಾರಣೆ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ನಗರಗಳ ವೇಗವಾದ ಜನಸಂಖ್ಯೆ ವೃದ್ಧಿ ಮತ್ತು ನಗರೀಕರಣದ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಹಲವು ಕಟ್ಟುನಿಟ್ಟಿನ ಹಾಗೂ ನಿಯಂತ್ರಣ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು ಎಂದು ಅವರು ಹೇಳಿದರು. ಈ ಪ್ರಕರಣದ ಪರಿಶೀಲನೆಗೆ ಸೀಮಿತವಾಗಿ ಇಂದು ಮೈಸೂರಿಗೆ ಬಂದಿದ್ದೇನೆ. ಮತ್ತೊಮ್ಮೆ ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಭವಿಷ್ಯದಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ಯತೀಂದ್ರ ತಿಳಿಸಿದರು.

ಕಾಂಗ್ರೆಸ್ ರೆಸಾರ್ಟ್ ರಾಜಕಾರಣ

ಶಾಸಕರನ್ನು ಬಿಡದಿ ಸಮೀಪದ ರೆಸಾರ್ಟ್‌ಗೆ ಶಿಫ್ಟ್ ಮಾಡಲಾಗಿದೆ. ಸೋಮವಾರ ರಾತ್ರಿಯಿಂದಲೇ ಶಾಸಕರು ರೆಸಾರ್ಟ್ ತಲುಪಿದ್ದು, ಮತದಾನ ದಿನದಂದು ನೇರವಾಗಿ ವಿಧಾನ ಸೌಧಕ್ಕೆ ಆಗಮಿಸಿ ಮತ ಚಲಾಯಿಸಲಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆದೇಶದಂತೆ ಮುಖ್ಯಮಂತ್ರಿ ಅವರು, ಶಾಸಕರನ್ನು ಒಂದೆಡೆ ಸೇರಿಸುವುದಲ್ಲದೆ, ಅವರಿಗೆ ಯಾರದೇ ಸಂಪರ್ಕ ಲಭ್ಯವಾಗದಂತೆ ಎಚ್ಚರ ವಹಿಸಿದ್ದಾರೆ. ಸದ್ಯ ವಿಧಾನಸಭೆಯಲ್ಲಿ 222 ಸದಸ್ಯ ಬಲವಿದ್ದು, ಒಬ್ಬ ಅಭ್ಯರ್ಥಿ ಗೆಲುವಿಗೆ ಕನಿಷ್ಠ 28 ಮೊದಲ ಪ್ರಾಶಸ್ತ್ಯ ಮತಗಳ ಅಗತ್ಯವಿದೆ.

ಈ ಲೆಕ್ಕಾಚಾರದ ಅನ್ವಯ ಕಾಂಗ್ರೆಸ್ 4 ಮತ್ತು ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದ್ದು, ಉಳಿದ ಒಂದು ಸ್ಥಾನ ಗೆಲ್ಲಲು ಜೆಡಿಎಸ್ ಅಭ್ಯರ್ಥಿ ಕಣದಲ್ಲಿದ್ದು, ಗೆಲುವಿಗೆ ತನ್ನ 18 ಶಾಸಕರ ಮತಗಳ ಜೊತೆಗೆ ಬಿಜೆಪಿ ಮತ್ತು ಕಾಂಗ್ರೆಸ್‌ನ ಹೆಚ್ಚುವರಿ ಮತಗಳ ಅಗತ್ಯವಿದೆ. ಬಿಜೆಪಿಯ ಹೆಚ್ಚುವರಿ ಮತಗಳು, ಪಕ್ಷೇತರ ಹಾಗೂ ಕಾಂಗ್ರೆಸ್‌ನ ಅತೃಪ್ತ ಶಾಸಕರ ಮತ ಗಳಿಸುವ ಲೆಕ್ಕಾಚಾರದೊಂದಿಗೆ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಪರಿಷತ್‌ನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿದ್ದು ಅಖಾಡ ಕುತೂಹಲ ಮೂಡಿಸಿದೆ.

ಮಿತ್ರ ಪಕ್ಷ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರಿಗೆ ಬಿಜೆಪಿ ತನ್ನ ಹೆಚ್ಚುವರಿ ಮತಗಳನ್ನು ವರ್ಗಾಯಿಸಲು ತೀರ್ಮಾನಿಸಿ ತಂತ್ರ ಹೆಣೆದಿರುವುದು ಆಡಳಿತಾರೂಢ ಕಾಂಗ್ರೆಸ್‌ಗೆ ಸವಾಲಾಗಿ ಪರಿಣಮಿಸಿದೆ. ಶಿಸ್ತು ಉಲ್ಲಂಘನೆ ಆರೋಪದ ಮೇಲೆ ಬಿಜೆಪಿಯಿಂದ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಅರಬೈಲು ಶಿವರಾಂ ಹೆಬ್ಬಾರ್ ಮತ್ತು ಎಸ್.ಟಿ.ಸೋಮಶೇಖರ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವ ದಿಂದ ಆರು ವರ್ಷಗಳ ಅವಧಿಗೆ ಉಚ್ಛಾಟನೆ ಮಾಡಲಾಗಿದೆ. ಈ ಮತಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, ಈಗಾಗಲೇ ಶಿವರಾಂ ಹೆಬ್ಬಾರ್ ಮತ್ತು ಸೋಮಶೇಖರ್ ಜೊತೆ ನಿರಂತರ ಸಂಪರ್ಕದಲ್ಲಿದೆ. ಉಚ್ಛಾಟಿತರಿಗೆ ಬಿಜೆಪಿ ವಿಪ್ ನೀಡಲು ಸಾಧ್ಯವಿಲ್ಲದ ತಾಂತ್ರಿಕ ಅಂಶದ ಆಧಾರದ ಮೇಲೆ ಇವರ ಮತ ಗಳಿಸಲು ಶಿವಕುಮಾರ್ ಪ್ರಯತ್ನಕ್ಕೆ ತಿರುಗೇಟು ನೀಡಲು ಬಿಜೆಪಿ ಮುಂದಾಗಿದೆ.

ಬಿಜೆಪಿ ಚಿನ್ಹೆ ಮತ್ತು ಬಿ ಫಾರಂ ಮೇಲೆ ಚುನಾವಣೆ ಗೆದ್ದಿರುವ ಮೂವರ ಉಚ್ಛಾಟನೆ ಆದೇಶ ಹಿಂಪಡೆದು ಪರಿಷತ್ ಚುನಾವಣೆಯಲ್ಲಿ ತಾವು ಸೂಚಿಸಿದ ಅಭ್ಯರ್ಥಿಗೆ ಮತ ಹಾಕುವಂತೆ ವಿಪ್ ನೀಡಲು ಚಿಂತನೆ ನಡೆಸಿದೆ. ಮಿತ್ರ ಪಕ್ಷ ಜೆಡಿಎಸ್ ಅಭ್ಯರ್ಥಿಗೆ ಈ ಮತಗಳನ್ನು ಕೊಡಿಸುವ ತಂತ್ರಕ್ಕೆ ಶಿವಕುಮಾರ್ ಪ್ರತಿತಂತ್ರ ಹೆಣೆದಿದ್ದು ಚುನಾವಣಾ ಅಖಾಡ ಕುತೂಹಲ ಮೂಡಿಸಿದೆ. ಚುನಾವಣಾ ಅಖಾಡದಲ್ಲಿ ಕಾಂಗ್ರೆಸ್‌ನಿಂದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣ ಕಮಕನೂರು, ವಿ.ಕೆ.ಮೋಹನ್, ಶಿವಣ್ಣ ಮಳವಳ್ಳಿ ಮತ್ತು ವಿನಯ್ ಕಾರ್ತಿಕ್, ಬಿಜೆಪಿಯಿಂದ ಲಿಂಗರಾಜ ಪಾಟೀಲ್, ರಘು ಕೌಟಿಲ್ಯ ಮತ್ತು ಜೆಡಿಎಸ್‌ನಿಂದ ಗೋವಿಂದರಾಜು ಇದ್ದಾರೆ.

ಈಗ ಮೂಲ ಕಾಂಗ್ರೆಸ್ಸಿಗರ ಕಾರು–ಬಾರು!!

2028 ರಲ್ಲಿ ಕಾಂಗ್ರೆಸ್ ತತ್ವಗಳು ಮತ್ತು ಸಿದ್ಧಾಂತದ ಆಧಾರದ ಮೇಲೆ ಜನಪರ ಆಡಳಿತ ನೀಡುವ ಮೂಲಕ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ನಾವು ಬದ್ಧರಾಗಿದ್ದೇವೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಪಾಳಯದಿಂದ ಸಂಭಾವ್ಯ ಸಿಎಂ ಎಂದು ಬಿಂಬಿಸಲ್ಪಟ್ಟಿದ್ದ ಪರಮೇಶ್ವರ್, ಕೊನೆಗೂ ಡಿಸಿಎಂ ಹುದ್ದೆಯನ್ನು ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಸಿದ್ದರಾಮಯ್ಯ ಆಪ್ತರಾದ ಸತೀಶ್ ಜಾರಕಿಹೊಳಿ, ಡಾ. ಎಚ್.ಸಿ. ಮಹದೇವಪ್ಪ ಮತ್ತು ಜಮೀರ್ ಅಹ್ಮದ್ ಖಾನ್ ಅವರಿಗೆ ಅವರು ಬಯಸಿದ್ದನ್ನು ಪಡೆಯಲು ಸಾಧ್ಯವಾಗಲಿಲ್ಲ.

ಸತೀಶ್ ಕೆಪಿಸಿಸಿ ಅಧ್ಯಕ್ಷರಾಗುವ ವಿಶ್ವಾಸ ಹೊಂದಿದ್ದರು ಆದರೆ ತಮ್ಮ ಮೂಲ ಲೋಕೋಪಯೋಗಿ ಇಲಾಖೆಯ ಖಾತೆಗೆ ತೃಪ್ತಿಪಟ್ಟರು. ಮಹದೇವಪ್ಪ ಮತ್ತು ಜಮೀರ್ ಅವರಿಗೆ ಯಾವ ಸ್ಥಾನವೂ ಸಿಗಲಿಲ್ಲ. ಈಗ ಸಚಿವ ಸ್ಥಾನಕ್ಕಾಗಿ ಒತ್ತಾಯಿಸಿ ರ‍್ಯಾಲಿಗಳನ್ನು ಪ್ರಾಯೋಜಿಸುತ್ತಿದ್ದಾರೆ. ಆದರೆ ಸಂತೋಷ್ ಲಾಡ್, ಶಿವಕುಮಾರ್ ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆಪ್ತ ಬೆಂಬಲಿಗರೊಂದಿಗೆ ಸಿದ್ದರಾಮಯ್ಯ ಅವರ ಸಂಬಂಧ ಹದಗೆಟ್ಟಿದೆ ಎಂದು ಹೇಳಲಾಗುತ್ತಿದೆ. ಕಾರಣ ಅವರು ತಮ್ಮ ಬೆಂಬಲಿಗ ಸಚಿವ ಆಕಾಂಕ್ಷಿಗಳ ಬೆಂಬಲಿಸಲಿಲ್ಲ. ಆದರೆ ಸತೀಶ್ ಅಹಿಂದ ಪಡೆಯನ್ನು ಪುನರುಜ್ಜೀವನಗೊಳಿಸುವ ಭರವಸೆ ಹೊಂದಿದ್ದಾರೆ.

ಸಿದ್ದರಾಮಯ್ಯ ಪಾಳಯದ ಹೆಚ್ಚಿನ ನಾಯಕರು ಅಸಮಾಧಾನಗೊಂಡು ತಮ್ಮ ನಿಷ್ಠೆ ಬದಲಾಯಿಸಿದ್ದಾರೆ ಎನ್ನಲಾಗುತ್ತಿದೆ. ಇದರಿಂದ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಶಿವಕುಮಾರ್ ಆಡಳಿತದ ಮೇಲೆ ಗಮನಹರಿಸಲು ದಾರಿ ಮಾಡಿ ಕೊಟ್ಟಿದೆ. ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದು ಒಂದು ಅದ್ಭುತ ಐಡಿಯಾ ಆಗಿದ್ದು, ಈ ತಂತ್ರ ಸರ್ಕಾರಕ್ಕೆ ಸೇಫ್ಟಿ ಸಾಧನದಂತೆ ಕೆಲಸ ಮಾಡುತ್ತದೆ ಎಂದು ಕಾಂಗ್ರೆಸ್ ಮುಖಂಡರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಖಾತೆ ವಹಿಸಿಕೊಂಡ ಕೃಷ್ಣ ಬೈರೇಗೌಡ

ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ನಗರಕ್ಕೆ ಆಗಮಿಸಿ, ಸೋಮವಾರ ರಾತ್ರಿ ತಾವು ತಂಗಿದ್ದ ಹೋಟೆಲ್‌ಗೆ ಕೃಷ್ಣಬೈರೇಗೌಡ ಅವರನ್ನು ಕರೆಸಿಕೊಂಡು ಸದ್ಯಕ್ಕೆ ತಮಗೆ ನೀಡಿರುವ ಖಾತೆ ಹೊಣೆ ವಹಿಸಿಕೊಳ್ಳಿ ಎಂಬುದಾಗಿ ಸಲಹೆ ನೀಡಿದರು.

ಒಂದು ವೇಳೆ ಇದೇ ನಿಲುವು ಮುಂದುವರಿಸಿದರೆ, ಭವಿಷ್ಯದಲ್ಲಿ ಉತ್ತಮ ಅವಕಾಶ ಕಳೆದುಕೊಳ್ಳಬೇಕಾಗುತ್ತದೆ. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಸಂದೇಶವೂ ಇದೇ ಆಗಿದೆ. ನೀವು ಕೂಡಲೇ ಖಾತೆ ನಿರ್ವಹಣೆ ಆರಂಭಿಸಿ ಎಂಬುದಾಗಿ ಸಲಹೆ ಮತ್ತು ಪರೋಕ್ಷ ಎಚ್ಚರಿಕೆ ನೀಡಿದರು. ವರಿಷ್ಠರ ಕಟ್ಟಾದೇಶದ ನಂತರ ಇಂದು ಕೃಷ್ಣಬೈರೇಗೌಡ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸುವ ಮೂಲಕ ಖಾತೆ ಜವಾಬ್ದಾರಿ ಆರಂಭಿಸಿದರು.

ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ನಗರ ನಿರ್ವಹಣೆಯಲ್ಲಿ ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಕಿಡಿಕಾರಿ ಎಚ್ಚರಿಕೆ ನೀಡಿದರು.

ಬೆಂಗಳೂರು ಇಡೀ ದೇಶದ ಆಸ್ತಿ, ಇಲ್ಲಿನ ಸವಾಲುಗಳು ಹಾಗೂ ಸಮಸ್ಯೆಗಳನ್ನು ಸರಿಪಡಿಸದಿದ್ದರೆ ಇಡೀ ರಾಜ್ಯದ ಭವಿಷ್ಯ ಪ್ರಶ್ನಾರ್ಥಕವಾಗುತ್ತದೆ.

ಇದುವರೆಗೂ ಇಲಾಖೆ ನಿರ್ವಹಣೆ ಸರಿಯಾಗಿ ಆಗಿಲ್ಲ. ಇನ್ನು ಮುಂದೆ ಅಧಿಕಾರಿಗಳು ಎಚ್ಚರದಿಂದ ಕೆಲಸ ನಿರ್ವಹಿಸಬೇಕು ಎಂದು ಆದೇಶಿಸಿದರು.

ರಸ್ತೆ ಮಾಡುವುದು ರಾಕೆಟ್ ಸೈನ್ಸ್ ಅಲ್ಲ. ಪಾಟ್ ಹೋಲ್ ಆಗದಂತೆ ರಸ್ತೆ ನಿರ್ಮಾಣ ಸಾಧ್ಯವಿಲ್ಲವೇ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸಚಿವರು, ಘನತ್ಯಾಜ್ಯ ನಿರ್ವಹಣೆ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಿ ಎಂದು ಸೂಚಿಸಿದರು.

ಹೆತ್ತ ಕರುಳ ಬಳ್ಳಿಯ ಬೀದಿಗೆ ಬಿಸಾಡಿದ ತಾಯಿ!

ಅಪರಿಚಿತರು ಆಗ ತಾನೇ ಜನಿಸಿದ ಹೆಣ್ಣು ಮಗುವನ್ನು ಬಿಸಾಕಿ ಹೋಗಿರುವುದಾಗಿ ಹೇಳಿದ್ದಾರೆ. ಕೂಡಲೇ ಆ ನವಜಾತ ಶಿಶುವನ್ನು 108 ಆಂಬುಲೆನ್ಸ್‌ಗೆ ಕರೆ ಮಾಡಿ, ಕೆಆರ್ ಆಸ್ಪತ್ರೆಗೆ ರವಾನಿಸಲಾಯಿತಾದರೂ ಆ ಶಿಶು ಬದುಕುಕಿರಲಿಲ್ಲ. ಪಾಲಿಕೆ ನೌಕರ ಕೂಡಲೇ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಮಂಡಿ ಠಾಣೆ ಪೊಲೀಸರು, ನವಜಾತ ಶಿಶುವನ್ನು ಬಿಸಾಡಿದ ತಾಯಿಯನ್ನು ಅಂತೂ ಪತ್ತೆ ಹಚ್ಚಿ, ವಶಕ್ಕೆ ಪಡೆದಿದ್ದಾರೆ.

ಪೊಲೀಸರು ಜಾಡು ಹಿಡಿದಿದ್ದು ಹೇಗೆ?: ಘಟನಾ ಸ್ಥಳದಲ್ಲಿರುವ ಎಲ್ಲಾ ಸಿಸಿ ಟಿವಿ ಕ್ಯಾಮರಾಗಳ ಫುಟೇಜ್ ಪರಿಶೀಲಿಸಿದಾಗ ಮಹಿಳೆಯೊಬ್ಬರು ಆಟೋರಿಕ್ಷಾದಿಂದ ಮಗುವನ್ನು ಎಸೆಯುತ್ತಿರುವುದು ಕಂಡು ಬಂದಿದೆ. ತಕ್ಷಣ ಪೊಲೀಸರು ಆ ಆಟೋರಿಕ್ಷಾ ನಂಬರ್ ಆಧರಿಸಿ ಅದರ ಚಾಲಕನನ್ನು ಮೊದಲು ಪತ್ತೆ ಹಚ್ಚಿದ್ದಾರೆ. ನಂತರ ಆತನಿಂದ ಮಹಿಳೆ ಬಗ್ಗೆ ಮಾಹಿತಿ ಕಲೆಹಾಕಿ, ಮಹಿಳೆಯ ವಿಳಾಸ ಕಂಡುಕೊಂಡಿದ್ದಾರೆ. ಕೊನೆಗೆ ಆ ವಿಳಾಸಕ್ಕೆ ತೆರಳಿ ಮಹಿಳೆಯನ್ನು ವಶಕ್ಕೆ ಪಡೆದಿದ್ದಾರೆ.

ಸಮಾಜಕ್ಕೆ ಅಂಜಿ ಈ ಕೃತ್ಯ: ತಾನೇ ಜನ್ಮ ನೀಡಿದ ಮಗುವನ್ನು ನಿರ್ದಯಿಯಾಗಿ ಬೀದಿಗೆ ಎಸೆದು ಹೋಗಿದ್ದರ ಬಗ್ಗೆ ಪೊಲೀಸರು ಮಹಿಳೆಯನ್ನು ಪ್ರಶ್ನಿಸಿದಾಗ ಅವರು ಸಮಾಜದ ಕಡೆಗೆ ಬೊಟ್ಟು ಮಾಡಿದ್ದಾರೆ. 'ಸರ್ ನನಗೆ ಈಗ 40 ವರ್ಷ. ಈಗಾಗಲೇ 21 ವರ್ಷದ ಪುತ್ರ, 14 ಹಾಗೂ 13 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಮಗನಿಗೆ ಮದುವೆ ಆಗಿದೆ. ಈ ವಯಸ್ಸಿನಲ್ಲಿ ನನಗೆ ಮಗುವಾಗಿದೆ ಎಂದು ತಿಳಿದರೆ, ಸಂಬಂಧಿಕರು ಹಾಗೂ ಈ ಸಮಾಜ ನನ್ನನ್ನು ಯಾವ ದೃಷ್ಟಿಯಲ್ಲಿ ನೋಡಬಹುದು. ಸಮಾಜದ ನಿಂದನೆ ಎದುರಿಸಲಾಗದು ಎಂಬ ಭಯದಿಂದ ಹೀಗೆ ಮಾಡಿದೆ' ಎಂದು ತಿಳಿಸಿದ್ದಾರೆ.

ಆಟೋದಲ್ಲಿ ಮಗು ಜನನ: ಈ ಗರ್ಭಿಣಿ ಮಹಿಳೆಯು ಆಟೋರಿಕ್ಷಾದಲ್ಲಿ ತೆರಳುತ್ತಿದ್ದಾಗಲೇ ನೋವು ಕಾಣಿಸಿಕೊಂಡು, ಹೆರಿಗೆಯಾಗಿದೆ. ಮಹಿಳೆ ಹಿಂದೆಮುಂದೆ ನೋಡದೆ ಗರ್ಭಚೀಲದೊಂದಿಗೆ ಶಿಶುವನ್ನು ರಸ್ತೆಗೆ ಎಸೆದಿದ್ದಾರೆ. ಆಟೋ ಚಾಲಕ 71 ವರ್ಷ ವಯಸ್ಸಿನರಾಗಿದ್ದು, ತನ್ನ ಆಟೋರಿಕ್ಷಾದಲ್ಲಿ ನಡೆದಿರುವ ಇದಾವುದೂ ಅವರ ಪರಿವೆಗೆ ಬಂದಿಲ್ಲ.

ನೋಟೀಸ್ ನೀಡಲಾಗಿದೆ: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಮಹಿಳೆಯನ್ನು ವಶಕ್ಕೆ ಪಡೆದು ನೋಟಿಸ್ ಮಾತ್ರ ನೀಡಬಹುದು. ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲು ಸಾಧ್ಯವಿಲ್ಲ. ತನಿಖೆ ಮುಂದಿನ ಹಂತವಾಗಿ ಮಗು ಮತ್ತು ತಾಯಿಯ ಡಿಎನ್‌ಎ ಪರೀಕ್ಷೆ ನಡೆಸಿ, ನಂತರ ವಿಚಾರಣೆ ನಡೆಸಿ, ಚಾರ್ಜ್‌ಶೀಟ್ ಸಲ್ಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಖರೀದಿಗೆ ವೈದ್ಯರ ಚೀಟಿ ಕಡ್ಡಾಯ!

ಅನ್ವಯಿಸಲಾದ ವಿನಾಯಿತಿಯನ್ನು ಪಡೆಯುವುದಿಲ್ಲ. ಇದರ ಪರಿಣಾಮವಾಗಿ, ನಿಗದಿತ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಸರ್ಕಾರವು ಪಾಲುದಾರರಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೋರಿ ಹೊರಡಿಸಿದ ಕರಡು ಅಧಿಸೂಚನೆಯ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಔಷಧಗಳಿಗೆ ಸಂಬಂಧಿಸಿದ ತಾಂತ್ರಿಕ ವಿಷಯಗಳ ಕುರಿತು ದೇಶದ ಅತ್ಯುನ್ನತ ಶಾಸನಬದ್ಧ ಸಂಸ್ಥೆಯಾದ ಡ್ರಗ್ಸ್ ಟೆಕ್ನಿಕಲ್ ಅಡ್ವೈಸರಿ ಬೋರ್ಡ್ (ಡಿಟಿಎಬಿ) ಜೊತೆಗೆ ಸಮಾಲೋಚಿಸಿದ ನಂತರ, ಈ ತಿದ್ದುಪಡಿಯನ್ನು ಅಂತಿಮಗೊಳಿಸುವ ಮೊದಲು ಸಾರ್ವಜನಿಕರಿಂದ ಸ್ವೀಕರಿಸಿದ ಕಾಮೆಂಟ್‌ಗಳನ್ನು ಪರಿಗಣಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಹಣ ನಾಪತ್ತೆ: ಮತ್ತೆರಡು ಪ್ರಕರಣ ದಾಖಲು

ಹಿನ್ನೆಲೆಯವರನ್ನು ರಾಮ ಮಂದಿರ ಟ್ರಸ್ಟ್‌ನ ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಲಾಗಿದೆ. ಈ ಪ್ರಕರಣದ ಕುರಿತು ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಹಣ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಂದಿರದಲ್ಲಿ ಕಾಣಿಕೆ ಮೊತ್ತ ಎಣಿಕೆ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ರಾಮಶಂಕರ್ ಯಾದವ್, ಲವಕುಶ ಮಿಶ್ರಾ, ಅನುಕಲ್ಪ ಮಿಶ್ರಾ ಸೇರಿ ಐವರು ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಅಯೋಧ್ಯೆಯ ಲವಕುಶ ಮಿಶ್ರಾ ನಿವಾಸದಲ್ಲಿ ಪೊಲೀಸರು ಈಚೆಗೆ ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ 12 ಲಕ್ಷ ನಗದು ಪತ್ತೆಯಾಗಿತ್ತು.

ಕಾಣಿಕೆ ಹಣ ದುರುಪಯೋಗದಲ್ಲಿ ಭಾಗಿಯಾದವರು ಯಾರು ಎನ್ನುವುದು ಎಸ್‌ಐಟಿ ತನಿಖೆಯಿಂದ ಹೊರಬೀಳಲಿದೆ ಎಂದು ರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಹೇಳಿದ್ದಾರೆ.

10ಕ್ಕೂ ಹೆಚ್ಚು ಆರೋಪಿಗಳ ವಿಚಾರಣೆ: ಹಣ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತಂಡ ಮಂಗಳವಾರ 10ಕ್ಕೂ ಹೆಚ್ಚು ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿತು.

ಕಟ್ಟಡದ ಮಾಲೀಕ ಕೇಶವಮೂರ್ತಿ ಮೇಲೆ ಕೇಸ್!

ಉಳಿದ ನಾನು, ಸೋನಾ ಹಾಗೂ ಇತರರು ಎರಡನೆಯ ಮಹಡಿಯ ಹೊರ ಭಾಗಕ್ಕೆ ಬಂದೆವು. ಅಲ್ಲಿ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುವ ಇಬ್ಬರೂ ವ್ಯಕ್ತಿಗಳು ಹೊರ ಬರಲು ಸಾಧ್ಯವಾಗದೇ ಉಳಿದುಕೊಂಡರು. ನಂತರ ನಾನು, ಸೋನಾ ಹಾಗೂ ಇತರರು ಅಗ್ನಿಶಾಮಕ ಸಿಬ್ಬಂದಿಯವರ ಏಣಿಯ ಸಹಾಯದಿಂದ ಕೆಳಗೆ ಬಂದೆವು. ನನ್ನ ಬಲ ಭುಜ, ಬಲಗೈಗೆ ಬೆಂಕಿ ತಗುಲಿ ಸುಟ್ಟ ಗಾಯವಾಗಿದೆ. ನನ್ನ ಸ್ನೇಹಿತೆ ಸೋನಾ ಅವರಿಗೆ ಬಲಗೈಗೆ ಬೆಂಕಿ ತಗುಲಿ ಗಾಯವಾಗಿದೆ.

ನಂತರ ಆಂಬುಲೆನ್ಸ್ ಮೂಲಕ ನಾನು, ಸೋನಾ ಹಾಗೂ ಇತರರು ಹತ್ತಿರದ ಆಸ್ಪತ್ರೆಗೆ ದಾಖಲಾದೆವು. ಆಸ್ಪತ್ರೆಯಲ್ಲಿ ನಮ್ಮೊಂದಿಗೆ ಇಬ್ಬರೂ ಚಿಕಿತ್ಸೆಗೆ ದಾಖಲಾಗಿದ್ದು, ಅದರಲ್ಲಿ ಒಬ್ಬರನ್ನು ವಿಚಾರಿಸಲಾಗಿ, ಅವರು ತಾನು ಮಹದೇವ ಪ್ರಸಾದ. ಮಾರಾ ರೆಸ್ಟೋಬಾರ್‌ನ ಮ್ಯಾನೇಜರ್ ಎಂದು ತಿಳಿಸಿದರು. ನಾನು ಘಟನೆಯ ಬಗ್ಗೆ ಅವರನ್ನು ಕೇಳಿದಾಗ, ಸಾಹಿನ್ ಹಾಗೂ ಪ್ರಕಾಶ ಎಂಬುವವರು ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಮಾರಾ ರೆಸ್ಟೋರೆಂಟ್‌ನಲ್ಲಿ ಬೆಂಕಿ ತಗುಲಿದಾಗ ತುರ್ತಾಗಿ ಹೊರಗೆ ಬರಲು ಯಾವುದೇ ಎಮರ್ಜೆನ್ಸಿ ಎಕ್ಸಿಟ್ ಇರಲಿಲ್ಲ. ಅಲ್ಲದೆ, ಫೈರ್ ಎಕ್ಸ್ಟಿಂಗ್ವಿಶರ್ ಮತ್ತು ಯಾವುದೇ ಫೈರ್ ಅಲಾರಾಮ್ ಕೂಡ ಇರಲಿಲ್ಲ. ಈ ರೀತಿ ಯಾವುದೇ ಮುನ್ನೆಚ್ಚರಿಕಾ ಹಾಗೂ ಸುರಕ್ಷತಾ ವ್ಯವಸ್ಥೆ ಇಲ್ಲದ ಕಾರಣ ರೆಸ್ಟೋಬಾರ್ ಮಾಲೀಕರು, ಕಟ್ಟಡ ಮಾಲೀಕರು ಹಾಗೂ ಇತರರ ನಿರ್ಲಕ್ಷ್ಯದ ಕಾರಣ ಇಬ್ಬರು ಸಾವನ್ನಪ್ಪಿದ್ದಲ್ಲದೆ, ನಾನು ಸೇರಿದಂತೆ ಸುಮಾರು 6 ಮಂದಿ ಗಾಯಗೊಂಡಿದ್ದೇವೆ. ಹಾಗಾಗಿ ಈ ಬೆಂಕಿ ಅವಘಡಕ್ಕೆ ಕಾರಣರಾದ ರೆಸ್ಟೋಬಾರ್ ಮಾಲೀಕ ಪ್ರೀತವ್ ಪುನೀತ್ ಹಾಗೂ ಕಟ್ಟಡ ಮಾಲೀಕ ಕೇಶವಮೂರ್ತಿ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಚೆನ್ನರಾವ್ ದೂರಿನನ್ವಯ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ

ಬುಧವಾರ 17 ಜೂನ್ 2026

ಮೈಸೂರು ದಿಗ್ವಿಜಯ ಸಮಾರೋಪ



1008ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ನಡೆದ ಮೈಸೂರು ದಿಗ್ವಿಜಯ-2026ರ ಸಮಾರೋಪ ಸಮಾರಂಭ ಜರುಗಿತು.

ಮೈಸೂರು, ಜೂ.16(ಎಸ್‌ಪಿಎನ್)- ಮೈಸೂರಿನ ಅಗ್ರಹಾರದಲ್ಲಿ ಉತ್ತರಾಧಿ ಮಠದ ವತಿಯಿಂದ ಶ್ರೀ ಕಾಶಿವಿಶ್ವೇಶ್ವರ ಸನ್ನಿಧಿಯಲ್ಲಿ 33 ದಿನಗಳ ಅಧಿಕ ಮಾಸೋತ್ಸವದ ಅಂಗವಾಗಿ 1008ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ನಡೆದ ಮೈಸೂರು ದಿಗ್ವಿಜಯ-2026ರ ಸಮಾರೋಪ ಕಾರ್ಯಕ್ರಮ ಜರುಗಿತು.

ಈ ವೇಳೆ ಹಿರಿಯ ವಿದ್ವಾಂಸ ರಾಮಚಂದ್ರರಾಯರು ಮಾತನಾಡುತ್ತಾ, ಶ್ರೀ ಸತ್ಯಾತ್ಮತೀರ್ಥರು ಮೇ 14ರಿಂದ ಜೂ.15 ರವರೆಗೆ ಅಧಿಕ ಮಾಸೋತ್ಸವ ಧಾರ್ಮಿಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟಿದ್ದಾರೆ. ಈ ವೇಳೆ ಹಲವು ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳು ಶ್ರೀಗಳ ನೇತೃತ್ವದಲ್ಲಿ ನಡೆದಿರುವುದು ಸಂತೋಷದ ವಿಷಯ. ಈ ಉತ್ಸವಕ್ಕೆ ಸರ್ಕಾರಿ ಅಧಿಕಾರಿಗಳು, ಪೊಲೀಸ್ ಇಲಾಖೆ ಹಾಗೂ ಧಾರ್ಮಿಕ ಆಸ್ತಿಕರು ನೆರವು ನೀಡಿ, ಭಗವಂತನ ಕೃಪೆಗೆ ಪಾತ್ರರಾಗಿದ್ದಾರೆ ಎಂದರು.

ಕಳೆದೊಂದು ತಿಂಗಳಿಂದ ಶ್ರೀಗಳ ನೇತೃತ್ವದಲ್ಲಿ ಮೈಸೂರಿನ ಜನತೆಗೆ ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೋಕ್ಷ ಮಾರ್ಗವನ್ನು ತೋರಿದ್ದಾರೆ. ಮುಂದೆಯೂ ಶ್ರೀಗಳ ಕೃಪೆ ಮೈಸೂರಿನ ಜನತೆ ಮೇಲಿರಲಿ ಎಂದು ಪ್ರಾರ್ಥಿಸಿದ ಅವರು, ಅಧಿಕ ಮಾಸೋತ್ಸವ ಕಾರ್ಯಕ್ರಮದಲ್ಲಿ ಹಲವು ವಿಸ್ಮಯಗಳು ಜರುಗಿದ್ದು, ಇದನ್ನು ಪಟ್ಟಿ ಮಾಡುವುದು ಕಷ್ಟ ಸಾಧ್ಯ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಭಗವಂತನ ಸೇವೆ ಮಾಡಿದರೆ, ಖಂಡಿತವಾಗಿ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ಕೆಲ ಘಟನಾವಳಿಗಳನ್ನು ಉಲ್ಲೇಖಿಸಿದರು. ಇದೇ ವೇಳೆ ಅಧಿಕ ಮಾಸೋತ್ಸವ ಕಾರ್ಯಕ್ರಮದ ಯಶಸ್ಸಿಗೆ ದುಡಿದ ಸ್ವಯಂಸೇವಕರು, ದಾನಿಗಳಿಗೆ ಫಲ-ಮಂತ್ರಾಕ್ಷತೆ ನೀಡಿ, ಗೌರವಿಸಲಾಯಿತು.

ಆದಿವಾಸಿಗಳಿಗೆ ಮೂಲ ಸೌಕರ್ಯ ಕಲ್ಪಿಸಿ; ಅವರ ಒಕ್ಕಲೆಬ್ಬಿಸುವ ಕಾಯಕ ಮಾಡಬಾರದು

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಸೂಚನೆ





ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆ ಹಾಗೂ ಅಹವಾಲು ಸ್ವೀಕೃತಿ ಸಭೆಯ ಅಧ್ಯಕ್ಷತೆ ವಹಿಸಿ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಮಾತನಾಡಿದರು.

ಮೈಸೂರು,ಜೂ.16(ಎಂಟಿವೈ)- ಆದಿವಾಸಿಗಳು ವಾಸಿಸುವ ಹಾಡಿಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಅವರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು ಎಂದು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಸೂಚಿಸಿದ್ದಾರೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಮಂಗಳವಾರ ಎಸ್ಸಿ, ಎಸ್ಟಿ ಸಮುದಾಯದ ಮುಖಂಡರು, ಜನರು ಮತ್ತು ಸಂಘ ಸಂಸ್ಥೆಗಳ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿವಾಸಿಗಳು ವಾಸಿಸುವ ಸ್ಥಳಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿ, ವಾಸ ಮಾಡಲು ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಯಾವುದೇ ಕಾರಣಕ್ಕು ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಬಾರದು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹಾಗಾಗಿ ಅವರು ಆತಂಕ ಪಡಬೇಕಿಲ್ಲ ಎಂದು ಹೇಳಿದರು.

ನಾನು ಆಯೋಗದ ಅಧ್ಯಕ್ಷನಾಗಿ 8 ತಿಂಗಳು ಕಳೆದಿದೆ. 16 ಜಿಲ್ಲೆಗಳ ಪ್ರವಾಸ ಮಾಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿದ್ದೇನೆ. 450 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದೇನೆ. ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸಿ ಬಗೆಹರಿಸುವಂತೆ ಎಲ್ಲಾ ಅಧಿಕಾರಿ ಗಳಿಗೆ ಸೂಚಿಸಿದ್ದೇನೆ. ಆಯೋಗಕ್ಕೆ ಈಗ ಒಟ್ಟು 4250 ದೂರುಗಳು ಬಂದಿವೆ. 1304 ಅರ್ಜಿಗಳ ವಿಚಾರಣೆ ನಡೆಸಲಾಗುತ್ತಿದೆ ಎಂದರು.

> **ಹೋರಾಟಗಾರರ ಮೇಲೆ ಸುಳ್ಳು ಕೇಸ್ ಸಲ್ಲ**
>
> ದಲಿತ ಸಂಘಟನೆಗಳು ಸೇರಿದಂತೆ ಯಾವುದೇ ಹೋರಾಟಗಾರರ ಮೇಲೆ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ ಅವರ ಹೋರಾಟ ಹತ್ತಿಕ್ಕುವ ಕೆಲಸ ಮಾಡಿದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. ಈಗಾಗಲೇ ಹೋರಾಟಗಾರರ ಮೇಲೆ ಸುಳ್ಳು ಪ್ರಕರಣ ದಾಖಲಾಗಿರುವ ಬಗ್ಗೆ ಆಯೋಗಕ್ಕೆ ದೂರು ಬಂದಿವೆ. ಇದು ಸರಿಯಾದ ನಡೆಯಲ್ಲ, ಹೋರಾಟಕ್ಕೆ ಮುಕ್ತ ಅವಕಾಶವಿದೆ. -ಡಾ.ಎಲ್.ಮೂರ್ತಿ

ಎಸ್ಸಿ, ಎಸ್ಟಿಗಳ ಸಮಸ್ಯೆ ಹೆಚ್ಚಿನ ಮಟ್ಟದಲ್ಲಿ ಕಾಡುತ್ತಿದೆ. ಜಮೀನು ವಿವಾದ, ದೌರ್ಜನ್ಯ ಪ್ರಕರಣ, ಪೊಲೀಸ್ ಇಲಾಖೆ ಸರಿಯಾಗಿ ಕ್ರಮ ಜರುಗಿಸದೆ ಇರುವುದು, ಕೌಂಟರ್ ಕೇಸ್‌ಗಳ ದೂರುಗಳೇ ಹೆಚ್ಚಿನ ಮಟ್ಟದಲ್ಲಿವೆ ಎಂದು ಡಾ.ಮೂರ್ತಿ ತಿಳಿಸಿದರು.


ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದಿರುವ ಬಗ್ಗೆ ಆಯೋಗಕ್ಕೆ ದೂರು ಬಂದಿದೆ. ಇಂತಹ ತಾರತಮ್ಯದ ಬಗ್ಗೆ ಆಯೋಗ ಗಂಭೀರವಾಗಿ ಪರಿಗಣಿಸಿದ್ದು, ವಿವಿ ಕುಲಪತಿಗಳನ್ನು ಆಯೋಗದ ಮುಂದೆ ಕರೆಸಿ ತಕ್ಷಣ ಸಂಶೋಧನ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಕೊಡಿಸುವುದಾಗಿ ತಿಳಿಸಿದರು.

ಜಿಲ್ಲೆಯಲ್ಲಿ 135 ಪೋಕ್ಸೋ ಪ್ರಕರಣ: ಮೈಸೂರು ಜಿಲ್ಲೆಯಲ್ಲಿ 135 ಪೋಕ್ಸೋ ಪ್ರಕರಣ ದಾಖಲಾಗಿರುವುದು ಅತ್ಯಂತ ಶೋಚನೀಯ, ಪೋಕ್ಸೋ ಆರೋಪಿಗಳ ಬಗ್ಗೆ ಕಠಿಣ ಕ್ರಮ ಜರುಗಿಸುವಂತೆ ಪೊಲೀಸರಿಗೆ ಸೂಚಿಸಲಾಗಿದೆ. ದೌರ್ಜನ್ಯ ಪ್ರಕರಣ ತ್ವರಿತ ವಿಲೇವಾರಿಗೆ ಸೂಚಿಸಿದ್ದೇನೆ. ಕೌಂಟರ್ ಕೇಸ್‌ಗಳ ಬಗ್ಗೆ ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣ ದಾಖಲಾದ ತಕ್ಷಣ ಪೊಲೀಸರು ಕೌಂಟರ್ ಕೇಸ್‌ಗೆ ಅವಕಾಶ ನೀಡದೆ ಕಾನೂನು ಕ್ರಮ ಜರುಗಿಸಬೇಕು ಎಂದು ಹೇಳಿದರು.

ಗ್ರಾಮಗಳಲ್ಲಿ ಸ್ಮಶಾನ ಇಲ್ಲದಿರುವ ಬಗ್ಗೆ ದೂರುಗಳು ಬಂದಿವೆ. ಕಂದಾಯ ಭೂಮಿಯಲ್ಲಿ ಸ್ಮಶಾನಕ್ಕೆ ಅವಕಾಶ ಕೊಡಬೇಕು, ಎಸ್‌ಸಿಪಿ, ಟಿಎಸ್ಪಿ ಅನುದಾನ ಬಳಕೆ ಮಾಡಿಕೊಂಡು ಎಲ್ಲಾ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಸೂಚಿಸಿರುವುದಾಗಿ ಡಾ.ಮೂರ್ತಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್ಸಿ-ಎಸ್ಟಿ ಆಯೋಗದ ಸದ್ಯರಾದ ದಿವಾಕರ್, ಗೀತಾ ತಾಮೋಷಿ, ಎಂ ತುಂಬಯ್ಯ, ಕಾರ್ಯದರ್ಶಿಗಳಾದ ಡಾ.ಹೆಚ್.ಎನ್ ಶಿವರಾಮ್, ಜಿಲ್ಲಾಧಿಕಾರಿ ಜಿ.ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಅಯುಕ್ತರಾದ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಒ ಎಸ್.ಯುಕೇಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಡದಿ ಟೌನ್‌ಶಿಪ್ ವಿಚಾರ

ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪ ರಾಜಕೀಯ ಪ್ರೇರಿತ



ಮೈಸೂರು, ಜೂ.16(ಜಿಎ)-ಬಿಡದಿ ಟೌನ್‌ಶಿಪ್‌ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ರಾಜಕೀಯ ದ್ವೇಷದ ಕಾರಣಕ್ಕಾಗಿ ವಿರೋಧಿಸುತ್ತಿದ್ದಾರೆ ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990ರಲ್ಲಿ ಬಿಡದಿ ಕೈಗಾರಿಕಾ ಪ್ರದೇಶ ಆರಂಭಗೊಳ್ಳುವ ಮೂಲಕ ಹಲವಾರು ಕಂಪನಿಗಳಿಗೆ ಹಿಂದಿನ ಸರ್ಕಾರ ಜಮೀನು ನೀಡಿತು. 2006ರಲ್ಲಿ ಕುಮಾರಸ್ವಾಮಿ ಸಿಎಂ ಆಗಿದ್ದ ವೇಳೆ 5 ಟೌನ್‌ಶಿಪ್ ನಿರ್ಮಿಸಲು ಕಾರ್ಯ ಯೋಜನೆ ಸಿದ್ದಪಡಿಸಿ ಚಾಲನೆ ನೀಡಲಾಗಿತ್ತು. 2025ರಲ್ಲಿ ಭೂಸ್ವಾಧೀನಕ್ಕೆ ಅಧಿಸೂಚನೆ, 2026 ರಲ್ಲಿ ಭೂಸ್ವಾಧೀನ ವಿಸ್ತರಣೆ ನಡೆದಿದೆ. ಈ ಯೋಜನೆಗೆ ಬಹುತೇಕ ರೈತರ ಸಮ್ಮತಿ ಸೂಚಿಸಿದ್ದಾರೆ. ಹೀಗಾಗಿ ಅಂತಿಮ ಆದೇಶ ಹೊರಡಿಸಲಾಗಿದೆ ಎಂದರು. ಪ್ರತಿ ಎಕರೆಗೆ 2.07 ರಿಂದ 2.5 ಕೋಟಿವರೆಗೆ ನೀಡಲಾಗುತ್ತಿದ್ದು, ಸಿಎಂ ಡಿ.ಕೆ.ಶಿವಕುಮಾರ್ ಜನಪರ ಕಾರ್ಯಕ್ರಮ ವಾಗಿ ಈ ಟೌನ್‌ಶಿಪ್ ಕೈಗೆತ್ತಿಕೊಂಡಿದ್ದಾರೆ. ಹೀಗಾಗಿ ಕುಮಾರಸ್ವಾಮಿ ಟೀಕೆ ರಾಜಕೀಯ ಪ್ರೇರಿತ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿ.ಜಿ.ಕೇಶವ, ಎಸ್. ರಹೀಂ, ರವಿನಾಯಕ್, ಸೈಯ್ಯದ್ ಫಾರೂಕ್, ಕುಕ್ಕರಹಳ್ಳಿ ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಕಬ್ಬಳ್ಳಿ ವೀರಶೈವ ಆಶ್ರಮ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸಾಹುಕಾರ್ ಕಬ್ಬಳ್ಳಿ ಚನ್ನಬಸವಪ್ಪನವರ ವೀರಶೈವ ಆಶ್ರಮವು 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಥಮ ಪಿಯು ವಿದ್ಯಾರ್ಥಿಗಳು ಹಾಗೂ ಪ್ರಥಮ ವರ್ಷದ ಯಾವುದೇ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳು ತಮ್ಮ ಹಿಂದಿನ ವರ್ಷದ ತರಗತಿಯಲ್ಲಿ ಕನಿಷ್ಠ ಶೇ.75 ಅಂಕ ಪಡೆದಿರತಕ್ಕದ್ದು. ಗುಂಡ್ಲುಪೇಟೆ ತಾಲೂಕಿಗೆ ಸೇರಿದ ಬಿಪಿಎಲ್ ಕುಟುಂಬದ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜೂ.17ರಿಂದ 24ರವರೆಗೆ ಅರ್ಜಿಯನ್ನು ಆಶ್ರಮದ ಕಚೇರಿಯಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9538769767 ಸಂಪರ್ಕಿಸಲು ಕೋರಲಾಗಿದೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್ ; ವಿದ್ಯುತ್ ಪರಿಕರ ಭಸ್ಮ

ಅದೃಷ್ಟವಶಾತ್ ಯಾವುದೇ ಅಪಾಯ ಇಲ್ಲ



ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದ ಪ್ಯಾನಲ್ ಬೋರ್ಡ್

ಮೈಸೂರು,ಜೂ.16(ಪಿಎಂ)- ವಿವಿ ಪುರಂನ 6ನೇ ಮೇನ್‌ನ 7ನೇ ಕ್ರಾಸ್‌ನ ಬಿಲ್ಡಿಂಗ್‌ವೊಂದರಲ್ಲಿ ಮಂಗಳವಾರ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಎಲೆಕ್ಟ್ರಿಕಲ್ ಪ್ಯಾನಲ್ ಬೋರ್ಡ್, ಕೇಬಲ್ ಸುಟ್ಟು ಹೋಗಿದ್ದು, ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ದಟ್ಟಗಳ್ಳಿಂ ಬಾರಾ ರೆಸ್ಟೋಬಾರ್‌ನಲ್ಲಿ ಸೋಮವಾರವಷ್ಟೇ ಶಾರ್ಟ್ ಸರ್ಕ್ಯೂಟ್‌ನಿಂದ ಸಂಭವಿಸಿದ ಭಾರೀ ಅಗ್ನಿ ದುರಂತದಲ್ಲಿ ಇಬ್ಬರು ಸಜೀವ ದಹನವಾದರು. ಅದಾಗಲೇ ಮತ್ತೊಂದು ಶಾರ್ಟ್ ಸರ್ಕ್ಯೂಟ್ ಪರಿಣಾಮ ಅಗ್ನಿ ಅವಘಡ ಸಂಭವಿಸಿದೆ. ಸಣ್ಣ ಪ್ರಮಾಣ ಬೆಂಕಿಯಾದ ಕಾರಣ ಹಾಗೂ ಅಗ್ನಿ ಶಾಮಕ ಠಾಣೆ ಸಿಬ್ಬಂದಿ ಯಶಸ್ವಿಯಾಗಿ ಬೆಂಕಿ ನಂದಿಸಿದ ಕಾರಣ ಅನಾಹುತ ತಪ್ಪಿದೆ.

ಯಾವುದೇ ಜೀವ ಹಾನಿಯಾಗಿಲ್ಲ. ಕಟ್ಟಡಕ್ಕೂ ಹಾನಿಯುಂಟಾಗಿಲ್ಲ. ಸೂಪರ್ ಮಾರ್ಕೆಟ್, ಜಿಮ್ ಸೇರಿದಂತೆ ಇನ್ನಿತರ ಮಳಿಗೆ ಹೊಂದಿರುವ ಈ ಕಟ್ಟಡದ ಸ್ಟೇರ್‌ಕೇಸ್ ಸಮೀಪದ ವಿದ್ಯುತ್ ಪೂರೈಕೆ ವ್ಯವಸ್ಥೆಗಾಗಿ ಇದ್ದ ಪ್ಯಾನಲ್ ಬೋರ್ಡ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡಿದೆ. ಪರಿಣಾಮ ಪ್ಯಾನಲ್ ಬೋರ್ಡ್, ಎಂಸಿಬಿ, ಕೇಬಲ್‌ಗೆ ಹಾನಿಯಾಗಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿ ಬಂದ ಹೆಬ್ಬಾಳ ಅಗ್ನಿ ಶಾಮಕ ಠಾಣೆಯ ಠಾಣಾಧಿಕಾರಿ ಜಿ.ಲಕ್ಷ್ಮೀಕಾಂತ್ ಯಾದವ್ ನೇತೃತ್ವದ ಸಿಬ್ಬಂದಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಕಾರ್ಬನ್ ಡೈಆಕ್ಸೈಡ್ ಮೂಲಕ ಯಶಸ್ವಿಯಾಗಿ ಆದಷ್ಟು ಶೀಘ್ರದಲ್ಲಿ ಬೆಂಕಿಯನ್ನು ನಂದಿಸಲಾಯಿತು.

ಇಂದು ಎನ್.ಭಾಸ್ಕರ್ ಹುಟ್ಟುಹಬ್ಬ



ಎನ್.ಭಾಸ್ಕರ್

ಮೈಸೂರು: ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಂಯೋಜಕ ಎನ್.ಭಾಸ್ಕರ್ ಅವರ ಹುಟ್ಟುಹಬ್ಬವನ್ನು ಜೂ.17ರಂದು ವಿವಿಧ ಸೇವಾ ಕಾರ್ಯ ಕ್ರಮಗಳ ಮೂಲಕ ಹಮ್ಮಿಕೊಳ್ಳಲಾಗಿದೆ. ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮತ್ತು ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದು, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುತ್ತದೆ. ಬೆಳಗ್ಗೆ 10 ಗಂಟೆಗೆ ವಿನಾಯಕನಗರದಲ್ಲಿರುವ ಮಾತೃ ಮಂಡಳಿ ಶಾಲೆಯ ಮಕ್ಕಳಿಗೆ ನೋಟ್ ಬುಕ್ಸ್, ಪೆನ್ನುಗಳನ್ನು ವಿತರಿಸಲಾಗುತ್ತದೆ. ಮಧ್ಯಾಹ್ನ 12 ಗಂಟೆಗೆ ಜೆ.ಪಿ.ನಗರದಲ್ಲಿರುವ ನಿವಾಸದಲ್ಲಿ ಸ್ನೇಹಿತರು, ಹಿತೈಷಿಗಳು ಮತ್ತು ಹೋರಾಟಗಾರರ ಸಮ್ಮುಖದಲ್ಲಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು, ನಾಳೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು: ಮೈಸೂರಿನ ಮಹಾನಗರಪಾಲಿಕೆ ವತಿಯಿಂದ ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ದೇವನೂರು ಸಬ್ ಸ್ಟೇಷನ್‌ನಲ್ಲಿ ಮೊದಲನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಿಮಿತ್ತ ಜೂನ್ 17 ಮತ್ತು 18ರಂದು ವಾರ್ಡ್ ನಂ.9 ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ॥ ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ದಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದಿಂದ ವಿಶ್ವ ಪರಿಸರ ದಿನಾಚರಣೆ...



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ವತಿಯಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಮೆನೂ ಪಾಸ್ ಅವೇರ್ನೆಸ್ ಬಗ್ಗೆ ಜೆಎಸ್‌ಎಸ್ ಆಸ್ಪತ್ರೆಯ (ಆಯುರ್ವೇದ ವಿಭಾಗ) ಡಾ.ತೇಜಸ್ವಿನಿ ತಂಡದಿಂದ ಮಾಹಿತಿ, ಸಲಹೆಗಳನ್ನು ನೀಡಲಾಯಿತು. ಉಚಿತ ತಪಾಸಣಾ ಶಿಬಿರ ನಡೆಯಿತು. ಉಪಾಧ್ಯಕ್ಷರಾದ ವಿಜಯ ಮಂಜುನಾಥ್, ಲತಾ ರಮೇಶ್, ಯೋಗೀಶ್ವರಿ, ಭಾಗ್ಯ, ಪ್ರೇಮ ಅಶೋಕ್, ಸರಸ್ವತಿ, ಮೀನಾ, ಲತಾ ಮಹೇಶ್, ಹಂಸ ಇನ್ನಿತರರಿದ್ದರು.

ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಪದಾಧಿಕಾರಿಗಳಿಗೆ ಅಭಿನಂದನೆ



ಮೈಸೂರು ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ನೂತನ ಅಧ್ಯಕ್ಷರು, ಪದಾಧಿಕಾರಿಗಳನ್ನು ಎಂ.ಕೆ.ಸೋಮಶೇಖರ್ ಅಭಿನಂದಿಸಿದರು.

ಮೈಸೂರು, ಜೂ.16(ಎಸ್‌ಪಿಎನ್)- ಮೈಸೂರು ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಚುನಾಯಿತ ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆತ್ಮೀಯವಾಗಿ ಅಭಿನಂದಿಸಿದರು.

ಈ ವೇಳೆ ನೂತನ ಅಧ್ಯಕ್ಷ ಡಿ.ಬಿ. ರಾಜಶೇಖರ್ ಮೂರ್ತಿ, ಉಪಾಧ್ಯಕ್ಷ ಚೆಲುವಯ್ಯ, ಕಾರ್ಯದರ್ಶಿ ಸಿ.ಡಿ.ಬಸವರಾಜು, ಜಂಟಿ ಕಾರ್ಯದರ್ಶಿ ಯು.ಎಸ್. ಸದಾಶಿವ, ಖಜಾಂಚಿ ಬಿ.ಸುರೇಶ್, ಆಡಳಿತ ಮಂಡಳಿ ಸದಸ್ಯರಾಗಿ ವಿ.ಬಿ.ಆನಂದ್ (ವಾಟಾಳ್), ಆರ್.ಶಶಿಕಿರಣ್, ಎಚ್.ಎನ್. ಮಂಜುನಾಥ್, ಎಂ.ಬಿ.ರಾಮಮೂರ್ತಿ, ಕೆ.ಎಸ್.ಕುವಾರ್, ವಿಶ್ವಾರಾಧ್ಯ, ಕೆಂಗೇಗೌಡ, ಎಸ್.ರವಿ, ಕೆ.ಮಂಜುನಾಥ್ ಪ್ರಸಾದ್, ಶ್ರೀನಿವಾಸಯ್ಯ ಅವರನ್ನು ಶಾಲು ಹಾಕಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಜೆ.ವಿನಯ್‌ಕುಮಾರ್, ರಾಚಪ್ಪ, ದೇವರಾಜೇಗೌಡ, ರಮೇಶ್, ಭೈರಪ್ಪ, ಲೋಕೇಶ್ ಉಪಸ್ಥಿತರಿದ್ದರು.

ದೇಶ - ವಿದೇಶ

ಚಹಾ ಕುಡಿದು ಬಿಲ್ ಪಾವತಿಸದೆ ದರ್ಪ ಮೆರೆದ ನಕಲಿ ಪೊಲೀಸ್ ಬಂಧನ



ಉತ್ತರ ಪ್ರದೇಶ: ಚಹಾ ಕುಡಿದು ಹಣ ಪಾವತಿಸಲು ನಿರಾಕರಿಸಿದ್ದಲ್ಲದೆ, ತನಗೆ ಸೆಲ್ಯೂಟ್ ಹೊಡೆಯುವಂತೆ ಅಸಲಿ ಪೊಲೀಸ್ ಸಿಬ್ಬಂದಿ ಮೇಲೆ ದರ್ಪ ತೋರಿದ ನಕಲಿ ಐಪಿಎಸ್ ಅಧಿಕಾರಿಯನ್ನು ಉತ್ತರ ಪ್ರದೇಶದ ಲಖನೌದಲ್ಲಿ ಬಂಧಿಸಲಾಗಿದೆ. ಲಖನೌದ ಪ್ರಮುಖ ರಸ್ತೆಬದಿಯ ಅಂಗಡಿಯಲ್ಲಿ ಚಹಾ ಕುಡಿದ ವ್ಯಕ್ತಿಯೊಬ್ಬ 40 ರೂ. ಬಿಲ್ ಪಾವತಿಸದೆ ತೆರಳುತ್ತಿದ್ದ. ವ್ಯಾಪಾರಿ ಹಣಕ್ಕಾಗಿ ಒತ್ತಾಯಿಸಿದಾಗ ನಾನು ದೊಡ್ಡ ಪೊಲೀಸ್ ಅಧಿಕಾರಿ ಎಂದು ದರ್ಪ ತೋರಿದ್ದರಿಂದ ಬೇಸತ್ತ ಅಂಗಡಿ ಮಾಲೀಕ ಪೊಲೀಸರಿಗೆ ದೂರು ನೀಡಿದ. ಸ್ಥಳಕ್ಕೆ ಧಾವಿಸಿದ ಪೊಲೀಸರು ಆ ವ್ಯಕ್ತಿಯನ್ನು ತಡೆದು ಪ್ರಶ್ನಿಸಿದಾಗ, ಕಾನ್‌ಸ್ಟೆಬಲ್ ಗಳ ಮೇಲೆಯೇ ಮುಗಿಬಿದ್ದಿದ್ದಾನೆ. ತಾನು ನೋಯ್ಡಾ ವಲಯದ ಹಿರಿಯ ಐಪಿಎಸ್ ಅಧಿಕಾರಿ. ನನಗೆ ಸಲ್ಯೂಟ್ ಮಾಡಿ. ನೀವೇಕೆ ನನಗೆ ಇನ್ನೂ ಸಲ್ಯೂಟ್ ಹೊಡೆದಿಲ್ಲ ಎಂದು ಕಿರುಚುತ್ತಾ ಪೊಲೀಸರನ್ನು ಹೆದರಿಸಲು ಯತ್ನಿಸಿದ್ದಾನೆ. ಕಾನ್‌ಸ್ಟೆಬಲ್‌ಗಳು ಹೆದರದೆ ಶಾಂತವಾಗಿ, ಸಮವಸ್ತ್ರದಲ್ಲಿ ಇಲ್ಲದ ಯಾರಿಗೂ ನಾವು ಸೆಲ್ಯೂಟ್ ಹೊಡೆಯುವುದಿಲ್ಲ. ಪೊಲೀಸ್ ಅಧಿಕಾರಿಯಾಗಿದ್ದರೆ, ಗುರುತಿನ ಚೀಟಿ ತೋರಿಸಿ ಎಂದಿದ್ದಾರೆ. ಆರೋಪಿ ಬಳಿ ಯಾವುದೇ ಗುರುತಿನ ಚೀಟಿ ಇಲ್ಲದ ಕಾರಣ ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆತ ನಕಲಿ ಪೊಲೀಸ್ ಎನ್ನುವುದು ಸ್ಪಷ್ಟವಾಗಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ.

ಅಮೆರಿಕ ವಾಯುಪಡೆಯ ಬಾಂಬರ್ ವಿಮಾನ ಪತನ; 8 ಮಂದಿ ದುರ್ಮರಣ

ವಾಷಿಂಗ್ಟನ್: ಅಮೆರಿಕ ವಾಯುಪಡೆಯ ಶಕ್ತಿಶಾಲಿ ಬಿ-52 ಬಾಂಬರ್ ಪತನಗೊಂಡಿದ್ದು, ವಿಮಾನದಲ್ಲಿದ್ದ ಎಲ್ಲಾ 8 ಮಂದಿ ಸಾವನ್ನಪ್ಪಿದ ಘಟನೆ ಕ್ಯಾಲಿಫೋರ್ನಿಯಾದಲ್ಲಿ ಸಂಭವಿಸಿದೆ.



ವಿಮಾನ ಅಪಘಾತವು ಲಾಸ್ ಏಂಜಲೀಸ್‌ನ ಉತ್ತರಕ್ಕೆ ಸುಮಾರು 95 ಕಿಮೀ ದೂರದಲ್ಲಿ ಸಂಭವಿಸಿದೆ. ವಿಮಾನ ಪತನಗೊಂಡ ಕೂಡಲೇ ಸ್ಥಳದಲ್ಲಿ ಭಾರೀ ಬೆಂಕಿ ಹಾಗೂ ದಟ್ಟ ಹೊಗೆ ಆವರಿಸಿದೆ. ದಕ್ಷಿಣ ಕ್ಯಾಲಿ ಫೋರ್ನಿಯಾದ ಮೊಜಾವೆ ಮರುಭೂಮಿ ಯಲ್ಲಿರುವ ಎಡ್ವರ್ಡ್ಸ್ ವಾಯುನೆಲೆಯಲ್ಲಿ ಸೋಮವಾರ ಟೇಕ್-ಆಫ್ ಆದ ಸ್ವಲ್ಪ ಸಮಯದಲ್ಲೇ ವಿಮಾನ ದುರಂತಕ್ಕೀಡಾ ಗಿದೆ ಎನ್ನಲಾಗಿದೆ. ಘಟನೆ ತಿಳಿಯುತ್ತಿದ್ದಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿ ತುರ್ತು ಕಾರ್ಯಾಚರಣೆ ಕೈಗೊಂಡಿದ್ದಾರೆ. 8 ಎಂಜಿನ್‌ಗಳಿರುವ ಬಿ-52 ಬಾಂಬರ್ ವಿಮಾನವು ಪರಮಾಣು ಮತ್ತು ಸಾಂಪ್ರದಾಯಿಕ ಬಾಂಬ್‌ಗಳನ್ನ ಸಾಗಿಸಲು ವಿನ್ಯಾಸಗೊಳಿಸಲಾಗಿತ್ತು. ಇದು ರಾಡಾರ್ ಆಧುನೀಕರಣ ಕಾರ್ಯಕ್ರಮದ ಭಾಗವಾಗಿತ್ತು. ಅಪಘಾತಕ್ಕೆ ಇನ್ನೂ ನಿಖರ ಕಾರಣ ತಿಳಿದುಬಂದಿಲ್ಲ. ಈ ಬಗ್ಗೆಯೂ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ಬಾಂಗ್ಲಾ ವಲಸಿಗರ ಗಡಿಪಾರು ಚುರುಕು; ಬಿಎಸ್‌ಎಫ್, ಬಿಜಿಬಿ ಸಂಘರ್ಷ

ನವದೆಹಲಿ: ಅಕ್ರಮ ವಲಸಿಗರ ಗಡಿಪಾರು ಪ್ರಕ್ರಿಯೆ ಆರಂಭವಾದ ಬಳಿಕ ಭಾರತ-ಬಾಂಗ್ಲಾದೇಶ ನಡುವೆ ಗಡಿಯಲ್ಲಿ ಉದ್ವಿಗ್ನತೆ ಉಂಟಾಗಿದೆ. ದೇಶದಲ್ಲಿರುವ ಅಕ್ರಮ ಬಾಂಗ್ಲಾ ವಲಸಿಗರನ್ನು ಅವರ ದೇಶಕ್ಕೆ ರವಾನಿಸುವ ಕಾರ್ಯ ಚುರುಕಾಗಿದ್ದು, ಅತ್ತ ಬಾಂಗ್ಲಾದೇಶವು ತನ್ನದೇ ಪ್ರಜೆಗಳನ್ನು ದೇಶದೊಳಗೆ ಬಿಟ್ಟುಕೊಳ್ಳಲು ಹಿಂದೇಟು ಹಾಕುತ್ತಿದೆ. ಪರಿಣಾಮ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ಗಡಿಯಲ್ಲಿ 3 ದಿನಗಳಿಂದ ಭಾರತ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಹಾಗೂ ಬಾಂಗ್ಲಾದೇಶ ಗಡಿ ರಕ್ಷಣಾ ಪಡೆ(ಬಿಜಿಬಿ) ನಡುವೆ ಸಂಘರ್ಷ ತಲೆದೋರಿದೆ. ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದ 12 ಮಂದಿ ಅಕ್ರಮ ವಲಸಿಗರನ್ನು ಗುರುತಿಸಿದ್ದ ಸರಕಾರ ಗಡಿಪಾರು ಮಾಡಲು ಬಿಎಸ್‌ಎಫ್ ನಿಯಂತ್ರಣಕ್ಕೆ ವಹಿಸಿತು. ನಾಡಿಯಾ ಜಿಲ್ಲೆಗೆ ಹೊಂದಿಕೊಂಡ ಗಡಿ ಮೂಲಕ ಬಾಂಗ್ಲಾದೇಶಕ್ಕೆ ರವಾನಿಸಲಾಯಿತು. ಆದರೆ, ಭಾರತ ಗಡಿ ಪಾರು ಮಾಡಿದ ನಾಗರಿಕರು ಭಾರತೀಯರು ಎಂದು ಹೇಳಿ ಮರಳಿ ಹಿಂದಕ್ಕೆ ಕಳಿಸಲು ಯತ್ನಿಸಿತು. ಗಡಿ ದಾಟಲೆತ್ನಿಸಿದ ವಲಸಿಗರನ್ನು ಬಿಎಸ್‌ಎಫ್ ತಡೆಯಿತು. ಈ ವೇಳೆ ಬಿಎಸ್‌ಎಫ್ ಹಾಗೂ ಬಿಜಿಬಿ ನಡುವೆ ಘರ್ಷಣೆ ನಡೆಯಿತು. ಬಿಕ್ಕಟ್ಟು ಇತ್ಯರ್ಥಗೊಳ್ಳದ ಹಿನ್ನೆಲೆಯಲ್ಲಿ 12 ಮಂದಿ ಬಾಂಗ್ಲಾ ನಾಗರಿಕರು ಗಡಿಗೆ ಹೊಂದಿಕೊಂಡ ರಾಣಿನಗರದ ಭತ್ತದ ಗದ್ದೆಯಲ್ಲಿ ವಾಸ್ತವ್ಯ ಹೂಡಿದ್ದಾರೆ. ಇವರಿಗೆ ಗಡಿಯಲ್ಲಿನ ಭಾರತದ ಸ್ಥಳೀಯರು ಊಟ, ವಸತಿ ಕಲ್ಪಿಸಿದ್ದಾರೆ ಎಂದು ವರದಿಯಾಗಿದೆ.

ರಷ್ಯಾದ ಬಾಂಬರ್ ವಿಮಾನ ಪತನ; ನಾಲ್ವರು ಪ್ರಾಣಾಪಾಯದಿಂದ ಪಾರು

ಮಾಸ್ಕೋ: ರಷ್ಯಾದ ಸೈಬೀರಿಯಾ ಪ್ರಾಂತ್ಯದ ಇರ್ಕುಟ್ಸ್ಕ ಪ್ರದೇಶದಲ್ಲಿ ತರಬೇತಿ ಹಾರಾಟ ನಡೆಸುತ್ತಿದ್ದ



ರಷ್ಯಾದ ವಾಯುಸೇನೆಗೆ ಸೇರಿದ ಬೃಹತ್ ಟಿಯು-22ಎಂ3 ಕಾರ್ಯತಂತ್ರದ ಬಾಂಬರ್ ವಿಮಾನ ಪತನಗೊಂಡಿದ್ದು, ಅದೃಷ್ಟವಶಾತ್ ವಿಮಾನದಲ್ಲಿದ್ದ ನಾಲ್ವರು ಸಿಬ್ಬಂದಿ ಸಮಯಪ್ರಜ್ಞೆ ಮೆರೆದು ಸುರಕ್ಷಿತವಾಗಿ ಹೊರಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತಕ್ಕೀಡಾದ ವಿಮಾನವು ತರಬೇತಿ ಹಾರಾಟದಲ್ಲಿದ್ದ ಕಾರಣ ಯಾವುದೇ ಯುದ್ಧ ಸಾಮಗ್ರಿ ಅಥವಾ ಬಾಂಬ್‌ಗಳನ್ನು ಹೊತ್ತೊಯ್ದಿರಲಿಲ್ಲ. ವಿಮಾನವು ಕಾಮೆಂಕಾ ಗ್ರಾಮದ ಬಳಿಯ ಅಂಗಾರ ನದಿಯ ಅರಣ್ಯ ಪ್ರದೇಶದಲ್ಲಿ ಬಿದ್ದಿರುವುದರಿಂದ ಸಾರ್ವಜನಿಕ ಆಸ್ತಿಗೂ ಯಾವುದೇ ಹಾನಿಯಾಗಿಲ್ಲ. ಇರ್ಕುಟ್ಸ್ಕ ಗವರ್ನರ್ ಇಗೋರ್ ಕೊಬ್ಜೆವ್ ಅವರ ಪ್ರಕಾರ, ವಿಮಾನದ ಎಂಜಿನ್ ವೈಫಲ್ಯವೇ ಈ ಭೀಕರ ಅಪಘಾತಕ್ಕೆ ಪ್ರಾಥಮಿಕ ಕಾರಣ ಎನ್ನಲಾಗಿದೆ. ಗಾಯಗೊಂಡ ಸಿಬ್ಬಂದಿಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ವಿಮಾನವು ಹೈಪರ್‌ಸಾನಿಕ್ ಕಿಂಜಾಲ್ ಕ್ಷಿಪಣಿಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿತ್ತು ಎನ್ನಲಾಗಿದೆ.

ಕೇರಳದಲ್ಲಿ ಈ ತಿಂಗಳು 70 ಶಿಗೆಲ್ಲಾ ಪ್ರಕರಣ ವರದಿ



ಕೇರಳ: ರಾಜ್ಯದಲ್ಲಿ ಶಿಗೆಲ್ಲಾ ಪ್ರಕರಣಗಳ ಹೆಚ್ಚಳಕ್ಕೆ ಅನೈರ್ಮಲ್ಯ ಪ್ರಮುಖ ಕಾರಣ ಎಂದು ತಿಳಿದುಬಂದಿದೆ. ಈ ಬಗ್ಗೆ ಮಾತನಾಡಿರುವ ಕೇರಳದ ಆರೋಗ್ಯ ಸಚಿವ ಕೆ.ಮುರಳೀಧರನ್, ಈ ತಿಂಗಳು 70 ಶಿಗೆಲ್ಲಾ ಪ್ರಕರಣಗಳು ವರದಿಯಾಗಿದ್ದು, ಸೋಂಕಿನಿಂದ ಐದು ಮಂದಿ ಮೃತಪಟ್ಟಿದ್ದಾರೆ. ಜನವರಿಯಿಂದ ಈವರೆಗೆ 146 ಶಿಗೆಲ್ಲಾ ಪ್ರಕರಣಗಳು ವರದಿ ಯಾಗಿದ್ದು, ಕೇವಲ ಒಂದು ನಿಫಾ ಪ್ರಕರಣ ಮಾತ್ರ ಪಾಸಿಟಿವ್ ಆಗಿದೆ. ಈ ವರ್ಷ ಸಾಂಕ್ರಾಮಿಕ ರೋಗ ಹೆಚ್ಚಾಗಲು ಪ್ರಮುಖ ಕಾರಣ ನೈರ್ಮಲ್ಯದ ಕೊರತೆ. ಈ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಎದುರಿಸಲು ತಜ್ಞರ ನೇತೃತ್ವದ ಉನ್ನತ ಅಧಿಕಾರಿಗಳ ಸಮಿತಿ ರಚಿಸುವುದಾಗಿ ಹೇಳಿದ್ದಾರೆ.

ಸಾಂಕ್ರಾಮಿಕ ರೋಗಗಳ ಹಠಾತ್ ಏರಿಕೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯೂ ಕಾರಣ. ಮಳೆಗಾಲ ಪೂರ್ವ ನೈರ್ಮಲ್ಯದ ಬಗ್ಗೆ ಅಭಿಯಾನ ನಡೆಸಲಾಗಲಿಲ್ಲ. ಅನೈರ್ಮಲ್ಯದಿಂದ ಕೂಡಿದ ರಸ್ತೆಬದಿಯ ತಿನಿಸುಗಳ ವಿರುದ್ಧ ಕಠಿಣ ಕ್ರಮಕ್ಕೆ ನಿರ್ದೇಶಿಸಲಾಗಿದೆ. ಆಹಾರ ಸುರಕ್ಷತಾ ಮಾನದಂಡಗಳನ್ನು ಅನುಸರಿಸದ ಅಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ. ಸಾಂಕ್ರಾಮಿಕ ರೋಗಗಳು ಹರಡುವುದ ತಡೆಗಟ್ಟಲು ಆರೋಗ್ಯ ತಜ್ಞರನ್ನೊಳಗೊಂಡ ಉನ್ನತಾಧಿಕಾರ ಸಮಿತಿ ರಚಿಸಲಾಗುವುದು. ಜಿಲ್ಲಾ ಮಟ್ಟದಲ್ಲೂ ಮೇಲ್ವಿಚಾರಣಾ ಘಟಕ ಸಹ ರಚಿಸಲಾಗುವುದು. ಸಂಪೂರ್ಣ ಶುಚಿತ್ವವನ್ನು ಖಚಿತಪಡಿಸಿಕೊಳ್ಳಲು ಡಿಸಿಗಳು ಮತ್ತು ಡಿಎಂಒಗಳನ್ನೊಳಗೊಂಡ ಉನ್ನತ ಮಟ್ಟದ ಆನ್‌ಲೈನ್ ಪರಿಶೀಲನಾ ಸಭೆ ನಿಗದಿಪಡಿಸಲಾಗಿದೆ.

ಮೈಸೂರು ಮಿತ್ರ ಬುಧವಾರ 17 ಜೂನ್ 2026

ಗಾಂಜಾ ಮಾರುತ್ತಿದ್ದ ಮೂವರು ಆರೋಪಿಗಳ ಬಂಧನ

ಮಡಿಕೇರಿ, ಜೂ.16–ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ನೆಲ್ಲಿಹುದಿಕೇರಿ ಗ್ರಾಮದ ಕಾವೇರಿ ಹೊಳೆ ಸೇತುವೆ ಬಳಿ ಕುಂಬಾರಗುಂಡಿಗೆ ತೆರಳುವ ರಸ್ತೆ ಬದಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ 3 ಮಂದಿ ಆರೋಪಿಗಳನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ಸಿದ್ದಾಪುರ ಗುಹ್ಯ ಗ್ರಾಮದ ಎಸ್.ಪಿ. ಧನುಷ್(23), ಕರಡಿಗೋಡು ನಿವಾಸಿ ಜಿ.ಹೆಚ್. ಗೌತಮ್(19), ನೆಲ್ಲಿಹುದಿಕೇರಿ ನಿವಾಸಿ ಕೆ.ಎ.ಅನ್ಸಾದ್(23) ಬಂಧಿತ ಆರೋಪಿಗಳಾಗಿದ್ದಾರೆ. ಗಾಂಜಾ ಸಾಗಾಟಕ್ಕೆ ಬಳಸಿದ ಬ್ಯಾಗ್ ಮತ್ತು 3 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಮಡಿಕೇರಿ ಡಿವೈಎಸ್ಪಿ ಪಿ.ಎ.ಸೂರಜ್ ನಗರ ಪ್ರಭಾರ ವೃತ್ತ ನಿರೀಕ್ಷಕ ಹೆಚ್.ವಿ.ಚಂದ್ರಶೇಖರ್, ಸಿದ್ದಾಪುರ ಠಾಣಾ ಎಎಸ್ಐ ಹೆಚ್.ಕೆ. ಮಂಜುನಾಥ್‌ಹಾಗೂ ಸಿಬ್ಬಂದಿ ಡಿ.ಎಸ್.ರಾಜೇಶ್ ಪ್ರಕಾಶ್, ಡಿಸಿಆರ್‌ಬಿ ನಿರಂಜನ್, ಯೋಗೇಶ್, ಪ್ರವೀಣ್, ಮಣಿಕಂಠ ಅವರುಗಳು ಆರೋಪಿಗಳ ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಕೋಕಾ ಕಾಯಿದೆಯಡಿ ಮೂವರು ರೌಡಿಗಳ ಬಂಧನ

ಮಡಿಕೇರಿ, ಜೂ.16–ಜಿಲ್ಲೆಯಲ್ಲಿ ರೌಡಿ ಚಟುವಟಿಕೆಗಳ ಮೇಲೆ ಪೊಲೀಸ್ ಇಲಾಖೆ ನಿಗಾ ವಹಿಸಿದ್ದು, ಇದೇ ಮೊದಲ ಬಾರಿಗೆ ಒಟ್ಟು 3 ಮಂದಿ ರೌಡಿ ಶೀಟರ್‌ಗಳನ್ನು ಕೋಕಾ ಕಾಯಿದೆ(ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯಿದೆ 2000) ಅಡಿಯಲ್ಲಿ ಬಂಧಿಸಿ ಜೈಲಿನಲ್ಲಿಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕರ ಆದೇಶದನ್ವಯ 3 ಮಂದಿ ಆರೋಪಿಗಳ ವಿರುದ್ಧ ಕೆ–ಕೋಕಾ ಕಾಯಿದೆ ಬಳಸಲಾಗಿದೆ. ಗೌಳಿ ಬೀದಿ ನಿವಾಸಿ ಪ್ರಮೋದ್ ಅಲಿಯಾಸ್ ಡಿಸ್ಕೋ, ದರ್ಶನ್ ಅಲಿಯಾಸ್ ಗಿಲ್ಲಿ, ಕುಶಾಲನಗರ ನಿವಾಸಿ ಶರೀಫ್ ಎಂಬವರನ್ನು ಈ ಕಾಯಿದೆ ಅಡಿಯಲ್ಲಿ ಬಂಧಿಸಲಾಗಿದೆ. ಈ ಪೈಕಿ ಪ್ರಮೋದ್ ವಿರುದ್ಧ 18 ಪ್ರಕರಣ, ದರ್ಶನ್ ವಿರುದ್ಧ 9 ಪ್ರಕರಣಗಳಿದ್ದು, ಇವರಿಬ್ಬರು ಸಂಘಟಿತ 9 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ.



ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ.

ಕುಶಾಲನಗರ ನಿವಾಸಿ ಶರೀಫ್ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ 11 ಪ್ರಕರಣಗಳಿದ್ದು, 10 ವರ್ಷಗಳಿಂದ ರೌಡಿ ಶೀಟರ್ ಪಟ್ಟಿಯಲ್ಲಿದ್ದ ಎಂದು ಎಸ್.ಪಿ ತಿಳಿಸಿದರು. ಈ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದ್ದು, ಕೋಕಾ ಕಾಯಿದೆ ಅಡಿ ತನಿಖೆಯನ್ನು ಡಿವೈಎಸ್‌ಪಿ ಮಟ್ಟದ ಅಧಿಕಾರಿಗಳು ನಡೆಸಲಿದ್ದಾರೆ ಎಂದರು.

ಡ್ರಗ್ ಪೆಡ್ಲರ್‌ಗಳು ಜೈಲಿಗೆ: ಮೇ.31 ರವರೆಗೆ ಜಿಲ್ಲೆಯಲ್ಲಿ ಒಟ್ಟು 215 ಎನ್‌ಡಿಪಿಎಸ್ ಪ್ರಕರಣಗಳು ದಾಖಲಾಗಿದೆ. ಒಟ್ಟು 27 ಕೆ.ಜಿ ಗಾಂಜಾ ಹಾಗೂ 46 ಗ್ರಾಂ ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ. ಒಟ್ಟು 38 ಮಂದಿ ಪೆಡ್ಲರ್‌ಗಳು ಕೂಡ ಪ್ರಕರಣದಲ್ಲಿ ಭಾಗಿಯಾಗಿದ್ದು, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ನಾಪೋಕ್ಲು ನಿವಾಸಿ ಅಶ್ರಫ್ ಎಂಬಾತ 2018ರಿಂದ 2025ರವರೆಗೆ ಒಟ್ಟು 6 ಸಿಂಥೆಟಿಕ್ ಡ್ರಗ್ಸ್ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ. ಆತನ ವಿರುದ್ಧ ಪ್ರಿವೆಂಟಿವ್ ಡಿಟೆಕ್ಷನ್ ಎನ್‌ಡಿಪಿಎಸ್ ಕಾಯಿದೆ ಅಡಿಯಲ್ಲಿ ಬಂಧಿಸಿ ಬಳ್ಳಾರಿ ಜೈಲಿಗೆ ಕಳುಹಿಸಲಾಗಿದೆ. ಮೇ ತಿಂಗಳಲ್ಲಿ 15 ಕೆ.ಜಿ. ಗಾಂಜಾ ವಶಕ್ಕೆ ಪಡೆಯಲಾಗಿದೆ.

ಎನ್‌ಡಿಪಿಎಸ್ ಕಾಯಿದೆ ಅಡಿ ನಿರಂತರ ಚಟುವಟಿಕೆಯಲ್ಲಿದ್ದ ಮಡಿಕೇರಿ ನಿವಾಸಿ ಪೆಡ್ಲರ್ ನೌಫಾಲ್ ಎಂಬಾತನ ವಿರುದ್ಧ 2019ರಿಂದ 2026ರವರೆಗೆ 8 ಎನ್‌ಡಿಪಿಎಸ್ ಪ್ರಕರಣವಿದ್ದು, ಕೊಡಗು, ಬೆಂಗಳೂರು ಸೇರಿ ವಿವಿಧ ಕಡೆಗಳಲ್ಲಿ ಪ್ರಕರಣಗಳಿವೆ. ಈ ಹಿನ್ನೆಲೆಯಲ್ಲಿ ಈತನನ್ನು ಕೂಡ ಪ್ರಿವೆಂಟಿವ್ ಡಿಟೆಕ್ಷನ್ ಎನ್‌ಡಿಪಿಎಸ್ ಕಾಯಿದೆ ಅಡಿಯಲ್ಲಿ ಬಂಧಿಸಿ ಕಲಬುರಗಿ ಜೈಲಿಗೆ ಸ್ಥಳಾಂತರಿಸಲಾಗಿದೆ ಎಂದು ಹೇಳಿದರು.

ಮುಂಗಾರು ಅವಧಿಯಲ್ಲಿ ರಕ್ಷಣಾ ಕಾರ್ಯ ಕೈಗೊಳ್ಳಲು ಜಿಲ್ಲಾ ಪೊಲೀಸ್ ಇಲಾಖೆ ಸಜ್ಜಾಗಿದೆ. ಒಟ್ಟು 4 ರಕ್ಷಣಾ ತಂಡಗಳನ್ನು ಈಗಾಗಲೇ ಸಿದ್ಧತೆಯಲ್ಲಿಡಲಾಗಿದೆ. ಎನ್‌ಡಿ ಆರ್‌ಎಫ್ ತಂಡ ಕೂಡ ಜಿಲ್ಲೆಯಲ್ಲಿ ನಿಯೋಜಿತವಾಗಿದೆ. ಭೂಕುಸಿತ ಮತ್ತು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಈಗಾಗಲೇ ಹಾರಂಗಿ ಹಿನ್ನೀರಿನಲ್ಲಿ ಪೂರ್ವಭಾವಿ ತರಬೇತಿ ನೀಡಲಾಗಿದೆ. ರಕ್ಷಣಾ ಪರಿಕರಗಳು, ಔಷಧ ಮತ್ತು ವಿವಿಧ ಕಿಟ್‌ಗಳು ಕೂಡ ಸಿದ್ದವಾಗಿವೆ. ರಸ್ತೆ ಸಂಚಾರ ಬಂದ್ ಆದಲ್ಲಿ ಪರ್ಯಾಯ ಮಾರ್ಗಗಳು, ಜೀಪು, ಜೆಸಿಬಿ, ಹಿಟಾಚಿ ಯಂತ್ರಗಳು, ಪ್ರವಾಹದ ವೇಳೆ ಜನ ಜಾನುವಾರುಗಳ ರಕ್ಷಣೆಗಾಗಿ ನುರಿತ ಈಜುಗಾರರನ್ನು ಗುರುತು ಮಾಡಲಾಗಿದೆ ಎಂದರು

ಕಾಡಾನೆ ಹಾವಳಿಗೆ ಕಡಿವಾಣ ಹಾಕಲು ಬೆಂಗಳೂರು ಕೊಡವ ಸಮಾಜ ಆಗ್ರಹ



ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಕೊಡವ ಸಮಾಜ ಮನವಿ ಸಲ್ಲಿಸಿತು.

ಮಡಿಕೇರಿ, ಜೂ.16–ಕಾಡಾನೆ ಮಾನವ ಸಂಘರ್ಷ ತೀವ್ರಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಬೆಂಗಳೂರು ಕೊಡವ ಸಮಾಜ ಕಾಡಾನೆ ಹಾವಳಿಗೆ ಕಡಿವಾಣ ಹಾಕುವಂತೆ ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮೀನಾಕ್ಷಿ ನೇಗಿ ಅವರನ್ನು ಒತ್ತಾಯಿಸಿದೆ.

ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚಿರಿಯಪಂಡ ಸುರೇಶ್ ಚಂಗಪ್ಪ ನೇತೃತ್ವದಲ್ಲಿ ನಿಯೋಗ ಬೆಂಗಳೂರಿನ ಅರಣ್ಯ ಭವನಕ್ಕೆ ತೆರಳಿ ಕಾಡಾನೆ ಮತ್ತು ವನ್ಯಜೀವಿ ಹಾವಳಿ ತಡೆಗೆ ಸೂಕ್ತಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದರು. ಅರಣ್ಯದ ಅಂಚಿನಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಕೆ, ಸೋಲಾರ್ ಬೇಲಿ ಮತ್ತು ಕಂದಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು. ಅರಣ್ಯದಲ್ಲಿ ಕಾಡಾನೆಗಳಿಗೆ ಅಗತ್ಯವಾದ ಬಿದಿರು, ಹಲಸು ಮತ್ತಿತರ ಆಹಾರವಾಗುವ ಗಿಡ ಮರಗಳನ್ನು ಬೆಳೆಸುವುದು, ಉಪಟಳ ನೀಡುವ ಕಾಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರ, ಕಾಡಾನೆಗಳ ಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿತು. ಮನವಿ ಸ್ವೀಕರಿಸಿದ ಪಿಸಿಸಿಎಫ್ ಡಾ.ಮೀನಾಕ್ಷಿ, ಈ ಬಗ್ಗೆ ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗುತ್ತಿದೆ ಎಂದು ಭರವಸೆ ನೀಡಿದ್ದಾರೆ.

ಕುಶಾಲನಗರ, ವಿರಾಜಪೇಟೆಯಲ್ಲಿ ಎನ್‌ಡಿಆರ್‌ಎಫ್ ತಂಡ ಪರಿಶೀಲನೆ



ಎನ್‌ಡಿಆರ್‌ಎಫ್ ತಂಡ ಮುಂಗಾರು ಸಂಬಂಧ ಸ್ಥಳ ಪರಿಶೀಲನೆ ನಡೆಸಿತು.

ಮಡಿಕೇರಿ, ಜೂ.16–ಮಳೆಗಾಲದ ರಕ್ಷಣಾ ಕಾರ್ಯಗಳಿಗಾಗಿ ಜಿಲ್ಲೆಗೆ ಆಗಮಿಸಿರುವ ಎನ್‌ಡಿಆರ್‌ಎಫ್ ಯೋಧರ ತಂಡ ಕುಶಾಲನಗರ ಹಾಗೂ ವಿರಾಜಪೇಟೆ ತಾಲೂಕಿನ ಸಿದ್ದಾಪುರ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದೆ.

ನೆಲ್ಯ ಹುದಿಕೇರಿ, ಗುಹ್ಯ, ಕರಡಿಗೋಡು ವ್ಯಾಪ್ತಿಯ ಕಾವೇರಿ ನದಿ ಪ್ರವಾಹ ಪೀಡಿತ ಗ್ರಾಮಗಳಿಗೆ ತೆರಳಿ ಮಾಹಿತಿ ಸಂಗ್ರಹಿಸಲಾಯಿತು. ಈ ಗ್ರಾಮಗಳ ಜನಸಂಖ್ಯೆ, ರಸ್ತೆ ಮಾರ್ಗ, ಈಗಾಗಲೇ ಗುರುತು ಮಾಡಲಾಗಿರುವ ಕಾಳಜಿ ಕೇಂದ್ರ ಸೇರಿ ವಿವಿಧ ವಿಚಾರಗಳ ಕುರಿತು ಕಂದಾಯ ಮತ್ತು ಗ್ರಾಮಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದರು. ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ಅನನ್ಯ ವಾಸುದೇವ್, ಅಮ್ಮತ್ತಿ ಹೋಬಳಿ ಕಂದಾಯ ಇಲಾಖೆ ಅಧಿ ಕಾರಿ ಸತೀಶ್ ಕುಮಾರ್, ಎನ್‌ಡಿಆರ್‌ಎಫ್ ಕಮಾಂಡರ್ ರಾಮ್‌ಭುಜ್ ಹಾಜರಿದ್ದರು.

ಕಡ್ಡಾಯ ನೋಂದಣಿಗೆ ಹೋಂ ಸ್ಟೇ ಮಾಲೀಕರಿಗೆ ಸೂಚನೆ

ಮಡಿಕೇರಿ ಜೂ.16–ಜಿಲ್ಲೆಯಲ್ಲಿ ಹೋಂ–ಸ್ಟೇ ನಡೆಸುವ ಮಾಲೀಕರು ಕಡ್ಡಾಯವಾಗಿ ನಿಯಮಾನುಸಾರ ಹೋಂ–ಸ್ಟೇ ನೋಂದಣಿ ಮಾಡಿಕೊಳ್ಳಬೇಕೆಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಶಶಿಧರ ತಿಳಿಸಿದ್ದಾರೆ.

ಹೋಂ–ಸ್ಟೇ ನಡೆಸುವ ಮಾಲೀಕರು ಪ್ರವಾಸಿಗರ ಮನರಂಜನೆಗಾಗಿ ಹೋಂ–ಸ್ಟೇಗಳಲ್ಲಿ ಈಜುಕೊಳ, ಜಿಪ್‌ಲೈನ್, ಕಾಯಾಕಿಂಗ್ ಮತ್ತು ಇತರೆ ಸಾಹಸ ಚಟುವಟಿಕೆ ಅಳವಡಿಸಿಕೊಂಡಿರುತ್ತಾರೆ. ಈ ಚಟುವಟಿಕೆಗಳನ್ನು ನಡೆಸುವ ಸಂಬಂಧ ಸರಿಯಾದ ಮಾರ್ಗಸೂಚಿ ಅನುಸರಿಸುವುದು ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಂಡಿರಬೇಕು ಇವುಗಳಿಂದ ಪ್ರವಾಸಿಗರಿಗೆ ತೊಂದರೆಗಳು ಉಂಟಾದಲ್ಲಿ ಮಾಲೀಕರೇ ನೇರ ಹೊಣೆಗಾರರಾಗಿರುತ್ತಾರೆ. ಹೋಂ–ಸ್ಟೇಗಳಲ್ಲಿ ಗ್ಯಾಸ್ ಗೀಸರ್ ಬಳಸುವಂತಿಲ್ಲ ಎಂದು ಈಗಾಗಲೇ ತಿಳಿಸಿದ್ದರೂ ಸಹ, ಹಲವು ಹೋಂ–ಸ್ಟೇಗಳಲ್ಲಿ ಗ್ಯಾಸ್ ಗೀಸರ್ ಬಳಕೆಯಲ್ಲಿರುವುದು ಕಂಡು ಬಂದಿದೆ. ಗ್ಯಾಸ್‌ಗೀಸರ್ ಬಳಕೆಯಿಂದ ಅನಾಹುತಗಳು ಸಂಭವಿಸಿದಲ್ಲಿ ಹೋಂ–ಸ್ಟೇ ಮಾಲೀಕರೇ ನೇರ ಹೊಣೆಗಾರರಾಗಿರುತ್ತಾರೆ. ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ

ಯೋಗ ದಿನಾಚರಣೆ ಅಂಗವಾಗಿ ಮಡಿಕೇರಿಯಲ್ಲಿ ಜಾಥಾ

ಮಡಿಕೇರಿ ಜೂ.16–ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಯೋಗ ಒಕ್ಕೂಟ, ಮಡಿಕೇರಿ, ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಪೋಲೀಸ್ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಗರದ ಗಾಂಧಿ ಮೈದಾನದಿಂದ ಹಳೆಯ ಖಾಸಗಿ ಬಸ್ ನಿಲ್ದಾಣ ಮೂಲಕ ಗಾಂಧಿ ಮೈದಾನದವರೆಗೆ ಜಾಥಾ ನಡೆಯಿತು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಹಸಿರು ನಿಶಾನೆ ತೋರುವುದರ ಮೂಲಕ ಜಾಥಾಗೆ ಚಾಲನೆ ನೀಡಿದರು. ನಗರಸಭೆ ಸದಸ್ಯರಾದ ಶ್ರೀನಾಥ್, ಜಿಲ್ಲಾ ಆಯುಷ್ ಅಧಿಕಾರಿ ಡಾ॥ ಜಿ. ಶೈಲಜಾ. ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡಾ॥ ರಾಮಚಂದ್ರ ಕಾಮತ್, ಶಾಲಾ ಶಿಕ್ಷಣ ಇಲಾಖೆ, ಡಿ.ಪಿ.ಓ ಶ್ರೀನಿವಾಸ, ಸೌಟ್ಸ್ ಮತ್ತು ಗೈಡ್ಸ್‌ನ ಮುಖ್ಯಸ್ಥ ಬೇಬಿ ಮ್ಯಾಥ್ಯೂ, ಯೋಗ ಒಕ್ಕೂಟದ ಮಹೇಶ್ ಕುಮಾರ್, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ವೈದ್ಯಾಧಿಕಾರಿ ಡಾ॥ ಪಿ.ಜಿ. ಅರುಣ್. ಉಪಸ್ಥಿತರಿದ್ದರು. ಜಾಥಾದಲ್ಲಿ ಸುಮಾರು 400ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ನಗರ ಪೊಲೀಸ್ ಠಾಣೆ ಬಳಿ ಯೋಗ ಪ್ರದರ್ಶನ ನಡೆಯಿತು.



ನಗರಸಭಾಧ್ಯಕ್ಷೆ ಕಲಾವತಿ ಜಾಥಾಗೆ ಹಸಿರು ನಿಶಾನೆ ತೋರಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ॥ ಜಿ.ಶೈಲಜಾ ಮಾತನಾಡಿ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಮತ್ತು ವ್ಯಾಯಾಮ ಉಪಯುಕ್ತವಾಗಿದೆ. ಯೋಗವು ಕೇವಲ ವ್ಯಾಯಾಮವಲ್ಲ. ಬದಲಿಗೆ ಒತ್ತಡವನ್ನು ಕಡಿಮೆ ಮಾಡಿ ದೇಹ ಮತ್ತು ಮನಸ್ಸಿಗೆ ಸಮತೋಲನ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು. ಯೋಗವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸಮತೋಲನಗೊಳಿಸುವಲ್ಲಿ ಸಹಕಾರಿಯಾಗಿದೆ. ಇದು ಉಸಿರಾಟದ ನಿಯಂತ್ರಣ, ಆಸನಗಳು ಮತ್ತು ಧ್ಯಾನದ ಮೂಲಕ ಒತ್ತಡ ಕಡಿಮೆ ಮಾಡುತ್ತದೆ. ಜೊತೆಗೆ ನವ್ಯತೆಯನ್ನು ಹೆಚ್ಚಿಸುತ್ತದೆ. ಇದರಿಂದ ದೇಹದ ಆರೋಗ್ಯ ಗುಣಮಟ್ಟ ಸುಧಾರಿಸಲಿದೆ ಎಂದು ಹೇಳಿದರು.

ಜೂ.25ವರೆಗೆ ಎಲ್ಲಾ ವಿಧದ ವಾಹನಗಳ ಸಂಚಾರಕ್ಕೆ ಅವಕಾಶ

ಮಡಿಕೇರಿ, ಜೂ.16–ಜಿಲ್ಲೆಯಾದ್ಯಂತ ಎಲ್ಲಾ ವಿಧದ ವಾಹನಗಳ ಸಂಚಾರಕ್ಕೆ ಜೂ. 25 ರವರೆಗೆ ಅವಕಾಶ ನೀಡಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ತಿಳಿಸಿದ್ದಾರೆ.

ಹಿಂದೆ ಜೂ.10 ರಿಂದ ಜು.9 ರವರೆಗೆ ಮರಳು ಮತ್ತು ಮರದ ದಿಮ್ಮಿಗಳ ಸಾಗಾಣಿಕೆ ಹಾಗೂ ಭಾರಿ ವಾಹನಗಳ ಸಂಚಾರ ನಿಷೇಧಿಸಿ ಆದೇಶ ಹೊರಡಿಸಲಾಗಿತ್ತು. ಆದರೆ ಆ ನಂತರ ಬಂದ ಕೋರಿಕೆಯಂತೆ ಹಾಗೂ ಹಾಲಿ ಜಿಲ್ಲೆಯಲ್ಲಿನ ಹವಾಮಾನ ಪರಿಸ್ಥಿತಿಯನ್ನು ಅವಲೋಕಿಸಿ, ಭಾಗಶಃ ಮಾರ್ಪಡಿಸಿ ಅವಕಾಶ ನೀಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕೇಂದ್ರಕ್ಕೆ ಉಚಿತ ಕುರ್ಚಿ ವಿತರಣೆ



ಕಲ್ಲುಮೊಟ್ಟೆ ಅಂಗನವಾಡಿ ಕೇಂದ್ರಕ್ಕೆ 10 ಕುರ್ಚಿಗಳನ್ನು ಶೌರ್ಯ ವಿಪತ್ತು ನಿರ್ವಹಣಾ ಘಟಕ ಉಚಿತವಾಗಿ ನೀಡಿತು. ದಿವ್ಯ ಬಾಳೆಯಡ, ಶ್ಯಾಮಲಾ, ಚಂದ್ರಕಲಾ, ರಮ್ಯಾ ಶಂಕರ, ದಿಲಿಶ್, ಮಾಯಿಲಪ್ಪ, ಶರವಣ, ನಾರಾಯಣ, ಆನಂದ್, ವಿಕಾಸ್, ಪ್ರಾರ್ಥನ್, ಕೃಷ್ಣ, ಸುರೇಶ್, ಸೀನ ಮಾಧವನ್, ಉಮಾಲಕ್ಷ್ಮಿ, ಆಶಾಲತಾ, ಸಹಾಯಕಿ ಪಾಲ್ಗೊಂಡಿದ್ದರು.

ಶಾಂತಿ ಗಣಪತಿ ನಿಧನ



ನಾಪೋಕ್ಲು, ಜೂ.16–ಸಮೀಪದ ಹೊದವಾಡ ಗ್ರಾಮದ ನಿವಾಸಿ ಶಾಂತಿ ಗಣಪತಿ (74) ಸೋಮವಾರ ನಿಧನರಾದರು. ಮೃತರು ಪತಿ ಚೌರೀರ ಗಣಪತಿ (ಬೊಳ್ಳು) ಪುತ್ರ, ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ನೆರವೇರಿತು.

ಮಾರಣಾಂತಿಕ ಹಲ್ಲೆ ನಡೆಸಿದವರ ಮೇಲೆ ಸುಮೋಟೊ ದಾಖಲಿಸಲು ಆಗ್ರಹ



ಬಾಗಳಿರೇವಣ್ಣ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ಜೂ.16–ತಾಲೂಕಿನ ಮಸಣಾಪುರದಲ್ಲಿ ಅಂಬೇಡ್ಕರ್ ಭಾವ ಚಿತ್ರಕ್ಕೆ ಸಗಣಿ ಬಳಿದ ಚಂದ್ರುಗೆ ಮೇಲೆ ಮನೋಸೋಯಿಚ್ಚೆ ಮಾರಣಾಂತಿಕ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿರುವವರ ಮೇಲೆ 48 ಗಂಟೆಗಳೊಳಗೆ ಸುಮೋಟೋ ಪ್ರಕರಣ ದಾಖಲಿಸಿ ಎಂದು ರಾಜ್ಯ ಉಪ್ಪಾರ ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಾಗಳಿರೇವಣ್ಣ ಒತ್ತಾಯಿಸಿದ್ದಾರೆ.

ಅಂಬೇಡ್ಕರ್ ಬಗ್ಗೆ ಉಪ್ಪಾರ ಸಮುದಾಯಕ್ಕೆ ಅಪಾರಗೌರವ ಇದೆ. ಅವರಿಗೆ ಅಪಮಾನ ಮಾಡಿದ. ಚಂದ್ರು ಮೇಲೆ ಕಾನೂನಿನಡಿಯಲ್ಲಿ ಶಿಕ್ಷೆಯಾಗಲಿ ಎಂಬುದು ನಮ್ಮ ಒತ್ತಾಯ. ಆದರೆ ಅಂಬೇಡ್ಕರ್ ಬರೆದಿರುವ ಸಂವಿಧಾನದ ಮೂಲಕ ಕೊಟ್ಟಿರುವ ಕಾನೂನನ್ನು ಕೈಗೆ ತೆಗೆದುಕೊಂಡು ಅಮಾನುಷವಾಗಿ ಚಂದ್ರವನ್ನು ಬೆತ್ತಲೆಗೊಳಿಸಿ ವಿದ್ಯುತ್ ಕಂಬಕ್ಕೆ ಕಟ್ಟಿಹಾಕಿ ಥಳಿಸಿ, ಚಪ್ಪಲಿಹಾರ ಹಾಕಿ, ಮೂತ್ರ, ಚರಂಡಿ ನೀರು ಕುಡಿಸಿ ಅಮಾನವೀಯವಾಗಿ ನಡೆಸಿಕೊಂಡಿರುವುದನ್ನು ತೀವ್ರವಾಗಿ ಖಂಡಿಸಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ಚಂದ್ರು ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿರುವವರ ಮೇಲೆ ಸುಮೋಟೋ ಪ್ರಕರಣ ದಾಖಲಿಸಬೇಕು. ಯಳಂದೂರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಕಾಶ್ ರನ್ನು ಅಮಾನತ್ತು ಪಡಿಸಬೇಕು ಇಲ್ಲದಿ ದ್ದರೆ ಜೂ.19 ರಂದು ಸುಮಾರು 2ಲಕ್ಷ ಉಪ್ಪಾರ ಸಮುದಾಯದವರೊಂದಿಗೆ ನಗರವನ್ನು ಬಂದ್ ಮಾಡಿ ಬೃಹತ್ ಹೋರಾಟ ನಡೆಸ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಂಗಲ 88ಗಡಿ ಯಜಮಾನ ಮಂಜುನಾಥಸ್ವಾಮಿ, ಕಟ್ಟೆಗಡಿ ಯಜಮಾನ ಆನಂದ್ ಕೆಸ್ತೂರು, ಮಾದೇಶ್ ಉಪ್ಪಾರ್, ಮಹೇಶ್, ಡಿ.ನಾಗರಾಜು, ಮಂಗಳಮ್ಮ, ನಟರಾಜು ಇದ್ದರು.

ಗುಂಡ್ಲುಪೇಟೆಯಲ್ಲಿ ಇಂದು ಬಸವ ಜಯಂತಿ ಉತ್ಸವ

ಗುಂಡ್ಲುಪೇಟೆ, ಜೂ.16(ಸೋಮ್.ಜಿ)–ಪಟ್ಟಣದಲ್ಲಿ ಜೂ.17ರಂದು ಗುಂಡ್ಲುಪೇಟೆ ಬಸವ ಜಯಂತಿ ಉತ್ಸವ ವಿಜೃಂಭಣೆಯಿಂದ ಜರುಗಲಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕೊಡಸೋಗೆ ಶಿವಪ್ರಸಾದ್(ರಾಜು) ತಿಳಿಸಿದರು.

ನಾಳೆ(ಜೂ.17) ಬೆಳಗ್ಗೆ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅಂತರಾಷ್ಟ್ರೀಯ ಪ್ರಸ್ಟಿ ಕ್ರೀಡಾ ಸ್ಪರ್ಧಿ ಸಂಧ್ಯಾರಿಗೆ ಸನ್ಮಾನ ನೆರವೇರಲಿದೆ. 9.30ಕ್ಕೆ ಸಿದ್ದಮಲ್ಲಸ್ವಾಮೀಜಿ, ಶಿವಲಿಂಗೇಂದ್ರ ಸ್ವಾಮೀಜಿ, ಜಡೇಸ್ವಾಮೀಜಿ, ಇಮ್ಮಡಿ ಉದ್ದಾನ ಸ್ವಾಮೀಜಿ, ಗಂಗಾಧರ ಸ್ವಾಮೀಜಿ, ಷಡಕ್ಷರ ಸ್ವಾಮೀಜಿ, ಇಮ್ಮಡಿ ಮಹಾಂತ ಸ್ವಾಮೀಜಿ, ನಂಜುಂಡ ಸ್ವಾಮೀಜಿ, ತೋಂಟದಾರ್ಯ ಸ್ವಾಮೀಜಿ, ಗುರುಸಿದ್ದ ಸ್ವಾಮೀಜಿ, ಚನ್ನವೀರ ಸ್ವಾಮೀಜಿ, ಇಮ್ಮಡಿ ಶಾಂತಮಲ್ಲ ಸ್ವಾಮೀಜಿ, ಬಸವಣ್ಣ ಸ್ವಾಮೀಜಿ, ಸಿದ್ದೇಶ್ವರಸ್ವಾಮಿ ಶ್ರೀ ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಮೆರವಣಿಗೆಗೆ ಚಾಲನೆ ನೀಡುವರು. ನಂದಿಧ್ವಜ, ವೀರಗಾಸೆ, ಡೊಳ್ಳು, ನಗಾರಿ, ಮಂಗಳವಾದ್ಯ, ಕಂಸಾಳೆ ಇನ್ನೂ ಮೊದಲಾದ ಕಲಾತಂಡಗಳೊಂದಿಗೆ



ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 11ರಿಂದ ಸಂಜೆ ವರೆಗೆ ಪಟ್ಟಣದ ಸೋಮೇಶ್ವರ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಪ್ರಸಾದದ ವ್ಯವಸ್ಥೆ ಇರುತ್ತದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ತಾಲೂಕು ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ ಕಮರಹಳ್ಳಿರವಿ, ಯುವ ಘಟಕದ ರಾಜ್ಯ ಕಾರ್ಯದರ್ಶಿ ಹಂಗಳ ಪ್ರಣಯ್, ತಾಲೂಕು ಯುವ ಘಟಕದ ಅಧ್ಯಕ್ಷ ಗುರುಪ್ರಸಾದ್ ವೀರನಪುರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಮತ್ತು ತಾಲೂಕು ಸಮಿತಿ, ವೀರಶೈವ ಲಿಂಗಾಯತ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಉಪಾಧ್ಯಕ್ಷ ಶಿವಮೂರ್ತಿ ಮಡಹಳ್ಳಿ, ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಮಾಡ್ರಹಳ್ಳಿ, ನಿರ್ದೇಶಕರಾದ ಮಲ್ಲಿಕಾರ್ಜುನ್ ಹುಂಡೀಪುರ ಎಚ್.ಎಂ.ನಂದೀಶ್, ರಾಜ್ಯ ಯುವ ಘಟಕ ಕಾರ್ಯದರ್ಶಿ ಹಂಗಳಪ್ರಣಯ್, ಯುವ ಘಟಕದ ತಾಲೂಕು ಅಧ್ಯಕ್ಷ ಗುರುಪ್ರಸಾದ್, ಜಿಲ್ಲಾ ಯುವ ಘಟಕದ ಪ್ರಧಾನ ಕಾರ್ಯದರ್ಶಿ ವಿಜಯ್, ಕಾರ್ಯದರ್ಶಿ ಮಂಜು ಶಿವಪುರ , ಸುಬ್ಬಬಲಚವಾಡಿ, ನಾಗೇಂದ್ರ ಪಾನು ಇನ್ನಿತರರು ಹಾಜರಿದ್ದರು.

ಮದ್ಯಮಾರಾಟ ನಿಷೇಧ

ಪಟ್ಟಣದಲ್ಲಿ ಬಸವ ಜಯಂತಿ ಆಚರಣೆಯ ಹಿನ್ನಲೆಯಲ್ಲಿ ನಾಳೆ ಪಟ್ಟಣದ 6 ಕಿ.ಮೀ ವ್ಯಾಪ್ತಿಯಲ್ಲಿ ಮದ್ಯಮಾರಾಟವನ್ನು ನಿಷೇಧಿಸಿರುವುದಾಗಿ ಜಿಲ್ಲಾಧಿಕಾರಿ ಶ್ರೀರೂಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾವಂತರಿಂದಲೇ ಸಮಾಜಘಾತಕ ಕೆಲಸ

ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಬಿ.ಬೆಟ್ಟಸ್ವಾಮಿ ಅಭಿಮತ



ವಿಶೇಷ ಉಪನ್ಯಾಸದಲ್ಲಿ ಭಾಗವಹಿಸಿರುವ ವಿದ್ಯಾರ್ಥಿನಿಯರು.

ಬೇಗೂರು, ಜೂ.16– ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಖ್ಯಾತ ಸಾಹಿತಿ ಕೆಸಿ ಶಿವಪ್ಪ ಅವರ ಮುದ್ದು ರಾಮನ ಚೌಪದಿ ಹಾಗೂ ಜೀವನ ಮೌಲ್ಯಗಳು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು

ಮೈಸೂರು ಬಿಜಿಎಸ್ ಬಿಇಡಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಹೆಚ್‌ಬಿ ಬೆಟ್ಟಸ್ವಾಮಿ ಮಾತನಾಡಿ, ಕೊಲೆಪಾತಕರು, ಅತ್ಯಾಚಾರಿಗಳು ಸಮಾಜಘಾತಕರು ಎಲ್ಲರೂ ವಿದ್ಯಾವಂತರೆ ಹಾಗಾದರೆ ಶಿಕ್ಷಣ ಪಡೆದು ಸಮಾಜಘಾತಕ ಕೆಲಸ ಮಾಡುತ್ತಿದ್ದಾರೆ ಎಂದರೆ ಶಿಕ್ಷಣದಿಂದ ಏನು ಪ್ರಯೋಜನ ಹೀಗಾಗಿ ಬದುಕಿನ ಮೌಲ್ಯವನ್ನು ತಿಳಿದುಕೊಳ್ಳಬೇಕು ಮತ್ತು ಬೌದ್ಧಿಕವಾಗಿ ಜ್ಞಾನವನ್ನು ಬೆಳೆಸಿಕೊಂಡರೆ ಜಗತ್ತಿನ ಎಲ್ಲಾ ರೀತಿಯ ಸೌಲಭ್ಯಗಳು ಸಿಗುತ್ತವೆ ಮತ್ತು ಜಾಗೃತಿಕ ಅವಕಾಶಗಳು ಸಿಗುತ್ತವೆ ಎಂದರು.

ಮುದ್ದು ರಾಮ ಬಳಗದ ಗುಂಡ್ಲುಪೇಟೆ ತಾಲೂಕು ಸಂಚಾಲಕ ಹಾಲಹಳ್ಳಿ ಪೃಥ್ವಿರಾಜ್ ಮಾತನಾಡಿ ಸಾಹಿತಿ ಕೆಸಿ.ಶಿವಪ್ಪ ಅವರ ಮುದ್ದು ರಾಮನ ಚೌಪದಿಯಲ್ಲಿ ಚೌಪದಿಗಳಲ್ಲಿ ಜೀವನದ ಮೌಲ್ಯವನ್ನು ರೂಪಿಸುತ್ತದೆ ಎಂದರು. ಮುದ್ದುರಾಮ ಬಳಗದ ಜಿಲ್ಲಾ ಸಂಚಾಲಕ ಬಿ.ಎಸ್.ವಿನಯ್ ಉದ್ಘಾಟಿಸಿದರು ಸಂಚಾಲಕ ಕೊಡುಗಾಪುರ ಗುರುಪ್ರಸಾದ್, ಎಚ್.ಎನ್.ಮಂಜುನಾಥ್, ಸಿದ್ದರಾಜಪ್ಪ, ಡಿಪಿ.ಲೋಕೇಶ್, ಪರಮಾಪುರ ಇದ್ದರು

ಕಾಡಾನೆ ದಾಳಿ: ಶಾಲೆಗೆ ತೆರಳುತ್ತಿದ್ದ ಶಿಕ್ಷಕರು ಪಾರು

ಚಾಮರಾಜನಗರ, ಜೂ.16–ಕರ್ತವ್ಯಕ್ಕೆ ತೆರಳುತ್ತಿದ್ದ ಇಬ್ಬರು ಶಿಕ್ಷಕರ ಮೇಲೆ ಕಾಡಾನೆ ದಾಳಿ ನಡೆಸಲು ಯತ್ನಿಸಿದ ಘಟನೆ ತಮಿಳುನಾಡು–ಕರ್ನಾಟಕ ಗಡಿ ಭಾಗದ ತಾಳವಾಡಿ ಅರಣ್ಯ ವ್ಯಾಪ್ತಿಯ ಆದ್ರಹಳ್ಳ ಸಮೀಪ ನಡೆದಿದೆ.

ತಮಿಳುನಾಡಿನ ತಾಳವಾಡಿಯಿಂದ ಚಾಮರಾಜನಗರ ಜಿಲ್ಲೆಯ ಕೋಳಿಪಾಳ್ಯ ಗ್ರಾಮದ ಶಾಲೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ಮೂಕನಪಾಳ್ಯ ಶಾಲೆಯ ಶಿಕ್ಷಕ ಮಂಟೇ ನಾಯಕ್ ಹಾಗೂ ಕೋಳಿಪಾಳ್ಯ ಶಾಲೆಯ ಶಿಕ್ಷಕ ಬಾಲು ಅವರು ಕಾಡಾನೆ ದಾಳಿಯಿಂದ ಕೂದಲೆಳೆಯ ಅಂತರದಲ್ಲಿ ಪಾರಾದವರಾಗಿದ್ದಾರೆ. ಶಿಕ್ಷಕರು ಬೈಕ್‌ನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ಕಾಡಾನೆಯೊಂದು



ಹಠಾತ್ ರಸ್ತೆ ಮೇಲೆ ಬಂದು ಅವರತ್ತ ಅಟ್ಟಾಡಿಸಿಕೊಂಡು ಬಂದಿದೆ. ಇದರಿಂದ ಆತಂಕಗೊಂಡ ಶಿಕ್ಷಕರು ಬೈಕ್ ಬಿಟ್ಟು ಓಡಿ ಪ್ರಾಣ ಉಳಿಸಿಕೊಂಡಿದ್ದಾರೆ. ಸುಮಾರು 2 ಕಿ.ಮೀ. ವರೆಗೆ ಓಡಿ ಹೋಗಿ ಸುರಕ್ಷಿತ ಸ್ಥಳ ತಲುಪಿದ್ದಾರೆ ಎಂದು ತಿಳಿದು ಬಂದಿದೆ.

ಇದೇ ವೇಳೆ ಕಾಡಾನೆ ಶಿಕ್ಷಕರ ಬೈಕನ್ನು ಜಖಂಗೊಳಿಸಿರುವುದಾಗಿ ತಿಳಿದು ಬಂದಿದೆ. ಘಟನೆಯ ಮಾಹಿತಿ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶಿಕ್ಷಕರಿಂದ ಮಾಹಿತಿ ಕಲೆ ಹಾಕಿದ್ದಾರೆ. ಸಾರ್ವಜನಿಕರು ಹಾಗೂ ವಾಹನ ಸವಾರರು ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ತಿಳಿಸಿದೆ.

ಇಂದಿನಿಂದ ಜಿಲ್ಲಾ ಪ್ರವಾಸ

ಚಾಮರಾಜನಗರ: ರಾಜ್ಯ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಆಲಂ ಶರೀಫ್ ಜೂ.17ರಿಂದ ಎರಡು ದಿನಗಳ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಜೂ.17ರ ಬೆಳಗ್ಗೆ 11 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗೋಪಿನಾಥಂ ತಮಿಳುನಾಡು ಗಡಿಗೆ ಹೊಂದಿಕೊಂಡ ಕಾವೇರಿ ನದಿಯ ಪರಿಸರದ ವನವಾಸಿಗರು, ಸೋಲಿಗ ಬುಡಕಟ್ಟು ಜನಾಂಗ ಇತರೆ ಹಳ್ಳಿಗಳ ಸಮಸ್ಯೆ ಮತ್ತು ಪರಿಹಾರ ಇತ್ಯಾದಿ ಸಂಬಂಧ ಸಭೆ ಸಮಾಲೋಚನೆ ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಪ್ರತಿಭಟನೆ

ಕೊಳ್ಳೇಗಾಲ, ಜೂ. 16(ನಾಗೇಂದ್ರ)–ಬ್ಯಾಂಕ್ ಸಾಲ ಮುಕ್ತಾಯಗೊಂಡು ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡಿದ್ದ ನಂತರವೂ ರೈತರೊಬ್ಬರ ಖಾತೆಯಿಂದ 1.10ಲಕ್ಷ ರೂ.ಗಳನ್ನು ಕಡಿತಗೊಳಿಸಿರುವ ಬ್ಯಾಂಕ್ ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿ ಎಸ್‌ಬಿಐ ಬ್ಯಾಂಕ್ ಮುಂಭಾಗ ರಾಜ್ಯ ರೈತ ಸಂಘದ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಸೇರಿ ಬೈಕ್ ಮೂಲಕ ಬಸ್ ನಿಲ್ದಾಣದ ಬಳಿಯ ಅಜ್ಗಾಲ್ ಸರ್ಕಲ್, ಎಸ್.ಬಿ.ಐ ಬ್ಯಾಂಕ್ ಮುಂಭಾಗ ಆಗಮಿಸಿ ಬ್ಯಾಂಕ್ ವ್ಯವಸ್ಥಾಪಕರ ಕಾರ್ಯವೈಖರಿ ನಿರ್ಲಕ್ಷ್ಯದ ವಿರುದ್ಧ ಧಿಕ್ಕಾರ ಘೋಷಣೆ ಕೂಗುವ ಮೂಲಕ ಪ್ರತಿಭಟಿಸಿದರು

ರೈತ ಮುಖಂಡ ದೊರೆಸ್ವಾಮಿ 10 ವರ್ಷಗಳ ಹಿಂದೆ 50ಸಾವಿರ ಬೆಳೆ ಸಾಲ ಪಡೆದಿದ್ದು, ಪಾವತಿ ಮಾಡಿ ಬ್ಯಾಂಕ್ ಅಧಿಕಾರಿಗಳಿಂದ ಧೃಡೀಕೃತ ದಾಖಲೆ ಪಡೆದಿದ್ದರೂ ಸಹಾ 1.10 ಲಕ್ಷ ಕಡಿತಗೊಳಿಸಿರುವ ಕ್ರಮದ ವಿರುದ್ದ ರೈತರು ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ರೈತರು ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಗೌಡೇಗೌಡ ಮಾತನಾಡಿ, ರೈತ ದೊರೆಸ್ವಾಮಿ ಹಿಂದೆ ಪಡೆದಿದ್ದ ಸಾಲವನ್ನು ಮರು ಪಾವತಿ ಮಾಡಿದ್ದರೂ ಅವರ ಖಾತೆಯಿಂದ ಹಣ ಕಡಿತ ಮಾಡಿಕೊಳ್ಳಲಾಗಿದೆ. ಈಬಗ್ಗೆ ವಿಚಾರಿಸಿದರೆ ನಿರ್ಲಕ್ಷ್ಯವಾಗಿ, ಉಡಾಫೆಯಿಂದ ವ್ಯವಸ್ಥಾಪಕರು ಮಾತನಾಡುತ್ತಾರೆ, ಎಂದು ಆರೋಪಿಸಿದರು.

ಬ್ಯಾಂಕ್ ಅಧಿಕಾರಿಗಳು ಇನ್ನೆರಡು ದಿನದಲ್ಲಿ ಪರಿಶೀಲಿಸಿ ಕಡಿತಗೊಂಡಿರುವ 1.10 ಲಕ್ಷ ರೂಗಳನ್ನು ರೈತರ ಖಾತೆಗೆ ಜಮಾ ಮಾಡುವ ಲಿಖಿತ ಭರವಸೆ ನೀಡಿದ ಮೇರೆಗೆ ರೈತರು ಪ್ರತಿಭಟನೆ ಹಿಂಪಡೆದರು. ರೈತ ಸಂಘದ ಅಧ್ಯಕ್ಷ ಶಿವಮಲ್ಲು, ರಾಜ್ಯ ಖಾಯಂ ಸದಸ್ಯ ಹೆಬ್ಬಸೂರು ಬಸವಣ್ಣ, ತಾಲೂಕು ಉಪಾಧ್ಯಕ್ಷ ಆಲೂರು ಸಂತೋಷ್, ಜಿಲ್ಲಾ ಖಾಯಂ ಸದಸ್ಯ ರವಿನಾಯ್ಡು, ನಿಕೋಲಸ್ ಜಾಗೇರಿ, ಅಶೋಕ್, ಹನೂರು ಅಧ್ಯಕ್ಷ ಅಮ್ಜಾದ್‌ಖಾನ್, ಅರೇಪಾಳ್ಯ ನಾಗರಾಜು ಪ್ರತಿಭಟನೆಯಲ್ಲಿದ್ದರು.

ಇಂದು ಜನಸಂಪರ್ಕ ಸಭೆ

ಚಾಮರಾಜನಗರ, ಜೂ.16– ಸೆಸ್ಕಾಂ ವತಿಯಿಂದ ವಿದ್ಯುತ್ ಸಂಬಂಧಿತ ಜನಸಂಪರ್ಕ ಸಭೆಯು ಜೂ. 17ರ ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಬೇಗೂರಿನಲ್ಲಿ ಹಾಗೂ ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಗುಂಡ್ಲುಪೇಟೆ ಉಪವಿಭಾಗದಲ್ಲಿ ನಡೆಯಲಿದೆ ಎಂದು ನಿಗಮದ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಲು ಕರವೇ ಮನವಿ

ಚಾಮರಾಜನಗರ, ಜೂ.16–ನಗರದ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಮಿತಿಮೀರಿದ ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ತಾಲೂಕು ಘಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಮತ್ತು ನಿರ್ದೇಶಕ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಆಸ್ಪತ್ರೆ ಎಮರ್ಜೆನ್ಸಿ ವಾರ್ಡ್‌ನಲ್ಲಿ ವೈದ್ಯರ ಕೊರತೆ ಪೂರೈಸಬೇಕು, ವೈದ್ಯಕೀಯ ಉಪಕರಣಗಳಾದ ಎಂಡೋಸ್ಕೋಪಿ ಮತ್ತು ಇತರೆ ಉಪ ಕರಣಗಳನ್ನು ಸರಿಯಾಗಿ ಬಳಸಬೇಕು. ಆ್ಯಂಬುಲೆನ್ಸ್ ಸರಿಯಾದ ಸಮಯಕ್ಕೆ ಇರುವುದಿಲ್ಲ ಹೆಚ್ಚಿನ ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಬೇಕು. ಡಿ.ಗ್ರೂಪ್ ನೌಕರರು ರೋಗಿಗಳೊಂದಿಗೆ ದಬ್ಬಾಳಿಕೆ ಮಾಡುತ್ತಿದ್ದು ಇವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಆಸ್ಪತ್ರೆಯಲ್ಲಿ ಹೆಚ್ಚಿನ ಶುಚಿತ್ವ ಕಾಪಾಡುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಇದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ಡೀನ್‌ಗೆ ಸಲ್ಲಿಸಿರುವ ಮನವಿಯಲ್ಲಿ ತಾಲೂಕು ಅಧ್ಯಕ್ಷ ಕ್ವಾಲಿಟಿ ನವೀನ್ ಒತ್ತಾಯಿಸಿದ್ದಾರೆ.



ತಾಲೂಕು ಪ್ರಧಾನ ಕಾರ್ಯದರ್ಶಿ ಅರ್ಜುನ್, ಟೌನ್ ಅಧ್ಯಕ್ಷ ಮಹೇಂದ್ರ, ಹರೀಶ್, ಮಂಜು, ನಟರಾಜು, ನಲ್ಲೂರು, ಕಾಡಳ್ಳಿ ಕುಮಾರ್, ಮಾದೇವಸ್ವಾಮಿ, ವೀರಣ್ಣ ರಾಜೇಂದ್ರ ರಿಜ್ವಾನ್ ಹಾಜರಿದ್ದರು.

ನಟ ವಿಜಯ್ ರಾಘವೇಂದ್ರ, ಶ್ರೀಮುರಳಿಗೆ ಮಾತೃ ವಿಯೋಗ



ಬೆಂಗಳೂರು, ಜೂ.16–ಕನ್ನಡ ಚಿತ್ರರಂಗದ ಪ್ರಸಿದ್ಧ ನಿರ್ಮಾಪಕರಾದ ಎಸ್.ಎ ಚಿನ್ನೇಗೌಡ ಅವರ ಪತ್ನಿ ಹಾಗೂ ನಟರಾದ ವಿಜಯ್ ರಾಘವೇಂದ್ರ, ಶ್ರೀಮುರಳಿ ಅವರ ತಾಯಿ ಜಯಮ್ಮ (70) ವಿಧಿವಶರಾಗಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಜಯಮ್ಮ ಇಂದು (ಜೂನ್ 16) ಬೆಳಗ್ಗೆ ಎಂಬೆಸ್ಸಿ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

ವರನಟ ಡಾ ರಾಜ್‌ಕುಮಾರ್ ಅವರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಅವರ ಸ್ವಂತ ಸಹೋದರ ಎಸ್.ಎ.ಚಿನ್ನೇಗೌಡರ ಪತ್ನಿ ಜಯಮ್ಮ.

ನಿರ್ಮಾಪಕಿ ಜಯಮ್ಮ: ನಿರ್ಮಾಪಕಿಯೂ ಆಗಿದ್ದ ಜಯಮ್ಮ ಅವರು ಪತಿ ಎಸ್.ಎ ಚಿನ್ನೇಗೌಡ ಅವರೊಂದಿಗೆ ಸೇರಿ 2006 ರಲ್ಲಿ ಮಗ ವಿಜಯ್ ರಾಘವೇಂದ್ರ ನಟನೆಯ 'ಸೇವಂತಿ ಸೇವಂತಿ' ಚಿತ್ರವನ್ನು ನಿರ್ಮಿಸಿದ್ದರು. ಎಸ್ ನಾರಾಯಣ್ ನಿರ್ದೇಶನದ, ನಾಯಕಿಯಾಗಿ ರಮ್ಯಾ ಅಭಿನಯಿಸಿದ್ದ 'ಸೇವಂತಿ ಸೇವಂತಿ' ಸಿನಿಮಾ 100 ದಿನಗಳ ಯಶಸ್ವಿ ಪ್ರದರ್ಶನ ಕಂಡಿತ್ತು.

2008ರಲ್ಲಿ ವಿಜಯ್ ರಾಘವೇಂದ್ರ ಅಭಿನಯದ ಫಣಿ ರಾಮಚಂದ್ರ ನಿರ್ದೇಶನದ 'ಗಣೇಶ ಮತ್ತೆ ಬಂದ' ಚಿತ್ರವನ್ನ ಜಯಮ್ಮ ಚಿನ್ನೇಗೌಡ ನಿರ್ಮಿಸಿದ್ದರು.

ಮೈಸೂರಲ್ಲಿ ಪರಿಸರ ಸ್ನೇಹಿ ನೆಲೆಗೆ ಪಾಲಿಕೆ ತೀವ್ರಾಸಕ್ತಿ

'ಗ್ರೀನ್ ಪ್ರಾಪರ್ಟಿ ಟ್ಯಾಗ್' ಯೋಜನೆಯಡಿ ಮಳೆನೀರು ಸಂಗ್ರಹ, ಸೌರ ವಿದ್ಯುತ್ ಬಳಕೆ, ತ್ಯಾಜ್ಯ ನಿರ್ವಹಣೆಯಂತ ಉಳಿತಾಯ ಕ್ರಮ

ಮೈಸೂರು, ಜೂ.16(ಎಂಟಿವೈ)– ಹವಾಮಾನ ವೈಪರಿತ್ಯದಿಂದಾಗಿ ಆಗುತ್ತಿರುವ ತಾಪಮಾನದ ಏರುಪೇರು ತಡೆಗಟ್ಟುವುದರೊಂದಿಗೆ 'ಪರಿಸರ ಸ್ನೇಹಿ' ವಾತಾವರಣ ಉತ್ತೇಜಿಸಲು ಮೈಸೂರು ಮಹಾನಗರ ಪಾಲಿಕೆ 'ಗ್ರೀನ್ ಪ್ರಾಪರ್ಟಿ ಟ್ಯಾಗ್' ಯೋಜನೆ ಜಾರಿಗೊಳಿಸಿ, ಮಳೆ ನೀರು ಸಂಗ್ರಹ, ಸೌರ ವಿದ್ಯುತ್ ಬಳಕೆ, ತ್ಯಾಜ್ಯ ನಿರ್ವಹಣೆ ಹಾಗೂ ಶಕ್ತಿ ಉಳಿತಾಯ ಕ್ರಮಗಳನ್ನು ಮನೆ, ಕಟ್ಟಡಗಳಿಗೆ ಅಳವಡಿಸಿಕೊಳ್ಳಲು ಪ್ರೇರೇಪಿಸಲು ಮುಂದಾಗಿದೆ.

ಕರ್ನಾಟಕದಲ್ಲಿ ಬೆಂಗಳೂರು ಹೊರತುಪಡಿಸಿದರೆ ವೇಗವಾಗಿ ಅಭಿವೃದ್ಧಿಯಾಗುತ್ತಿರುವ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮೈಸೂರಲ್ಲಿ ಹೊಸದಾಗಿ ನಿರ್ಮಾಣವಾಗುವ ಕಟ್ಟಡ ಹಾಗೂ ಈಗ ಇರುವ ಕಟ್ಟಡಗಳನ್ನು ಪರಿಸರಸ್ನೇಹಿಯಾಗಿಸುವ ಮೂಲಕ ನೀರಿನ ಮಿತ ಬಳಕೆ, ಸೌರಶಕ್ತಿ ಬಳಕೆ, ಘನತ್ಯಾಜ್ಯ ನಿರ್ವಹಣೆಯೊಂದಿಗೆ ಪರಿಸರ ಮಾಲಿನ್ಯ ತಡೆಗಟ್ಟಲು ಮನೆಗಳ ಬಳಿ ಹಸಿರು ವಲಯ ನಿರ್ಮಿಸುವ ಸಂಬಂಧ ಗಿಡ–ಮರ ಬೆಳೆಸಲು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಗರ ಪಾಲಿಕೆ 'ಗ್ರೀನ್ ಪ್ರಾಪರ್ಟಿ ಟ್ಯಾಗ್' ಯೋಜನೆ ಅನುಷ್ಠಾನಕ್ಕೆ ಮುಂದಾಗಿದೆ.



ಮೈಸೂರು ಮಹಾನಗರ ಪಾಲಿಕೆ ಜಾರಿಗೊಳಿಸಲು ಉದ್ದೇಶಿರುವ 'ಗ್ರೀನ್ ಪ್ರಾಪರ್ಟಿ ಟ್ಯಾಗ್' ಯೋಜನೆಗೆ ಪೂರಕವಾದ ಮನೆಯ ಎಐ ಚಿತ್ರ.

ಹಸಿರು ಕಟ್ಟಡಗಳ ಪರಿಕಲ್ಪನೆ ಈ ಯೋಜನೆಯನ್ನು ಜಾರಿಗೊಳಿಸಲು ಪಾಲಿಕೆ ಮುಂದಾಗಿದ್ದು ಮಹತ್ವ ಪಡೆದಿದೆ. ಗ್ರೀನ್ ಪ್ರಾಪರ್ಟಿ ಟ್ಯಾಗ್ ಕೇವಲ ಪರಿಸರ ಸಂರಕ್ಷಣೆಗೆ ಸೀಮಿತಗೊಳ್ಳದೆ, ಆಸ್ತಿಯ ಗುಣಮಟ್ಟ ಮತ್ತು ಮೌಲ್ಯ ನಿರ್ಧರಿಸುವ ಪ್ರಮುಖ ಮಾನದಂಡ ಆಗಲಿದೆ. ಹವಾಮಾನ ಬದಲಾವಣೆ ಮತ್ತು ಸಂಪನ್ಮೂಲಗಳ ಕೊರತೆಯ ನಡುವೆಯೂ ಸುಸ್ಥಿರ ಅಭಿವೃದ್ಧಿಗೆ ಈ ಯೋಜನೆ ನಿರೀಕ್ಷೆ ಹೆಚ್ಚಿಸಿದೆ.

ಗ್ರೀನ್ ಪ್ರಾಪರ್ಟಿ ಟ್ಯಾಗ್: ಪರಿಸರ ಸ್ನೇಹಿ ಸೌಲಭ್ಯಗಳನ್ನು ಅಳವಡಿಸಿಕೊಂಡಿರುವ ವಸತಿ, ವಾಣಿಜ್ಯ, ಶೈಕ್ಷಣಿಕ ಸಂಸ್ಥೆಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಇತರೆ ಕಟ್ಟಡಗಳಿಗೆ ನೀಡುವ ವಿಶೇಷ ಪ್ರಮಾಣ ಪತ್ರವೇ ಗ್ರೀನ್ ಪ್ರಾಪರ್ಟಿ ಟ್ಯಾಗ್. ಈ ಟ್ಯಾಗ್ ಪಡೆದ ಕಟ್ಟಡಗಳು ಸೌರ ವಿದ್ಯುತ್ ಅಳವಡಿಕೆ, ತ್ಯಾಜ್ಯ ಮರು ಬಳಕೆ, ಉತ್ತಮ ನೀರು ನಿರ್ವಹಣೆ ಸೇರಿದಂತೆ ಕೆಲ ಮಾನದಂಡ ಅನುಸರಿಸಬೇಕಾಗುತ್ತದೆ.

ಇದರಿಂದ ಆಗುವ ಲಾಭ: ಪರಿಸರ ಸ್ನೇಹಿ ಮನೆ, ಕಟ್ಟಡಗಳ ನಿರ್ಮಾಣದಿಂದ ವಿದ್ಯುತ್ ಬಳಕೆ ಪ್ರಮಾಣ ಕಡಿಮೆಯಾಗುತ್ತದೆ. ಮಳೆ ನೀರು ಸಂಗ್ರಹ ವ್ಯವಸ್ಥೆಯಿಂದ ಅಂತರ್ಜಲಮಟ್ಟ ಹೆಚ್ಚಾಗುತ್ತದೆ. ನೀರಿನ ಕೊರತೆ ತಗ್ಗಿಸಬಹುದು. ಇದರಿಂದ ನಗರ ಪಾಲಿಕೆಗೆ ಕುಡಿಯುವ ನೀರು ಪೂರೈಕೆಯ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಪರಿಸರ ಸ್ನೇಹಿ ಮನೆಗಳು, ಕಟ್ಟಡಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಸಿಗುವ ಸಾಧ್ಯತೆ ಇದೆ. ಉತ್ತಮ ಗಾಳಿ, ನೈಸರ್ಗಿಕ ಬೆಳಕು ಮತ್ತು ಕಡಿಮೆ ಮಾಲಿನ್ಯದಿಂದ ನಿವಾಸಿಗಳ ಆರೋಗ್ಯ ಸುಧಾರಿಸುತ್ತದೆ. ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಸಾವಯವ ಗೊಬ್ಬರ ತಯಾರಿಕೆಗೆ ಬಳಕೆ ಮಾಡಿದರೆ ನಗರ ಪಾಲಿಕೆಗೆ ತ್ಯಾಜ್ಯ ನಿರ್ವಹಣೆಯ ವೆಚ್ಚವೂ ಕ್ಷೀಣಿಸುತ್ತದೆ.

ಮಾನದಂಡ: ಈ ಯೋಜನೆ ಅನುಷ್ಠಾನಕ್ಕೆ ಕೆಲವು ಮಾನದಂಡ ವಿಧಿಸಲಾಗಿದೆ. ಮೂಲದಲ್ಲಿಯೇ ಘನತ್ಯಾಜ್ಯ ವಿಂಗಡಣೆ ಮಾಡುತ್ತಿರಬೇಕು. ಹಸಿ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸಂಸ್ಕರಿಸಿ ಗೊಬ್ಬರ ತಯಾರಿಸಿರಬೇಕು. ಮಳೆನೀರು ಕೊಯ್ಲು ವ್ಯವಸ್ಥೆ ಅಳವಡಿಸಿಕೊಂಡಿರಬೇಕು. ಸೌರಶಕ್ತಿ ಬಳಕೆ ಮಾಡುತ್ತಿರಬೇಕು. ನೀರಿನ ಸಂರಕ್ಷಣೆ ಹಾಗೂ ಮರುಬಳಕೆ ಕ್ರಮ ಅನುಸರಿಸಿರಬೇಕು. ಹಸಿರು ಪರಿಸರ ಹಾಗೂ ಮರಗಳ ಸಂರಕ್ಷಣೆ ಮಾಡಲು ಕ್ರಮ ಕೈಗೊಂಡಿರಬೇಕು. ಈ ಎಲ್ಲಾ ಮಾನದಂಡ ಅನುಸರಿಸಬೇಕಾಗಿದೆ.

ರಸಗೊಬ್ಬರ ಪೂರೈಕೆಯಲ್ಲಿ ರೈತರಿಗೆ ಅನ್ಯಾಯ: ಉಗ್ರ ಹೋರಾಟದ ಎಚ್ಚರಿಕೆ

ಮೈಸೂರು, ಜೂ.16(ಜಿಎ)–ರಸಗೊಬ್ಬರ ಪೂರೈಕೆಯಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರ್ಕಾರ ತಡೆಯದಿದ್ದರೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಆರ್. ನಾಗರಾಜು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಬ್ಸಿಡಿಯಲ್ಲಿ ಯೂರಿಯಾ ಹಾಗೂ ಡಿಎಪಿ ರಸಗೊಬ್ಬರವನ್ನು ಎಂಆರ್‌ಪಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಆ ಮೂಲಕ ಕೃತಕ ಅಭಾವ ಸೃಷ್ಟಿಸಲಾಗಿದೆ. ಆದರೂ ಕೃಷಿ ಇಲಾಖೆ ಕಣ್ಮುಚ್ಚಿ ಕುಳಿತಿದೆ ಎಂದು ಆರೋಪಿಸಿದರು.

ಇದರೊಡನೆ ಲಿಂಕ್ಡ್ ಪ್ರಾಡಕ್ಟ್ ಹೆಸರಿನಲ್ಲಿಯೂ ರೈತರ ಸುಲಿಗೆ ನಡೆದಿದೆ. ಬಲವಂತವಾಗಿ ಸುಮಾರು 500 ರಿಂದ 800 ರೂ. ದರದ ಇತರೆ ರಸಗೊಬ್ಬರವನ್ನು ಅಗತ್ಯವಿಲ್ಲದಿದ್ದರೂ ಖರೀದಿಸಬೇಕಾಗಿದೆ. ಹೀಗಾಗಿ ಇದರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ನಿಯಮ ಮೀರುವ ಯಾವುದೇ ಡೀಲರ್‌ನ ಪರವಾನಗಿ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪುನೀತ್ ರವಿಗೌಡ, ವಿಜಯ್‌ಕುಮಾರ್, ವೇಣುಗೋಪಾಲ್ ಉಪಸ್ಥಿತರಿದ್ದರು.

ಮಸಣಾಪುರ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.16(ಎಂಕೆ)– ಚಾಮರಾಜನಗರ ಜಿಲ್ಲೆಯ ಮಸಣಾಪುರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿರುವ ಕಿಡಿಗೇಡಿಗಳ ವಿರುದ್ಧ ರಾಷ್ಟ್ರದ್ರೋಹ ಪ್ರಕರಣ ದಾಖಲಿಸಿ, ರಾಜ್ಯದಿಂದಲೇ ಗಡಿಪಾರು ಮಾಡುವಂತೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರವನ್ನು ವಿರೂಪಗೊಳಿಸಿದ ಕಿಡಿಗೇಡಿಗಳ ವಿರುದ್ಧ ದಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದ ಪ್ರತಿಭಟನಾಕಾರರು, ರಾಷ್ಟ್ರ ನಾಯಕರಿಗೆ ಅಪಮಾನ ಮಾಡುವ ವ್ಯಕ್ತಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡುವ ಕೃತ್ಯಗಳು ಹೆಚ್ಚಾಗುತ್ತಿರುವುದರಿಂದ ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ. ದೇಶದ ಸಮಗ್ರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸುವುದು ಶೋಚನೀಯ ಸಂಗತಿಯಾಗಿದೆ ಎಂದರು.

ಚಾಮರಾಜನಗರ ಜಿಲ್ಲೆಯ ಮಸಣಾಪುರ ಗ್ರಾಮ ಹಾಗೂ ಮೈಸೂರು ತಾಲೂಕಿನ ವಾಜಮಂಗಲದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ವಿರೂಪಗೊಳಿಸಿರುವ ಘಟನೆಗಳನ್ನು ಗಮನಿಸಿದರೆ ಕಿಡಿಗೇಡಿಗಳಿಗೆ ಕಾನೂನು ಮತ್ತು ಪೊಲೀಸ್ ಇಲಾಖೆಯ ಮೇಲೆ ಭಯವೇ ಇಲ್ಲದಂತಾಗಿದೆ. ಅದರಂತೆಯೇ ಪೊಲೀಸ್ ಅಧಿಕಾರಿಗಳು ಕೂಡ ನಿರ್ಲಕ್ಷ್ಯ ವಹಿಸುವ ಮೂಲಕ ರಾಷ್ಟ್ರದ್ರೋಹಿಗಳಿಗೆ ರಕ್ಷಣೆ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸಿದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಮೈಸೂರು ವಿಭಾಗದ ಬನ್ನಹಳ್ಳಿ ಸೋಮಣ್ಣ, ಹೆಚ್.ಡಿ.ಕೋಟೆ ಸಣ್ಣಕುಮಾರ್, ಅನುಷಾ, ಮಾದಪುರ ರಾಜು, ಬನ್ನಹಳ್ಳಿ ಬಸವರಾಜು, ಸಿದ್ದರಾಜು, ಈಶ್ವರ, ನಾಗರತ್ನಮ್ಮ, ಶಿವನಂಜ, ಮಹದೇವಸ್ವಾಮಿ ಮತ್ತಿತರರಿದ್ದರು.

ಕುರುಬ ಸಮುದಾಯದ ಮುಖಂಡ ದಿವಂಗತ ಅಪ್ಪುಗೌಡರಿಗೆ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿ ವತಿಯಿಂದ ಶ್ರದ್ಧಾಂಜಲಿ

ಮೈಸೂರು, ಜೂ.16– ಇತ್ತೀಚೆಗೆ ನಿಧನರಾದ ಮೈಸೂರಿನ ಕುರುಬಾರಹಳ್ಳಿ ಗ್ರಾಮದ ಅಪ್ಪುಗೌಡರಿಗೆ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಿದ್ಧಾರ್ಥನಗರದ ಕನಕಗಿರಿ ಶಾಖಾ ಮಠದ ಆವರಣದಲ್ಲಿ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷರಾದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕುರುಬ ಸಮಾಜದ ಹಿರಿಯ ಮುಖಂಡರಾಗಿದ್ದ ದಿವಂಗತ ಅಪ್ಪುಗೌಡ ಅವರು ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗರಾಗಿದ್ದರು. ಗ್ರಾಮದ ಹಬ್ಬ, ಅಭಿವೃದ್ಧಿ ವಿಷಯದಲ್ಲಿ ಎಂದೂ ರಾಜೀಯಾಗುತ್ತಿರಲಿಲ್ಲ. ಸಮಾಜದ ಹೋರಾಟ ಹಾಗೂ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿಯ ಪದಾಧಿಕಾರಿಗಳಾಗಿ ಸಮಾಜದ ಏಳಿಗೆಗಾಗಿ ನಿಸ್ವಾರ್ಥದಿಂದ ದುಡಿದಿದ್ದರು. ಅಂತಹ ಹಿರಿಯ ಚೇತನದ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟ ಎಂದು ತಿಳಿಸಿದರು.



ಇತ್ತೀಚೆಗೆ ನಿಧನರಾದ ಮೈಸೂರಿನ ಕುರುಬಾರಹಳ್ಳಿ ಗ್ರಾಮದ ಅಪ್ಪುಗೌಡರಿಗೆ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಮಿತಿಯ ಪದಾಧಿಕಾರಿಗಳಾದ ಎಂ.ಶಿವಣ್ಣ, ರಮೇಶ್ ರಾಮಪ್ಪ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಎಂ.ಸಿ.ಚಿಕ್ಕಣ್ಣ, ಎಂ.ಕೆ.ಶಂಕರ್, ಮಹದೇವೇಗೌಡ, ತಾಲೂಕು ಕುರುಬರ ಸಂಘದ ಅಧ್ಯಕ್ಷರಾದ ಬಸವರಾಜು, ನಾಡನಹಳ್ಳಿ ರವಿ, ಪ್ರಗತಿಪರ ಚಿಂತಕರಾದ ಸೆಸ್ಕ್ ಗೋಪಿನಾಥ್, ದೀಪಕ್ ಪುಟ್ಟಸ್ವಾಮಿ, ವಿಶ್ವನಾಥ್, ಕಮಲ ಅನಂತರಾಮು, ರಾಜೇಶ್ವರಿ, ಅಭಿಷೇಕ್ ಶಿವಣ್ಣ, ಕೆ.ಆರ್.ಬ್ಯಾಂಕ್ ಬಸಪ್ಪ, ಈರುಳ್ಳಿ ಕುಮಾರ್, ಕುರುಬಾರಹಳ್ಳಿ ಜೆ. ಪ್ರಕಾಶ್, ಕುಮಾರ್, ದೊಳ್ಳೇಗೌಡ, ಕೆಆರ್‌ಎಂ ಮಹದೇವ, ಮೈಸೂರು ಕನ್ನಡ ವೇದಿಕೆಯ ಬಾಲಕೃಷ್ಣ, ಕುರುಬಾರಹಳ್ಳಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಮಂಜುನಾಥ್, ರವಿ, ಧನಂಜಯ, ಅಪ್ಪುಗೌಡರ ಪುತ್ರ ನವೀನ್ ಅಪ್ಪುಗೌಡ, ಅವರ ಕುಟುಂಬಸ್ಥರು, ಹಿತೈಷಿಗಳು, ಕುರುಬಾರಳ್ಳಿ ಗ್ರಾಮಸ್ಥರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

ದಿವಂಗತ ಅಪ್ಪುಗೌಡರ ನಿವಾಸಕ್ಕೆ ಸಚಿವ ಡಾ.ಯತೀಂದ್ರ ಭೇಟಿ



ಇತ್ತೀಚೆಗೆ ನಿಧನರಾದ ಮೈಸೂರಿನ ಕುರುಬಾರಹಳ್ಳಿ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡರು, ಕುರುಬ ಸಮಾಜದ ಮುಖಂಡರಾದ ಅಪ್ಪುಗೌಡರ ನಿವಾಸಕ್ಕೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಮಂಗಳವಾರ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದರು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಅಪ್ಪುಗೌಡರ ಪತ್ನಿ ಜಯಮ್ಮ, ಪುತ್ರ ನವೀನ್ ಅಪ್ಪುಗೌಡ, ಕುರುಬಾರಹಳ್ಳಿ ಜೆ.ಪ್ರಕಾಶ್, ಕಮಲ ಅನಂತರಾಮ್ ಮತ್ತಿತರರು ಉಪಸ್ಥಿತರಿದ್ದರು.

ಉಜ್ಜಿನಿ ಚೌಡೇಶ್ವರಿ ಜಾತ್ರೆಯ ವೈಶಿಷ್ಟತೆಯ 'ಊರಬ್ಬ' ಚಿತ್ರ ಜೂ.19ಕ್ಕೆ ತೆರೆಗೆ

ಮೈಸೂರು, ಜೂ.16(ಜಿಎ)–ಕುಣಿಗಲ್ ತಾಲೂಕಿನ ಸುಪ್ರಸಿದ್ಧ ಉಜ್ಜಿನಿ ಚೌಡೇಶ್ವರಿ ಜಾತ್ರೆಯ ವೈಶಿಷ್ಟತೆ ಕುರಿತು ತಾವು ನಿರ್ಮಾಣ ಮತ್ತು ನಿರ್ದೇಶಿಸಿರುವ 'ಊರಬ್ಬ' ಚಲನಚಿತ್ರ ಜೂ.19ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ಚಿತ್ರಪ್ರಿಯರು ಪ್ರೋತ್ಸಾಹಿಸಬೇಕೆಂದು ನಿರ್ದೇಶಕ ಲಕ್ಕಿಶಂಕರ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒನ್ಮೋರ್ ಕೌರವ ಖ್ಯಾತಿಯ ನರೇಶ್‌ಗೌಡ ನಾಯಕ ನಟರಾಗಿ ನಟಿಸಿದ್ದಾರೆ. ಜೊತೆಗೆ ದೊಡ್ಡಣ್ಣ, ತನಿಷಾ ಕುಪ್ಪಂಡ, ಪಾಯಲ್ ಚಂಗಪ್ಪ, ಸಿದ್ದು ಮೂಲಿಮನಿ, ಮಿಮಿಕ್ರಿ ಗೋಪಿ, ಬಿರಾದಾರ್, ಮಿತ್ರ, ಅರವಿಂದ್‌ರಾವ್ ಇನ್ನಿತರರು ಪ್ರಮುಖ ತಾರಾಂಗಣದಲ್ಲಿದ್ದಾರೆ. ಇದು ಹಾಸ್ಯ, ರೋಮಾಂಚಕತೆ, ಕುತೂಹಲದ ವಿಷಯ ಒಳಗೊಂಡ ಚಿತ್ರವಾಗಿದೆ. ಜಾತ್ರೆ ನಡೆಯುವ ವೇಳೆ ನೈಜ ಚಿತ್ರೀಕರಣಕ್ಕಾಗಿ ಸುಮಾರು 8 ಕ್ಯಾಮೆರಾ ಬಳಸಿರುವುದು ವಿಶೇಷ. ತಾವೇ ಕಥೆಯನ್ನೂ ಬರೆದಿರುವುದಾಗಿ ವಿವರಿಸಿದರು.

ಗ್ರಾಮದಲ್ಲಿ ಜಾತ್ರೆ ವೇಳೆ ಆರು ಮಂದಿ ದಲಿತರಿಗೆ ಜನಿವಾರ ಹಾಕಿಸಿ ಬ್ರಾಹ್ಮಣರನ್ನಾಗಿಸಿ ಅವರಿಂದ ಕೊಂಡ ಹಾಯಿಸುವುದು ಈ ಜಾತ್ರೆಯ ವಿಶೇಷ ಪದ್ಧತಿಯಾಗಿದ್ದು, ಇದನ್ನು ಸಹಾ ಚಿತ್ರೀಕರಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ನರೇಶ್ ಗೌಡ, ಅರವಿಂದ್ ರಾವ್, ಪ್ರಮುಖ ಹಾಡೊಂದನ್ನು ಹಾಡಿರುವ ಮಾಜಿ ಸಚಿವ ಸಾ.ರಾ. ಮಹೇಶ್ ಅವರ ಪತ್ನಿ ಅನಿತಾ ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರು ರಾಜ್ಯದ ಆಸ್ತಿ; ಎಲ್ಲಾ ಸಮುದಾಯದವರೂ ಸೇರಿ ಜಯಂತಿ ಆಚರಣೆ

● ಕೆಂಪೇಗೌಡರ ಜಯಂತಿ ಪೂರ್ವಭಾವಿ ಸಭೆ ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಮತ ● ಕೆಂಪೇಗೌಡ ಬಡಾವಣೆಯಲ್ಲಿ ಈ ಬಾರಿ ಅರ್ಥಪೂರ್ಣ ಅದ್ಧೂರಿ ಜಯಂತ್ಯೋತ್ಸವ ● ಬಿಡಿಎ ವತಿಯಿಂದ ನಗರದಲ್ಲಿ 15 ಲಕ್ಷ ಗಿಡ ನೆಡುವ ಕಾರ್ಯಕ್ರಮ

ಬೆಂಗಳೂರು, ಜೂ.16– ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರ ಹಾಗೂ ರಾಜ್ಯದ ಆಸ್ತಿ. ಎಲ್ಲಾ ಧರ್ಮ, ಜಾತಿ, ಸಂಘಟನೆಯವರು ಸೇರಿ ಈ ಮಹನೀಯರ ಜಯಂತಿ ಆಚರಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಪೂರ್ವಭಾವಿ ಸಭೆ ಬಳಿಕ ಮಾಧ್ಯಮಗಳಿಗೆ ವಿವರಣೆ ನೀಡಿದ ಅವರು, ಈ ಬಾರಿ ನೂತನವಾಗಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಜೂ.27ರಂದು ಬೆಳಗ್ಗೆ 11.30ಕ್ಕೆ ನಾಡಪ್ರಭು ಕೆಂಪೇಗೌಡ ಜಯಂತಿ ನಡೆಸಲು ತೀರ್ಮಾನಿಸಲಾಗಿದೆ. ಕೆಂಪೇಗೌಡರ ಜಯಂತಿ ಅಂಗವಾಗಿ ಬಡಾವಣೆಯಲ್ಲಿ ನೂತನ ರಸ್ತೆ ಉದ್ಘಾಟಿಸಲಾಗುವುದು. ಬಿಡಿಎ ವತಿಯಿಂದ ಅಧ್ಯಕ್ಷ ಹ್ಯಾರಿಸ್ ನೇತೃತ್ವದಲ್ಲಿ ನಗರದಲ್ಲಿ 15 ಲಕ್ಷ ಗಿಡಗಳನ್ನು ನೆಡಲಾಗುವುದು ಎಂದು ಹೇಳಿದರು.



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಕಾರ್ಯಕ್ರಮದ ರೂಪುರೇಷೆ ಬಗ್ಗೆ ಎಲ್ಲಾ ಸಂಘಟನೆಗಳೊಂದಿಗೆ ಚರ್ಚೆ ಮಾಡಲಾಗಿದೆ. ಪ್ರತಿ ಬಾರಿಯಂತೆ ನಗರದ ನಾಲ್ಕು ಕೆಂಪೇಗೌಡ ಗೋಪುರಗಳಿಂದ ಪ್ರತ್ಯೇಕ ತಂಡಗಳು ಆಗಮಿಸಲಿದ್ದು, ಸಚಿವರಾದ ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಜೆ.ಜಾರ್ಜ್ ಹಾಗೂ ಬೈರತಿ ಸುರೇಶ್ ಅವರು ಇದರ ಜವಾಬ್ದಾರಿ ವಹಿಸಲಿದ್ದಾರೆ. ಇನ್ನು ಮಾಗಡಿ ತಂಡವನ್ನು ಸ್ಥಳೀಯ ಶಾಸಕರಾದ ಬಾಲಕೃಷ್ಣ, ಹುಲಿಯೂರು ದುರ್ಗ ಕಡೆಯಿಂದ ರಂಗನಾಥ್ ಅವರು ಮುನ್ನಡೆಸಲಿದ್ದಾರೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಕಾರ್ಯಕ್ರಮ ಸಚಿವ ಕೆ.ಹೆಚ್.ಮುನಿಯಪ್ಪ ನೇತೃತ್ವದಲ್ಲಿ ನಡೆಯಲಿದೆ. ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬೆಂಗಳೂರಿನ ಕೆಲವು ಭಾಗಗಳಲ್ಲಿ ತಯಾರಿ ಮಾಡಲಾಗುವುದು ಎಂದರು.

ಪ್ರತಿ ಕ್ಷೇತ್ರಕ್ಕೆ ಅನುದಾನ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ನಿರ್ಮಿಸಲು ತೀರ್ಮಾನಿಸಲಾಗಿದ್ದು, ಅದರ ಸಿದ್ಧತೆ ನಡೆಸಲಾಗುತ್ತಿದೆ. ಪ್ರತಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಜಯಂತಿ ಆಚರಿಸಲು ಪ್ರತಿ ಕ್ಷೇತ್ರಕ್ಕೆ 1 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಬೇರೊಂದು ದಿನ ಬೆಂಗಳೂರಿನ 369 ವಾರ್ಡ್‌ಗಳಲ್ಲಿ ಈ ಕಾರ್ಯಕ್ರಮ ನಡೆಸಲು ಜಿಬಿಎ ವತಿಯಿಂದ ತಲಾ 1 ಲಕ್ಷ ಅನುದಾನ ನೀಡಲಾಗುವುದು. ಈ ಕಾರ್ಯಕ್ರಮದ ದಿನಾಂಕವನ್ನು ಬೆಂಗಳೂರು ನಗರದ ಸಚಿವರು ತೀರ್ಮಾನ ಮಾಡಲಿದ್ದಾರೆ ಎಂದು ಹೇಳಿದರು.

ಥೀಮ್ ಪಾರ್ಕ್ ಶೀಘ್ರ ಮುಕ್ತ: ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಪೂರ್ಣಗೊಂಡಿದ್ದು, ಇದನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ತಯಾರಿ ಮಾಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಗಣ್ಯರು, ಸ್ವಾಮೀಜಿಗಳು ಹಾಗೂ ನಾಯಕರ ಆಹ್ವಾನಿಸುವ ಜವಾಬ್ದಾರಿಯನ್ನು ಕೃಷ್ಣ ಬೈರೇಗೌಡರು ವಹಿಸಿಕೊಂಡಿದ್ದಾರೆ. ಸಂಘಟನೆಗಳು ಹಾಗೂ ಒಕ್ಕಲಿಗರ ಸಂಘ ತಮ್ಮದೇ ಆದ ಜವಾಬ್ದಾರಿ ಹೊತ್ತುಕೊಂಡಿವೆ. ಈ ಕಾರ್ಯಕ್ರಮ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ. ಕೆಂಪೇಗೌಡರು ಬೆಂಗಳೂರು ನಗರ ಹಾಗೂ ರಾಜ್ಯದ ಆಸ್ತಿ. ಎಲ್ಲಾ ಧರ್ಮ, ಜಾತಿ, ಸಂಘಟನೆಯವರು ಸೇರಿ ಜಯಂತಿ ಆಚರಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳು: ಕೆಂಪೇಗೌಡ ಸಮಾಧಿ ಸ್ಥಳವನ್ನು 10 ಎಕರೆ ಜಾಗದಲ್ಲಿ ಅಭಿವೃದ್ಧಿಪಡಿಸಬೇಕು. ಕೆಂಪೇಗೌಡರ ಕೋಟೆ ಅಭಿವೃದ್ಧಿಗೆ 100 ಕೋಟಿ ರೂ. ವೆಚ್ಚದ ಟೆಂಡರ್ ಆಗಿದ್ದು, ಶೀಘ್ರ ಕಾಮಗಾರಿ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು. ಜಿಬಿಎ ವ್ಯಾಪ್ತಿಯಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚಿಸಬೇಕು. ನಾಡಪ್ರಭು ಕೆಂಪೇಗೌಡರನ್ನು ಬೆಂಗಳೂರಿನ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲಿ ಕೆಂಪೇಗೌಡ ಜಿಲ್ಲಾ ಭವನ ನಿರ್ಮಿಸಬೇಕು. ಕೆಂಪೇಗೌಡರ ಹೆಸರಿನಲ್ಲಿ ಅಂತಾರಾಷ್ಟ್ರೀಯ ಉದ್ಯಾನವನ ಹಾಗೂ ಅಂತಾರಾಷ್ಟ್ರೀಯ ಸಮುದಾಯ ಭವನ ನಿರ್ಮಿಸಬೇಕು. ಕೆಂಪೇಗೌಡರ ವಸ್ತುಸಂಗ್ರಹಾಲಯ ಸ್ಥಾಪನೆ ಮಾಡಬೇಕು. ಕೆಂಪೇಗೌಡರ ಸ್ಮರಣಾರ್ಥ ಬೆಂಗಳೂರಿನ ಕೆರೆಗಳ ಶುದ್ಧೀಕರಣ, ಪುನಶ್ಚೇತನ ಕೈಗೊಳ್ಳಬೇಕು. ಸ್ವಾಮಿನಾಥನ್ ವರದಿ ಆಧರಿಸಿ ಜಲ ನಿರ್ವಹಣೆ ಬಗ್ಗೆ ಬೆಂಗಳೂರಿಗರಿಗೆ ಜಾಗೃತಿ ಮೂಡಿಸಲು ಕಾರ್ಯಾಗಾರ ನಡೆಸಬೇಕು. ಪಠ್ಯಪುಸ್ತಕದಲ್ಲಿ ಕೆಂಪೇಗೌಡರ ಜೀವನ ಚರಿತ್ರೆ ಅಳವಡಿಸಬೇಕು. ಕೆಂಪೇಗೌಡ ಜಯಂತಿಯಂದು ಸರ್ಕಾರಿ ರಜೆ ಘೋಷಣೆ ಮಾಡಬೇಕು. ನಗರದ ನಾಲ್ಕು ದಿಕ್ಕಿನಲ್ಲಿ 50–60 ಅಡಿ ಎತ್ತರದ ಕೆಂಪೇಗೌಡರ ಕಲ್ಲಿನ ಪ್ರತಿಮೆ ನಿರ್ಮಿಸಬೇಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಆವತಿ ಗ್ರಾಮವನ್ನು ಅಭಿವೃದ್ಧಿಪಡಿಸಬೇಕು. ಹೀಗೆ, ಸಭೆಯಲ್ಲಿ ಹಲವು ಸಲಹೆಗಳು ವ್ಯಕ್ತವಾದವು.

ಎಸ್‌ಐಆರ್ ವಿರೋಧಿ ಕರ್ನಾಟಕ ಜಾಗೃತಿ ಜಾಥಾ ಮೈಸೂರು ಪ್ರವೇಶ; ಚುನಾವಣಾ ಆಯೋಗದ ವಿರುದ್ಧ ಘೋಷಣೆ



ಮೈಸೂರಿನ ಟೌನ್‌ಹಾಲ್ ಬಳಿ ಎಸ್‌ಐಆರ್(ವಿಶೇಷ ತೀವ್ರ ಪರಿಷ್ಕರಣೆ) ವಿರೋಧಿ ಕರ್ನಾಟಕ ಜಾಗೃತಿ ಜಾಥಾ ಬೆಂಬಲಿಸಿ ಪ್ರಗತಿಪರರು ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.16(ಎಂಕೆ)– ರಾಜ್ಯಾದ್ಯಂತ ನಡೆಯುತ್ತಿರುವ 'ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ವಿರೋಧಿ ಕರ್ನಾಟಕ' ಜಾಗೃತಿ ಜಾಥಾ'ವನ್ನು ಮೈಸೂರಿಗೆ ಸ್ವಾಗತಿಸಿದ ವಿವಿಧ ಪ್ರಗತಿಪರ ಸಂಘಟನೆಗಳ ಹಾಗೂ ಕಾಂಗ್ರೆಸ್ ಮುಖಂಡರು, ಎಸ್‌ಐಆರ್ ಬೇಡವೇ ಬೇಡವೆಂದು ಚುನಾವಣಾ ಆಯೋಗದ ವಿರುದ್ಧ ದಿಕ್ಕಾರ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಉಡುಪಿಯಿಂದ ಜೂ.13ಕ್ಕೆ ಹೊರಟಿದ್ದ 'ಎಸ್‌ಐಆರ್ ವಿರೋಧಿ ಕರ್ನಾಟಕ' ಜಾಥಾವನ್ನು ನಗರದ ಟೌನ್‌ಹಾಲ್ ಎದುರು ಸ್ವಾಗತಿಸಿದ ಬಳಿಕ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡು ಚುನಾವಣಾ ಆಯೋಗದ ವಿರುದ್ಧ ದಿಕ್ಕಾರ ಕೂಗಿ ಎಸ್‌ಐಆರ್ ವಿರೋಧಿಸಿ ಪ್ರತಿಭಟಿಸಿದರು.

ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ದೇಶದ ಮತದಾರರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಈಗಾಗಲೇ ದೇಶದ ಹಲವು ರಾಜ್ಯಗಳಲ್ಲಿ ಲಕ್ಷಾಂತರ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗಿದ್ದು, ಮುಂದಿನ ಸರದಿ ರಾಜ್ಯದ್ದಾಗಿದೆ. ಆದ್ದರಿಂದ ಮತದಾರರು ಎಚ್ಚೆತ್ತುಕೊಳ್ಳಬೇಕು. ವಿರೋಧದ ನಡುವೆಯೂ ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವ ಚುನಾವಣಾ ಆಯೋಗ ಎಸ್‌ಐಆರ್‌ಗೆ ಮುಂದಾಗಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಪ್ರಗತಿಪರ ಚಿಂತಕರಾದ ಡಾ.ಇ.ರತಿರಾವ್, ಪ್ರೊ.ಕಾಳಚೆನ್ನೇಗೌಡ, ಡಾ.ಪೂರ್ಣಾನಂದ, ಜನಾರ್ಧನ್ (ಜನ್ನಿ) ಸಿ.ಬಸವಲಿಂಗಯ್ಯ, ಅರುಣ್ ಕುಮಾರ್, ಶಿವಕುಮಾರ್, ಪ್ರೇಮಾ ಶಂಕರ್, ರೈತ ಮುಖಂಡ ಮರಂಕಯ್ಯ, ದೇವಾನಂದ ವರಪ್ರಸಾದ್ ಮತ್ತಿತರರಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತ ಸಂಘ ಪ್ರತಿಭಟನೆ


ವಿದ್ಯುತ್ ಖಾಸಗೀಕರಣ ವಿರೋಧಿಸಿ ರಾಜ್ಯ ರೈತದಿಂದ ಪ್ರತಿಭಟನೆ ನಡೆಯಿತು.

ತಿ.ನರಸೀಪುರ, ಜೂ.16– ವಿದ್ಯುತ್ ಖಾಸಗೀಕರಣಗೊಳಿಸುವ ಸರ್ಕಾರದ ಕ್ರಮ ವಿರೋಧಿಸಿ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ನೂರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಧರಣಿ ನಡೆಸಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆ ವೇಳೆ ಖಾಸಗಿ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ರಚಿಸಿದ ರೈತರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಮಾತನಾಡಿ, ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ದೇಶದ ಜನಸಂಖ್ಯೆಯ ಶೇ.60ಕ್ಕೂ ಹೆಚ್ಚು ಮಂದಿ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಹಳ್ಳಿಗಳು ದೇಶದ ಆತ್ಮವಾದರೆ ಕೃಷಿ ದೇಶದ ಆರ್ಥಿಕ ವ್ಯವಸ್ಥೆಯ ಜೀವಾಳ. ಇಂತಹ ಸಂದರ್ಭ ಕೃಷಿ ಮತ್ತು ಗ್ರಾಮೀಣ ಬದುಕಿನ ಹಿತಾಸಕ್ತಿ ಕಡೆಗಣಿಸಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು ರೈತ ಸಮುದಾಯಕ್ಕೆ ದೊಡ್ಡ ಹೊಡೆತವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವ ವಿದ್ಯುತ್ ಖಾಸಗೀಕರಣ ಯೋಜನೆ ಕೃಷಿ ವಲಯಕ್ಕೆ ಮರಣ ಶಾಸನವಾಗಲಿದೆ. ಇದರ ಭಾಗವಾಗಿ ರಾಜ್ಯದ 19 ಜಿಲ್ಲೆಗಳ ಸಂಪೂರ್ಣ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಸಂಸ್ಥೆ ಟಾಟಾ ಪವರ್‌ಗೆ ವಹಿಸಲು ಹುನ್ನಾರ ನಡೆಸಲಾಗುತ್ತಿದೆ ಎಂದು ಆರೋಪಿಸಿದ ಅವರು ವಿದ್ಯುತ್ ಕ್ಷೇತ್ರ ಖಾಸಗಿ ಕಂಪನಿಗಳ ಪಾಲಾದರೆ ಲಾಭವೇ ಮುಖ್ಯ ಗುರಿಯಾಗುವುದರಿಂದ ರೈತರ ಹಿತಾಸಕ್ತಿ ಕಡೆಗಣನೆಯಾಗುವ ಸಾಧ್ಯತೆ ಇದೆ ಎಂದರು.

ಖಾಸಗಿ ಕಂಪನಿಗಳು ವಿದ್ಯುತ್ ಪೂರೈಕೆಯಲ್ಲಿ ಪ್ರೀಪೇಯ್ಡ್ ಡಿಜಿಟಲ್ ಮೀಟರ್ ಅಳವಡಿಸುವ ಮೂಲಕ ಬಳಕೆಯ ಮೊತ್ತವನ್ನು ಮುಂಗಡವಾಗಿ ಪಾವತಿಸುವ ವ್ಯವಸ್ಥೆ ಜಾರಿಗೊಳಿಸಬಹುದು. ಇದರಿಂದ ಈಗ ರೈತರಿಗೆ ದೊರೆಯುತ್ತಿರುವ ಉಚಿತ ವಿದ್ಯುತ್ ಸೌಲಭ್ಯಗಳು ಸ್ಥಗಿತಗೊಳ್ಳುವ ಅಪಾಯವಿದೆ. ಕೃಷಿ ಪಂಪ್ ಸೆಟ್‌ಗಳಿಗೆ ದೊರೆಯುತ್ತಿರುವ ವಿದ್ಯುತ್ ಸಹಾಯಧನ ಕಡಿತಗೊಂಡರೆ ಈಗಾಗಲೇ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚದಿಂದ ಸಂಕಷ್ಟದಲ್ಲಿರುವ ರೈತರು ಮತ್ತಷ್ಟು ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಿದ್ಯುತ್ ಸೇವೆಯು ಜನಸಾಮಾನ್ಯರ ಮೂಲ ಭೂತ ಹಕ್ಕಿನ ಭಾಗವಾಗಿದ್ದು, ಅದನ್ನು ಖಾಸಗಿ ಸಂಸ್ಥೆಗಳ ಲಾಭದಾಯಕ ವ್ಯವಹಾರವಾಗಿ ಪರಿವರ್ತಿಸಲು ಅವಕಾಶ ನೀಡಬಾರದು. ವಿದ್ಯುತ್ ಸಾರ್ವಜನಿಕ ವಲಯದಲ್ಲಿಯೇ ಮುಂದುವರಿಯಬೇಕು. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ನಾಗರಿಕರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಸರ್ಕಾರ ಖಾಸಗೀಕರಣ ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಕೊತ್ತೇಗಾಲ ಮಹೇಶ್ ಕುಮಾರ್, ಈ.ರಾಜು, ಚಿದರವಳ್ಳಿ ನಾಗೇಂದ್ರ ಸೇರಿದಂತೆ ಹಲವರು ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಶಂಕರ್, ರಾಜಶೇಖರ, ನಾರಾಯಣ, ಬನ್ನೂರು ಹುಚ್ಚೇಗೌಡ, ಕೊತ್ತೇಗಾಲ ಶಿವಪ್ರಸಾದ್, ಮಹೇಶ್, ಮಾಡ್ರಹಳ್ಳಿ ನಂಜುಂಡಸ್ವಾಮಿ, ಕೆಂಚಣ್ಣ, ಮಹಾದೇವ, ಕಟ್ಟೇಪುರ ಶಿವಮಲ್ಲಪ್ಪ, ಪ್ರದೀಪ್ ಕುಮಾರ್, ಸಿದ್ದಪ್ಪ, ತಲಕಾಡು ದಿನೇಶ್, ಕೊತ್ತೇಗಾಲ ಶಾಂತಮೂರ್ತಿ, ಮಹೇಶ್, ಅಂದಾನಿ, ಮಹದೇವಸ್ವಾಮಿ, ಚಂದ್ರಶೇಖರ್, ಶೇಖರ, ಚಂದ್ರು, ನಾಗರಾಜಪ್ಪ, ಬಸವರಾಜು, ಪಾಪಣ್ಣ, ಮಾದೇವಪ್ಪ, ನಾರಾಯಣ್, ಚಾಮುಂಡಿ, ಕುಮಾರ್, ಚಂದ್ರಶೇಖರ್ ಸೇರಿದಂತೆ ಹಲವಾರು ರೈತ ಮುಖಂಡರು ಹಾಜರಿದ್ದರು.

> “ಖಾಸಗಿ ಸಂಸ್ಥೆಗಳು ಲಾಭದ ಆಧಾರದ ಮೇಲೆ ಕಾರ್ಯ ನಿರ್ವಹಿಸುವುದರಿಂದ ಗ್ರಾಮೀಣ ಪ್ರದೇಶಗಳ ಸೇವಾ ಗುಣಮಟ್ಟ, ವಿದ್ಯುತ್ ಶುಲ್ಕ, ನಿರ್ವಹಣಾ ವ್ಯವಸ್ಥೆ ಹಾಗೂ ರೈತರಿಗೆ ದೊರೆಯುತ್ತಿರುವ ಸೌಲಭ್ಯಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ. ವಿದ್ಯುತ್ ಕ್ಷೇತ್ರದ ಯಾವುದೇ ನೀತಿ ಬದಲಾವಣೆಗಳು ಜನಸಾಮಾನ್ಯರ ಬದುಕಿನ ಮೇಲೆ ನೇರ ಪರಿಣಾಮ ಬೀರುವುದರಿಂದ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ ನಿರ್ಧಾರ ಕೈಗೊಳ್ಳುವ ಅಗತ್ಯವಿದೆ. – ವೀರೇಶ್, ಸೆಸ್ಕ್ ಎಇಇ.

ಚಾ.ನಗರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ

ಕಿಡಿಗೇಡಿಗಳ ಶಿಕ್ಷೆಗೆ ಒಳಪಡಿಸಲು ಒತ್ತಾಯ


ಸುದ್ದಿಗೋಷ್ಠಿಯಲ್ಲಿ ಮಾದರ ಮಹಾಸಭಾ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಪರಶಿವಮೂರ್ತಿ.

ಹೆಚ್.ಡಿ.ಕೋಟೆ, ಜೂ.16– ಚಾಮರಾಜನಗರ ಜಿಲ್ಲೆ ಮಸಣಾಪುರ ಮತ್ತು ಚಾಟಿಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವುದನ್ನು ಮಾದಾರ ಮಹಾಸಭೆ ತೀವ್ರವಾಗಿ ಖಂಡಿಸುತ್ತದೆ ಎಂದು ಮಾದಾರ ಮಹಾಸಭಾ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಪರಶಿವಮೂರ್ತಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರಿಗೆ ಆದ ಅವಮಾನ ಸಂವಿಧಾನಕ್ಕೆ ಆದ ಅವಮಾನವಾಗಿದೆ. ಇದರಿಂದ ಸರ್ಕಾರ ಎಚ್ಚೆತ್ತು ಕಿಡಿಗೇಡಿಗಳನ್ನು ಬಂಧಿಸಿ, ಶಿಕ್ಷೆಗೆ ಒಳಪಡಿಸಬೇಕು. ಅಲ್ಲದೇ ಸರ್ಕಾರ ಅಂಬೇಡ್ಕರ್ ಪ್ರತಿಮೆ ಮತ್ತು ಭಾವಚಿತ್ರಗಳಿಗೆ ಆಗುತ್ತಿರುವ ಅಪಮಾನ ತಪ್ಪಿಸಲು ಕಠಿಣ ಕಾನೂನು ಕ್ರಮ, ಕಾಯ್ದೆಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ ವ್ಯಕ್ತಿ ಯಾರೆಂದು ತಿಳಿದು ಬಂದಿದೆ. ಆತನನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಇದು ಬೇರೆಯವರಿಗೆ ಮಾದರಿಯಾಗುವಂತಿರಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಸರಗೂರು ತಾಲೂಕು ಮಾದಾರ ಮಹಾಸಭಾ ಅಧ್ಯಕ್ಷ ಬೆಟ್ಟಸ್ವಾಮಿ, ಮಾತಾಂಗ ಜನ ಜಾಗೃತಿ ವೇದಿಕೆ ಅಧ್ಯಕ್ಷ ರವೀಶ್, ಮುಖಂಡ ವೆಂಕಟೇಶ್, ನಾಗರಾಜು, ಪ್ರಕಾಶ್, ಶಿವಯ್ಯ, ಉಡ ನಾಗರಾಜು, ಶಿವಾಜಿ, ಕಾರ್ಯದರ್ಶಿ, ಚೆಲುವರಾಜು, ಚಿಕ್ಕಸ್ವಾಮಿ, ಸಿಗಯ್ಯ, ಪೈಂಟ್ ನಾಗರಾಜು, ಕಾಳಪ್ಪಾಜಿ, ಶಿವರಾಜು ಇದ್ದರು.

ಜೆಸಿಬಿಗೆ ಸಿಲುಕಿ ಗಾಯಗೊಂಡಿದ್ದ ಆಮೆ ರಕ್ಷಣೆ

ಚಿಕಿತ್ಸೆ ನೀಡಿದ ಯುವಕರ ಕಾರ್ಯಕ್ಕೆ ಸಾರ್ವಜನಿಕರ ಮೆಚ್ಚುಗೆ


ಗಾಯಗೊಂಡಿದ್ದ ಆಮೆಗೆ ಚಿಕಿತ್ಸೆ ನೀಡಿರುವುದು.

ನಂಜನಗೂಡು, ಜೂ.16– ತಾಲೂಕಿನ ಮಲ್ಲಿಪುರ ಗ್ರಾಮದ ಬಳಿ ಕಳೆದ ವಾರ ನಡೆದ ಜಮೀನೊಂದರ ಕಾಲುವೆ ಕಾಮಗಾರಿ ವೇಳೆ ಜೆಸಿಬಿಯ ಕಬ್ಬಿಣದ ಬಕೆಟ್ ಹಲ್ಲುಗಳಿಗೆ ಆಮೆ ಸಿಲುಕಿ ಅದರ ಮೇಲ್ಭಾಗದ ಕವಚ ಸಂಪೂರ್ಣ ಹೊಡೆದು ಚೂರು ಚೂರಾಗಿ ಗಾಯಗೊಂಡಿತ್ತು. ಬದುಕುವ ಸಾಧ್ಯತೆ ಇಲ್ಲ ಎನ್ನುವಂತಹ ಗಂಭೀರ ಸ್ಥಿತಿಯಲ್ಲಿದ್ದ ಆಮೆಯನ್ನು ಯುವಕರು ರಕ್ಷಿಸಿ, ಚಿಕಿತ್ಸೆ ನೀಡಿ ಮತ್ತೆ ಪ್ರಕೃತಿಯ ಮಡಿಲಿಗೆ ಸೇರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಾಮಗಾರಿ ಸ್ಥಳದಲ್ಲಿ ಗಾಯಗೊಂಡಿದ್ದ ಆಮೆಯನ್ನು ಕೆಲವರು ಆಹಾರಕ್ಕಾಗಿ ತೆಗೆದುಕೊಂಡು ಹೋಗಲು ಯತ್ನಿಸುತ್ತಿದ್ದ ವೇಳೆ ಇದನ್ನು ಗಮನಿಸಿದ ಯುವ ಬ್ರಿಗೇಡ್‌ನ ರವಿ ಶಾಸ್ತ್ರಿ ಅವರು ಆಮೆ ರಕ್ಷಿಸಿದ್ದಾರೆ. ಬಳಿಕ ಆಮೆ ಸ್ಥಿತಿಯ ಕುರಿತು ಸ್ನೇಹಿತ ಚಂದ್ರಶೇಖರ್ ಅವರಿಗೆ ವಾಟ್ಸಪ್ ಮೂಲಕ ಮಾಹಿತಿ ಹಾಗೂ ಚಿತ್ರಗಳನ್ನು ಕಳುಹಿಸಿ ನೆರವು ಕೋರಿದ್ದರು. ಬಳಿಕ ತಕ್ಷಣ ಆಮೆಯನ್ನು ನಂಜನಗೂಡಿಗೆ ತಂದು ಪಶು ವೈದ್ಯರನ್ನು ಸಂಪರ್ಕಿಸಿದಾಗ ಕವಚ ಎರಡು ಭಾಗವಾಗಿರುವುದರಿಂದ ಅದನ್ನು ಉಳಿಸುವುದು ಕಷ್ಟ ಎಂದು ತಿಳಿಸಿದ್ದಾರೆ. ಆದರೂ ಸಾಯಲು ಬಿಡುವುದಕ್ಕಿಂತ ಒಂದು ಪ್ರಯತ್ನ ಮಾಡೋಣ ಎಂಬ ಉದ್ದೇಶದಿಂದ ಚಂದ್ರಶೇಖರ್ ಅವರು ವಿಶೇಷ ವಿಧಾನದಲ್ಲಿ ಚಿಕಿತ್ಸೆ ನೀಡಲು ಮುಂದಾಗಿದ್ದಾರೆ.

ಒಡೆದು ಭಾಗವಾಗಿದ್ದ ಕವಚದ ಎರಡೂ ಬದಿಗಳಲ್ಲಿ ಸಣ್ಣ ಡ್ರಿಲ್ಲಿಂಗ್ ಯಂತ್ರದ ಮೂಲಕ ರಂಧ್ರಗಳನ್ನು ಮಾಡಿ, ತುಕ್ಕು ನಿರೋಧಕ ತಂತಿಯ ಸಹಾಯದಿಂದ ಜೋಡಿಸಲಾಗಿದೆ. ಮೇಲ್ಭಾಗದಲ್ಲಿ ಚೂರು ಚೂರಾಗಿದ್ದ ಭಾಗಗಳಿಗೂ ಸೂಕ್ಷ್ಮ ರಂಧ್ರಗಳನ್ನು ಮಾಡಿ ತಂತಿಯಿಂದ ಮೆಶ್ ಮಾದರಿಯಲ್ಲಿ ಹೆಣೆದು ಬಿಗಿಗೊಳಿಸಲಾಗಿದೆ. ನಂತರ ಎಂ–ಸೀಲ್ ಬಳಸಿ ಕವಚದ ಮೇಲ್ಭಾಗವನ್ನು ಮುಚ್ಚಿ ಕೃತಕ ರಕ್ಷಣಾ ಪದರ ನಿರ್ಮಿಸಲಾಗಿದೆ.

ಚಿಕಿತ್ಸೆ ಬಳಿಕ 5 ದಿನಗಳ ಕಾಲ ಆಮೆಯನ್ನು ನೀರಿನ ತೊಟ್ಟಿಯಲ್ಲಿ ಇರಿಸಿ ಅದರ ಚಲನ–ವಲನದ ಮೇಲೆ ನಿಗಾ ವಹಿಸಲಾಯಿತು. ಆರಂಭದಲ್ಲಿ ನಡೆಯಲೂ ಸಾಧ್ಯವಾಗದೇ ನರಳುತ್ತಿದ್ದ ಆಮೆ ನಿಧಾನವಾಗಿ ಚೇತರಿಕೆ ಕಂಡು ನಡೆಯಲು, ಈಜಲು ಹಾಗೂ ಆಹಾರ ಸೇವಿಸಲು ಆರಂಭಿಸಿತು. ಎಂ–ಸೀಲ್‌ನಿಂದ ನಿರ್ಮಿಸಲಾದ ಕೃತಕ ಕವಚವೂ ಸಹಜ ಕವಚದಂತೆ ಗಟ್ಟಿಯಾಗಿ ಹೊಂದಿ ಕೊಂಡಿದ್ದು, ಆಮೆಯ ಚಟುವಟಿಕೆಯಲ್ಲಿ ಯಾವುದೇ ತೊಂದರೆ ಕಾಣಿಸಲಿಲ್ಲ. ಸಂಪೂರ್ಣ ಚೇತರಿಕೆ ಲಕ್ಷಣ ಕಂಡು ಬಂದ ಬಳಿಕ ಆಮೆಯನ್ನು ಕಪಿಲಾ ನದಿಗೆ ಬಿಡಲಾಯಿತು. ನದಿಗೆ ಬಿಡುತ್ತಿದ್ದಂತೆಯೇ ವೇಗವಾಗಿ ಈಜುತ್ತಾ ಪ್ರಕೃತಿಯ ಮಡಿಲು ಸೇರಿಕೊಂಡ ಆಮೆಯನ್ನು ಕಂಡ ಸ್ಥಳೀಯರು ಸಂತಸ ವ್ಯಕ್ತಪಡಿಸಿದರು.

ಗಂಭೀರವಾಗಿ ಗಾಯಗೊಂಡಿದ್ದ ಆಮೆಯನ್ನು ಸಮಯೋಚಿತವಾಗಿ ರಕ್ಷಿಸಿ ಚಿಕಿತ್ಸೆ ನೀಡಿ ಜೀವದಾನ ಮಾಡಿದ ರವಿಶಾಸ್ತ್ರಿ ಹಾಗೂ ಚಂದ್ರಶೇಖರ್ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ದೇವಾಲಯ ನಿರ್ಮಾಣಕ್ಕೆ ಧರ್ಮಸ್ಥಳ ಸಂಸ್ಥೆಯಿಂದ ಚೆಕ್ ವಿತರಣೆ


ದೇವಾಲಯ ನಿರ್ಮಾಣಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಚೆಕ್ ವಿತರಿಸಲಾಯಿತು.

ಕೆ.ಆರ್.ನಗರ, ಜೂ.16– ಹನಿ ಹನಿ ಸೇರಿದರೆ ಹಳ್ಳ ತೆನೆ ತೆನೆ ಕೂಡಿದರೆ ಬಳ್ಳ ಎಂಬ ಆಡು ಮಾತಿಗೆ ಮತ್ತೊಂದು ಹೆಸರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಎಂದು ಸಂಸ್ಥೆ ತಾಲೂಕು ಯೋಜನಾಧಿಕಾರಿ ಸದಾನಂದ್ ದೇವಾಡಿಗ ತಿಳಿಸಿದರು.

ತಾಲೂಕಿನ ಬಸವರಾಜಪುರದಲ್ಲಿ ಶ್ರೀಶನೇಶ್ವರಸ್ವಾಮಿ ದೇವಾಲಯ ನಿರ್ಮಾಣಕ್ಕೆ ದೇವಾಲಯದ ಸೇವಾ ಟ್ರಸ್ಟ್‌ನವರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಮಂಜೂರಾದ ಒಂದು ಲಕ್ಷ ರೂ.ಗಳ ಅನುದಾನದ ಚೆಕ್ ವಿತರಿಸಿ ಮಾತನಾಡಿದ ಅವರು, ಡಾ.ವೀರೇಂದ್ರ ಹೆಗಡೆ ಅವರ ಕನಸಿನ ಕೂಸಾದ ಯೋಜನೆ ಇಂದು ಕರ್ನಾಟಕದ ಹಳ್ಳಿ ಹಳ್ಳಿಯಲ್ಲೂ ತಲೆ ಎತ್ತಿದೆ. ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮೀಣ ಪರಿವರ್ತನೆಗೆ ಹೊಸ ಭಾಷ್ಯ ಬರೆದಿದೆ. ಹೀಗಾಗಿ ಗಾಂಧೀಜಿಯವರ ಗ್ರಾಮ ರಾಜ್ಯದ ಪರಿಕಲ್ಪನೆ ಈ ಯೋಜನೆಯಿಂದ ಸಾಕಾರಗೊಳ್ಳುತ್ತಿದೆ ಎಂದು ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಮಾಜದ ಎಲ್ಲಾ ವರ್ಗಕ್ಕೂ ಆರ್ಥಿಕ ನೆರವು ನೀಡುವ ಮೂಲಕ ಶಕ್ತಿ ತುಂಬಿದೆ. ರೈತರು, ವಿದ್ಯಾರ್ಥಿಗಳು, ಮಹಿಳೆಯರು, ಕೂಲಿ ಕಾರ್ಮಿಕರು, ಪುರಾತನ ದೇವಸ್ಥಾನಗಳ ಜೀರ್ಣೋದ್ಧಾರ, ಕೃಷಿ ಮೇಳ, ತರಬೇತಿ, ಮಾನವ ಸಂಪನ್ಮೂಲ ಬಳಕೆ, ಕೆರೆಕಟ್ಟೆಗಳ ಪುನಶ್ಚೇತನ ಹೀಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಜಾರಿಗೆ ತಂದು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.

ಇಡೀ ಬದುಕನ್ನೇ ಬೀದಿಗೆ ತರುತ್ತಿದ್ದ ಕುಡಿತದ ಚಟ ಬಿಡಿಸಲು ಮದ್ಯವರ್ಜನ ಶಿಬಿರ ಎಲ್ಲೆಡೆ ಹಮ್ಮಿಕೊಂಡು ಸಾವಿರಾರು ಮಂದಿ ಕುಡಿತದಿಂದ ವಿಮುಕ್ತಿ ಪಡೆದು ನೆಮ್ಮದಿ ಬದುಕು ನಡೆಸುವಂತಾಗಿದೆ. ಇಂತಹ ಬದಲಾವಣೆಯಿಂದ ಬದುಕಿನ ಸಾರ್ಥಕತೆ ಕಾಣಬಹುದು ಎಂದರು.

ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ, ಗ್ರಾಮದ ಮಂಜುನಾಥ್, ಸ್ವಾಮಿ, ಮಾದಯ್ಯ, ರಘುನಂದನ್, ಸುರೇಶ್, ರಾಮಕೃಷ್ಣ, ಸಂಸ್ಥೆ ಮೇಲ್ವಿಚಾರಕ ರವಿ.ಬಿ. ಹಾಗೂ ಸೇವಾ ಪ್ರತಿನಿಧಿ ವಿಶಾಲಾಕ್ಷಿ ಇದ್ದರು.

ಯುವ ಜನತೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ


ಕ್ರೀಡಾ ಪಟುಗಳಿಗೆ ಎಂ.ಡಿ.ತ್ರಿವೇಣಿ ಶುಭ ಕೋರಿದರು.

ಹುಣಸೂರು, ಜೂ. 16–ಉತ್ತಮ ಆರೋಗ್ಯ ಹಾಗೂ ಬುದ್ಧಿ ಕೌಶಲ್ಯತೆಗಾಗಿ ಯುವ ಜನತೆ ಕ್ರೀಡೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಮಡಿಲು ಸೇವಾ ಸಂಸ್ಥೆ ಅಧ್ಯಕ್ಷೆ ಎಂ.ಡಿ. ತ್ರಿವೇಣಿ ತಿಳಿಸಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಆಯೋಜಿಸಿದ್ದ 2 ದಿನಗಳ 4ನೇ ರಾಜ್ಯ ಮಟ್ಟದ ಪುರುಷ ಮತ್ತು ಮಹಿಳಾ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ಕ್ರೀಡಾ ಪಟುಗಳಿಗೆ ಶುಭ ಕೋರಿ ಮಾತನಾಡಿದ ಅವರು, ಕ್ರೀಡಾಪಟುಗಳು ಗೆದ್ದೆ ಗೆಲ್ಲುತ್ತೇವೆ ಎಂಬ ಆಶಾಭಾವನೆಯಿಂದ ರಾಜ್ಯದ ವಿವಿಧೆಡೆಗಳಿಂದ ಆಗಮಿಸುತ್ತಾರೆ. ಆದರೆ ಕೆಲವು ವೇಳೆ ಗೆಲುವು ತಪ್ಪಿ ಹೋಗುತ್ತದೆ. ಅದಕ್ಕೆ ನಾವು ನಿರಾಶರಾಗಬಾರದು. ಸೋಲಿನ ಕಾರಣ ತಿಳಿದು ಮತ್ತೆ ಗೆಲುವಿನ ಪ್ರಯತ್ನ ಮಾಡಬೇಕು ಎಂದರು. ಪಂದ್ಯಾವಳಿಯಲ್ಲಿ ಮಂಗಳೂರು, ಬೆಂಗಳೂರು, ಮೈಸೂರು, ತಿ.ನರಸಿಪುರ, ಹಾರೋಹಳ್ಳಿ, ಮಂಡ್ಯ ಸೇರಿದಂತೆ ವಿವಿಧೆಡೆಗಳಿಂದ 8 ಮಹಿಳಾ ಹಾಗೂ 10 ಪುರುಷರ ತಂಡಗಳು ಭಾಗವಹಿಸಿವೆ ಎಂದು ಆಯೋಜಕ ಶ್ರೀನಿವಾಸ್ ತಿಳಿಸಿದರು.

ವರ್ಗಾವಣೆಗೊಂಡ ವೈದ್ಯರಿಗೆ ಸನ್ಮಾನ, ಬೀಳ್ಕೊಡುಗೆ


ವರ್ಗಾವಣೆಗೊಂಡ ವೈದ್ಯರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಚುಂಚನಕಟ್ಟೆ, ಜೂ.16– ರೋಗಿಗಳ ಆರೋಗ್ಯ ರಕ್ಷಣೆಗಾಗಿ ಸದಾ ದುಡಿಯುವ ಪ್ರತಿಯೊಬ್ಬ ವೈದ್ಯನ ಹೆಸರು ಮತ್ತು ಅವರ ಸೇವೆ ಜನಮಾನಸದಲ್ಲಿ ಶಾಶ್ವತವಾಗಿ ಉಳಿಯಲಿದೆ ಎಂದು ಕೆ.ಆರ್.ನಗರ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಅಶೋಕ್ ನಾಮಧಾರಿ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹೊಸಕೋಟೆ ಆಯುಷ್ಮಾನ್ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಿ ವರ್ಗಾವಣೆಗೊಂಡ ಡಾ.ನಟರಾಜು ಅವರ ಬಿಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ವೈದ್ಯರು ಒಂದೆರಡು ವರ್ಷ ಕೆಲಸ ಮಾಡುವುದೇ ಹೆಚ್ಚು. ಈ ಅಪವಾದ ದೂರಮಾಡಿ ಸುದೀರ್ಘ 11 ವರ್ಷಗಳ ಕಾಲ ಇಲ್ಲಿ ಕೆಲಸ ನಿರ್ವಹಿಸುವಾಗ ರೋಗಿಗಳ ಸಮಸ್ಯೆಗೆ ಸ್ಪಂದಿಸಿ ಸೇವೆ ಸಲ್ಲಿಸಿದ ಡಾ.ನಟರಾಜು ಅವರ ಕಾರ್ಯ ಸ್ಮರಣೀಯವಾದದು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ನಟರಾಜು, ಕಳೆದ 11 ವರ್ಷಗಳಿಂದ ಈ ಗ್ರಾಮದಲ್ಲಿ ಆರೋಗ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಲು ಸಹಕಾರ ನೀಡಿದ ಇಲ್ಲಿನ ಜನತೆಗೆ ಕೃತಜ್ಞತೆ ಸಲ್ಲಿಸುವುದರ ಜೊತೆಗೆ ಇಲ್ಲಿ ಕೆಲಸ ಮಾಡಿದ ಬಗ್ಗೆ ಸಂತೃಪ್ತಿ ಇದೆ ಎಂದರು.

ಈ ವೇಳೆ ನಿವೃತ್ತ ವೈದ್ಯ ಶ್ರೀಕಂಠ ಪ್ರಸಾದ್, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಬಿ.ಸಚಿನ್, ಡೈರಿ ಅಧ್ಯಕ್ಷ ಪಾಂಡು, ನಿರ್ದೇಶಕ ಶಿವಕುಮಾರ್, ನ್ಯಾಯಬೆಲೆ ಅಂಗಡಿ ಶಿವಕುಮಾರ್, ಹರವೆ ಗ್ರಾಪಂ ಮಾಜಿ ಸದಸ್ಯ ಜಯಣ್ಣ, ಕಪ್ಪಡಿ ಯಜಮಾನ್ ಅಪ್ಪಾಜಿಗೌಡ, ಮುಖಂಡ ಸಿದ್ದೇಶ್, ಶುಶ್ರೂಷಕರಾದ ಸುಮ, ಸಮುದಾಯ ಆರೋಗ್ಯಾಧಿಕಾರಿ ರಕ್ಷಿತಾ, ನಯನ, ಆಶಾ ಕಾರ್ಯಕರ್ತೆಯರಾದ ಶೈಲಜಾ, ನಾಗರತ್ನ, ಪಾರ್ವತಿ, ಮಂಗಳಮ್ಮ, ಮಂಜುಳಾ, ಮಹದೇವಮ್ಮ, ಮಮತಾ ಇದ್ದರು.

ನಂ.ಗೂಡಲ್ಲಿ ರಾಜ್ಯಮಟ್ಟದ ಯೋಗಾಸನ ಚಾಂಪಿಯನ್‌ಶಿಪ್



ರಾಜ್ಯಮಟ್ಟದ ಯೋಗಾ ಚಾಂಪಿಯನ್‌ಶಿಪ್‌ನಲ್ಲಿ ಯೋಗ ಪಟುಗಳು ಭಾಗವಹಿಸಿರುವುದು.

ನಂಜನಗೂಡು, ಜೂ.16– ಟ್ರೂ ಯೋಗ ಫಿಟ್ನೆಸ್ ಅಂಡ್ ಜಿಮ್ ಸಂಸ್ಥೆಯ 4ನೇ ವಾರ್ಷಿಕೋತ್ಸವದ ಅಂಗವಾಗಿ ನಗರದಲ್ಲಿ ರಾಜ್ಯಮಟ್ಟದ ಯೋಗಾಸನ ಚಾಂಪಿಯನ್‌ಶಿಪ್ ನಡೆಯಿತು.

ರಾಜ್ಯದ ವಿವಿಧೆಡೆಗಳಿಂದ 250ಕ್ಕೂ ಹೆಚ್ಚು ಯೋಗಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ವಯೋಮಿತಿ ಆಧಾರಿತ 10 ವಿಭಾಗಗಳಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಮತ್ತು ವಿಶೇಷಚೇತನರಿಗೆ ಪ್ರತ್ಯೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಚೈತನ್ಯ ಯೋಗ ಕೇಂದ್ರದ ಮುಖ್ಯಸ್ಥ ಹಾಗೂ ಮೈಸೂರು ಯೋಗ ಒಕ್ಕೂಟದ ಗೌರವ ಕಾರ್ಯದರ್ಶಿ ಡಾ.ಬಿ.ಪಿ.ಮೂರ್ತಿ ಮತ್ತು ಟ್ರೂ ಯೋಗ ಅಂಡ್ ಫಿಟ್ನೆಸ್ ಸಂಸ್ಥಾಪಕ ಎಲ್. ಭರತ್ ಉದ್ಘಾಟಿಸಿದರು.

ಸ್ಪರ್ಧೆಯಲ್ಲಿ 'ಚಾಂಪಿಯನ್ ಆಫ್ ಚಾಂಪಿಯನ್' ವಿಭಾಗದ ಯೋಗಿ ಸಾಮ್ರಾಟ್–2026 ಪ್ರಶಸ್ತಿಯನ್ನು ಮೈಸೂರಿನ ಹರ್ಷಿತ್ ಪಡೆದುಕೊಂಡರೆ, ಯೋಗ ಸಾಮ್ರಾಟ್–2026 ಪ್ರಶಸ್ತಿಯನ್ನು ಮೈಸೂರಿನ ರಜತ್ ಗಿರಿ ತಮ್ಮದಾಗಿಸಿಕೊಂಡರು. ವಿವೇಕಾನಂದ ಯೋಗ ಎಜುಕೇಶನ್ ಅಂಡ್ ರಿಸರ್ಚ್ ಸೆಂಟರ್ ಮುಖ್ಯಸ್ಥರು ಹಾಗೂ ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗ ಅಸೋಸಿಯೇಷನ್ ಅಧ್ಯಕ್ಷ ಡಾ.ಪಿ.ಎನ್.ಗಣೇಶ್ ಕುಮಾರ್ ಬಹುಮಾನ ವಿತರಿಸಿದರು.

ಓವರ್ ಆಲ್ ಚಾಂಪಿಯನ್ ಪ್ರಶಸ್ತಿ ಪಡೆದ ಪುರುಷ ಮತ್ತು ಮಹಿಳಾ ವಿಭಾಗದ ವಿಜೇತರಿಗೆ ಪ್ರಶಸ್ತಿ ಹಾಗೂ 5 ಸಾವಿರ ರೂ. ಬಹುಮಾನ ನೀಡಲಾಯಿತು. ಎಲ್ಲಾ ವಿಭಾಗಗಳ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜೊತೆಗೆ ಭಾಗವಹಿಸಿದ ಎಲ್ಲಾ ಯೋಗಪಟುಗಳಿಗೆ ಸ್ಮರಣಿಕೆ ಹಾಗೂ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ಯೋಗ ಕುಮಾರ್ ರಾಜಶೇಖರ ಮೂರ್ತಿ, ಮಣಿಕಂಠ, ಚಂದ್ರು, ರವಣೇಕರ್ ಹಾಗೂ ರವಿಕುಮಾರ್ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದರು.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಹುಲ್ಲೆಕಟ್ಟೆ ಕೆರೆ ಮಣ್ಣು ಅಕ್ರಮ ಸಾಗಾಟ ಆರೋಪ

ಮಣ್ಣು ಸಾಗಾಟ ತಡೆದ ಹಳೇ ಕೆಂಪಯ್ಯನಹುಂಡಿ ಗ್ರಾಮಸ್ಥರು

ಘಟನೆ ಸಂಬಂಧ ಅಧಿಕಾರಿಗಳಿಗೆ ದೂರು, ಮಾತಿನ ಚಕಮಕಿ, ಒತ್ತಡಕ್ಕೆ ಮಣಿದ ಸಿಬ್ಬಂದಿಯಿಂದ ಕಾಮಗಾರಿ ಸ್ಥಗಿತ


ಗ್ರಾಮಸ್ಥರು ಹುಲ್ಲೇಕಟ್ಟೆ ಕೆರೆಯಿಂದ ಮಣ್ಣು ತೆಗೆಯುವ ಕಾರ್ಯಕ್ಕೆ ಅಡ್ಡಿಪಡಿಸಿದರು.

ತಿ.ನರಸೀಪುರ, ಜೂ.16– ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದ ಹುಲ್ಲೇಕಟ್ಟೆ ಕೆರೆಯಿಂದ ಅಕ್ರಮವಾಗಿ ಮಣ್ಣು ತೆಗೆದು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು ಮಂಗಳವಾರ ಮಣ್ಣು ಸಾಗಣೆಯನ್ನು ತಡೆದರು.

ಗ್ರಾಮದ ಯುವ ಮುಖಂಡ ಜೈಕುಮಾರ್ ನೇತೃತ್ವದಲ್ಲಿ ಕೆರೆ ಬಳಿ ಜಮಾಯಿಸಿದ ಗ್ರಾಮಸ್ಥರು ಮಣ್ಣು ತೆಗೆಯುತ್ತಿದ್ದ ಜೆಸಿಬಿ ತಡೆದು ನಿಲ್ಲಿಸಿದರು. ಕೆರೆಯಲ್ಲಿನ ಮಣ್ಣನ್ನು ನಿರಂತರವಾಗಿ ತೆಗೆದು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಬಳಸಲಾಗುತ್ತಿದೆ ಎಂಬ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ಗ್ರಾಮಸ್ಥರು ಕಾಮಗಾರಿ ನಡೆಸುತ್ತಿದ್ದವರನ್ನು ಪ್ರಶ್ನಿಸಿದರು.

ಈ ವೇಳೆ ಸ್ಥಳದಲ್ಲಿದ್ದ ಕಾಮಗಾರಿ ಮೇಲ್ವಿಚಾರಕ (ಮೇಸ್ತ್ರಿ) ಶಿವಕುಮಾರ್ ಅವರಿಗೆ ಗ್ರಾಮಸ್ಥರು ಮಣ್ಣು ತೆಗೆಯಲು ಪಡೆದಿರುವ ಅನುಮತಿಯ ದಾಖಲೆಗಳನ್ನು ತೋರಿಸುವಂತೆ ಒತ್ತಾಯಿಸಿದರು. ಆರಂಭದಲ್ಲಿ ತಹಸೀಲ್ದಾರ್ ಅವರ ಅನುಮತಿ ಇದೆ ಎಂದು ಹೇಳಿದ ಶಿವಕುಮಾರ್, ದಾಖಲೆಗಳನ್ನು ತೋರಿಸುವಂತೆ ಗ್ರಾಮಸ್ಥರು ಒತ್ತಾಯಿಸಿದಾಗ ತನ್ನ ಹೇಳಿಕೆ ಬದಲಿಸಿ ತಹಸೀಲ್ದಾರ್ ಮೌಖಿಕವಾಗಿ ಅನುಮತಿ ನೀಡಿದ್ದಾರೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಗ್ರಾಮಸ್ಥರು, ಸರ್ಕಾರಿ ಕೆರೆಯಿಂದ ಮಣ್ಣು ತೆಗೆಯಲು ಮೌಖಿಕ ಆದೇಶ ಸಾಕಾಗುವುದಿಲ್ಲ. ಸಂಬಂಧಪಟ್ಟ ಇಲಾಖೆಗಳ ಲಿಖಿತ ಅನುಮತಿ ಹಾಗೂ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಪರವಾನಗಿ ಅಗತ್ಯವಿದೆ ಎಂದು ವಾದಿಸಿದರು. ಅಲ್ಲದೆ ಅನುಮತಿ ಪತ್ರವಿದ್ದರೆ ಸ್ಥಳದಲ್ಲೇ ತೋರಿಸಬೇಕು ಎಂದು ಪಟ್ಟು ಹಿಡಿದರು.

ಅಧಿಕಾರಿಗಳಿಗೆ ದೂರು: ಘಟನೆ ಕುರಿತು ಗ್ರಾಮಸ್ಥರು ತಕ್ಷಣ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಹಾಗೂ ತಹಸೀಲ್ದಾರ್‌ಗೆ ಕರೆ ಮಾಡಿ ಮಾಹಿತಿ ನೀಡಿ ದೂರು ಸಲ್ಲಿಸಿದರು. ಸರ್ಕಾರಿ ಆಸ್ತಿಯಾಗಿರುವ ಕೆರೆಯಿಂದ ಅಕ್ರಮವಾಗಿ ಮಣ್ಣು ತೆಗೆದು ಸಾಗಿಸಲಾಗುತ್ತಿದೆ. ಆದ್ದರಿಂದ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜೆಸಿಬಿ ಯಂತ್ರವನ್ನು ವಶಕ್ಕೆ ಪಡೆದು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮಾತಿನ ಚಕಮಕಿ, ಬಿಗುವಿನ ವಾತಾವರಣ: ಸ್ಥಳದಲ್ಲಿ ಗ್ರಾಮಸ್ಥರು ಹಾಗೂ ಕಾಮಗಾರಿ ನಿರ್ವಹಿಸುತ್ತಿದ್ದವರ ನಡುವೆ ತೀವ್ರ ವಾಗ್ವಾದ ನಡೆಯಿತು. ಕಾಮಗಾರಿ ಮೇಲ್ವಿಚಾರಕ ಶಿವಕುಮಾರ್ ಗೂಂಡಾಗಿರಿ ಧೋರಣೆಯಲ್ಲಿ ವರ್ತಿಸುತ್ತಿದ್ದು, ನಾವು ಕೆಲಸ ಮಾಡುತ್ತೇವೆ, ನಮಗೆ ಗ್ರಾಮಸ್ಥರೇ ಮಣ್ಣು ತೆಗೆಯಲು ಹೇಳಿದ್ದಾರೆ ನೀವು ಎಲ್ಲಿಗೆ ಬೇಕಾದರೂ ದೂರು ಕೊಡಿ ಎಂದು ದರ್ಪದಿಂದ ಮಾತನಾಡಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಇನ್ನೊಂದೆಡೆ ಗ್ರಾಮಸ್ಥರೇ ಮಣ್ಣು ತೆಗೆಯಲು ಒಪ್ಪಿಗೆ ಸೂಚಿಸಿ ಸಹಿ ಮಾಡಿದ್ದಾರೆ ಎಂದು ಹೇಳಿ, ಮೊಬೈಲ್‌ನಲ್ಲಿ ಪತ್ರವೊಂದನ್ನು ಶಿವಕುಮಾರ್ ತೋರಿಸಿದ್ದಾನೆ. ಆದರೆ ಇದನ್ನು ಒಪ್ಪದ ಗ್ರಾಮಸ್ಥರು, ಸಹಿ ಮಾಡಿರುವವರನ್ನು ಸ್ಥಳಕ್ಕೆ ಕರೆಸಿ. ಅವರ ಸಮ್ಮುಖದಲ್ಲೇ ಸತ್ಯಾಸತ್ಯತೆ ತಿಳಿದುಕೊಳ್ಳೋಣ ಎಂದು ಪಟ್ಟು ಹಿಡಿದರು. ಇದರಿಂದ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

ಒತ್ತಡಕ್ಕೆ ಮಣಿದ ಕಾಮಗಾರಿ ಸಿಬ್ಬಂದಿ: ಗ್ರಾಮಸ್ಥರ ತೀವ್ರ ವಿರೋಧ, ಅಧಿಕಾರಿಗಳಿಗೆ ಸಲ್ಲಿಸಲಾದ ದೂರು ಹಾಗೂ ಸ್ಥಳದಲ್ಲಿ ನಿರ್ಮಾಣವಾದ ಬಿಗುವಿನ ವಾತಾವರಣ ಹಿನ್ನೆಲೆಯಲ್ಲಿ ಕೊನೆಗೆ ಕೆರೆಯಿಂದ ಮಣ್ಣು ತೆಗೆಯುವ ಕಾಮಗಾರಿ ಸ್ಥಗಿತಗೊಳಿಸಲಾಯಿತು. ಜೆಸಿಬಿ ಯಂತ್ರ ಹಾಗೂ ಇತರ ವಾಹನಗಳು ಸ್ಥಳದಲ್ಲೇ ನಿಲ್ಲಿಸಲ್ಪಟ್ಟವು. ಈ ವೇಳೆ ಅಲ್ಲಿಯೇ ಜಮಾಯಿಸಿದ್ದ ಗ್ರಾಮಸ್ಥರು, ಅಕ್ರಮ ಮಣ್ಣು ಗಣಿಗಾರಿಕೆಯಲ್ಲಿ ಬಳಸಲಾಗಿರುವ ಜೆಸಿಬಿ ಹಾಗೂ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದು ತನಿಖೆ ನಡೆಸಬೇಕು. ಜೊತೆಗೆ ಮಣ್ಣು ಸಾಗಣೆಗೆ ಅನುಮತಿ ನೀಡಿದ್ದರೆ, ಅಂತಹ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಹಾಗಾಗಿ ಘಟನೆ ಕುರಿತಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಯಾವ ಕ್ರಮ ಕೈಗೊಳ್ಳುತ್ತಾರೆ ಹಾಗೂ ಕೆರೆಯಿಂದ ಮಣ್ಣು ತೆಗೆಯುವ ಕಾರ್ಯ ಕಾನೂನು ಬದ್ಧವಾಗಿತ್ತೇ ಅಥವಾ ಅಕ್ರಮವಾಗಿತ್ತೇ ಎಂಬುದು ಸ್ಪಷ್ಟವಾಗಬೇಕಿದೆ.

ಈ ವೇಳೆ ಗ್ರಾಮದ ಮುಖಂಡರಾದ ನಾಗೇಂದ್ರ, ರವಿಕುಮಾರ್, ಕೇಶವ, ಮಹದೇವ, ಲೋಕಿ, ಕಾರ್ತಿಕ್, ಕಿಶೋರ್, ಶೇಖರ್, ಯೋಗಾನಂದ, ರಾಜು, ಮಹದೇವ್ ಸೇರಿದಂತೆ ಮತ್ತಿತರರಿದ್ದರು.

ಜಾನುವಾರು, ಸಾರ್ವಜನಿಕರ ಸುರಕ್ಷತೆಗೆ ಧಕ್ಕೆ

ಯುವ ಮುಖಂಡ ಜೈ ಕುಮಾರ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಗುತ್ತಿಗೆದಾರರು ಯಾವುದೇ ಸ್ಪಷ್ಟ ಕಾನೂನುಬದ್ಧ ಅನುಮತಿ ಇಲ್ಲದೆ ಕೆರೆಯಿಂದ ಮಣ್ಣು ತೆಗೆದು ರಸ್ತೆ ಕಾಮಗಾರಿಗೆ ಬಳಸುತ್ತಿರುವುದು ಗಂಭೀರ ವಿಷಯವಾಗಿದೆ. ಹುಲ್ಲೇಕಟ್ಟೆ ಕೆರೆ ಗ್ರಾಮದಲ್ಲಿನ ಜಾನುವಾರುಗಳ ಪ್ರಮುಖ ನೀರಿನ ಮೂಲವಾಗಿದೆ. ಬೇಸಿಗೆ ಮತ್ತು ಮಳೆಗಾಲದಲ್ಲಿ ಹಸು, ದನ, ಕರುಗಳು ನೀರು ಕುಡಿಯಲು ಈ ಕೆರೆಯನ್ನು ಅವಲಂಬಿಸಿವೆ. ಈಗ ಕೆರೆಯೊಳಗೆ ಭಾರೀ ಪ್ರಮಾಣದಲ್ಲಿ ಮಣ್ಣು ತೆಗೆದಿರುವುದರಿಂದ ಆಳವಾದ ಕಂದಕಗಳು ನಿರ್ಮಾಣವಾಗಿವೆ. ಮಳೆಗಾಲದಲ್ಲಿ ಕೆರೆ ತುಂಬಿದಾಗ ಈ ಗುಂಡಿಗಳು ಕಾಣಿಸುವುದಿಲ್ಲ. ಪರಿಣಾಮ ಜಾನುವಾರುಗಳು ಹಾಗೂ ಸಾರ್ವಜನಿಕರು ನೀರಿನಲ್ಲಿ ಇಳಿದಾಗ ಅಪಾಯಕ್ಕೆ ಸಿಲುಕಿ ಪ್ರಾಣ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಅನುಮತಿ ಇದ್ದರೆ ತೋರಿಸಿ: ಒಂದು ವೇಳೆ ತಹಸೀಲ್ದಾರ್ ಅವರು ಕಾನೂನುಬದ್ಧವಾಗಿ ಮಣ್ಣು ತೆಗೆಯಲು ಅನುಮತಿ ನೀಡಿದ್ದರೆ ಸ್ವತಃ ಸ್ಥಳಕ್ಕೆ ಬಂದು ಗ್ರಾಮಸ್ಥರಿಗೆ ಮಾಹಿತಿ ನೀಡಲಿ. ಅನುಮತಿ ಪತ್ರ ಪ್ರದರ್ಶಿಸಲಿ. ಆಗ ನಾವು ಯಾವುದೇ ರೀತಿಯ ಅಡ್ಡಿಪಡಿಸದೇ ಗೌರವಯುತವಾಗಿ ಸ್ಥಳದಿಂದ ತೆರಳುತ್ತೇವೆ. ಆದರೆ ದಾಖಲೆಗಳಿಲ್ಲದೆ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ



ಸರಗೂರು, ಜೂ.16– ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವಂತೆ ತಾಲೂಕು ಡಿಎಸ್‌ಎಸ್ ಮುಖಂಡ ಲಂಕೆ ಲಕ್ಷ್ಮಣ್ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶಾಸಕ ದರ್ಶನ್ ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸವಿದೆ. ನಂಜನಗೂಡು ಕ್ಷೇತ್ರಕ್ಕೆ ಸಾವಿರ ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿಪಡಿಸಿರುವ ಯುವ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಕಲ್ಪಿಸಬೇಕು ಎಂಬ ಆಗ್ರಹ ಹೆಚ್ಚಾಗಿದೆ. ತಂದೆಯಂತೆ ದರ್ಶನ್ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಅವರಿಗೆ ಸಚಿವ ಸ್ಥಾನ ಸಿಗಲೆಂದು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಹಾಗೂ ಪ್ರಸಿದ್ಧ ಶ್ರೀಚಿಕ್ಕದೇವಮ್ಮನವರ ದೇವಾಲಯ ಮತ್ತು ವಿವಿಧ ದೇವಾಲಯಗಳಲ್ಲಿ ಕಾರ್ಯಕರ್ತರು ವಿಶೇಷ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ದರ್ಶನ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಿದರೆ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ತಂದೆ, ತಾಯಿ ಕಳೆದುಕೊಂಡರೂ ಕಾರ್ಯಕರ್ತರೇ ನನ್ನ ಕುಟುಂಬ ಎಂದು ತಿಳಿದು ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಜಿ.ಮಧುಸೂದನ್ ನಿಧನ



ತಿ.ನರಸೀಪುರ, ಜೂ.16– ಪಟ್ಟಣದ ಟಿಎಪಿಸಿಎಂಎಸ್ ಕಾರ್ಯದರ್ಶಿ ಜಿ.ರಘುನಂದನ್ ಸಹೋದರ ಜಿ.ಮಧುಸೂದನ್ (48) ಮಂಗಳವಾರ ಸಂಜೆ ನಿಧನರಾದರು. ಮೃತರು ತಾಯಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 9 ಗಂಟೆಗೆ ಪಟ್ಟಣದ ತ್ರಿವೇಣಿ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ 1300 ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ

ಹಣ ಪಾವತಿಸಿ ಪಡೆದಿದ್ದವರಿಗೆ ಮರು ಪಾವತಿ

ಮೈಸೂರು,ಜೂ.16(ಎಂಟಿವೈ)– ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವುದಾಗಿ ಸಿಎಂ ಡಿ.ಕೆ.ಶಿವಕುಮಾರ್ ಘೋಷಿಸಿದ ಬೆನ್ನಲ್ಲೇ ಮೈಸೂರು ನಗರದಲ್ಲಿ 1300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲಾಗಿದ್ದು, ಹಣ ಪಾವತಿಸಿ ಪಾಸ್ ಪಡೆದಿದ್ದ ವಿದ್ಯಾರ್ಥಿಗಳಿಗೆ ಹಣ ಹಿಂದಿರುಗಿಸಲು ಸಾರಿಗೆ ಸಂಸ್ಥೆ ಕ್ರಮ ಕೈಗೊಂಡಿದೆ.

ರಾಜ್ಯದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಜೂ.3ರಂದು ಅಧಿಕಾರ ಸ್ವೀಕರಿಸಿದ ಬಳಿಕ ರಾಜ್ಯದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಸಲು ಉಚಿತವಾಗಿ ಬಸ್‌ಪಾಸ್ ವಿತರಿಸುವ ಯೋಜನೆಯನ್ನು ಜಾರಿಗೊಳಿಸುತ್ತಿರುವುದಾಗಿ ಘೋಷಿಸಿದ್ದರು. ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ಜೂ.1ರಿಂದಲೇ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಿಸಲು ಸಾರಿಗೆ ಸಂಸ್ಥೆ ಕ್ರಮ ಕೈಗೊಂಡಿತ್ತು.



ಸಾಂಧರ್ಬಿಕ ಚಿತ್ರ

ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪ್ರಥಮ ಪಿಯುಸಿ, ದ್ವಿತೀಯ ಮತ್ತು ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಹಣ ಪಾವತಿಸಿ ಬಸ್‌ಪಾಸ್ ಪಡೆಯಲು ಮುಂದಾಗಿದ್ದರು. ಸರ್ಕಾರ ಉಚಿತ ಪಾಸ್ ಘೋಷಿಸುವ ಮುನ್ನವೇ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಿಗಧಿತ ಶುಲ್ಕ ಪಾವತಿಸಿ ಪಾಸ್ ಪಡೆದಿದ್ದಾರೆ. ಜೂ.4ರ ನಂತರ ವಿದ್ಯಾರ್ಥಿಗಳು ಹಣ ಪಾವತಿ ನಿಲ್ಲಿಸಿದ್ದರು.

> ಸರ್ಕಾರದ ಆದೇಶದ ಮೇರೆಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವ ಕಾರ್ಯ ಆರಂಭಿಸಲಾಗಿದೆ. ಈಗಾಗಲೇ 1300ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ವಿತರಿಸಲಾಗಿದೆ. ಈ ಹಿಂದೆ ಶುಲ್ಕ ಪಾವತಿಸಿ ಪಾಸ್ ಪಡೆದಿದ್ದ ವಿದ್ಯಾರ್ಥಿಗಳಿಗೆ ಹಣ ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುವುದು. ಒಟ್ಟು 12 ಕೌಂಟರ್‌ಗಳಲ್ಲಿ ಉಚಿತ ಬಸ್ ಪಾಸ್ ವಿತರಿಸಲಾಗುತ್ತಿದೆ.
> - ಜಗದೀಶ್ ಕುಮಾರ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಜೂ.8ರಿಂದ ಉಚಿತ ಬಸ್‌ಪಾಸ್‌ಗೆ ಅರ್ಜಿ ನಮೂನೆ ಬಿಡುಗಡೆ ಮಾಡಲಾಗಿತ್ತು. ಇದುವರೆಗೂ ಸಾರಿಗೆ ಸಂಸ್ಥೆಗೆ ಶಾಲಾ-ಕಾಲೇಜಿನ ಮುಖ್ಯಸ್ಥರು ದೃಢೀಕರಿಸಿದ ಅರ್ಜಿ ನಮೂನೆಯನ್ನು ಸಲ್ಲಿಸಿದ 1300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಚಿತ ಬಸ್‌ಪಾಸ್ ಪಡೆದಿದ್ದಾರೆ. ಈ ಹಿಂದೆ ನಿಗಧಿತ ಶುಲ್ಕ ಪಾವತಿಸಿ, ಬಸ್‌ಪಾಸ್ ಪಡೆದಿದ್ದ ವಿದ್ಯಾರ್ಥಿಗಳಿಗೆ ಹಣ ಹಿಂದಿರುಗಿಸಲು ಸಾರಿಗೆ ಸಂಸ್ಥೆ ನಿರ್ಧರಿಸಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿದೆ.

12 ಕೌಂಟರ್‌ನಲ್ಲಿ ಬಸ್ ಪಾಸ್ ವಿತರಣೆ: ಮೈಸೂರು ಜಿಲ್ಲೆಯಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಿಸಲು ಜಿಲ್ಲೆಯಾದ್ಯಂತ 12 ಕೌಂಟರ್ ತೆರೆಯಲಾಗಿದೆ. ಮೈಸೂರು ನಗರ ಬಸ್‌ನಿಲ್ದಾಣ, ಸಿದ್ಧಾರ್ಥ ಬಡಾವಣೆ, ರಾಮಕೃಷ್ಣನಗರ, ಗೋಕುಲಂ, ನಜ಼ರ್‌ಬಾದ್(ಇಡಿಸಿಎಸ್), ನಂಜನಗೂಡು, ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ವಿತರಿಸಲು ಕೌಂಟರ್ ತೆರೆಯಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಪೆಟ್ರೋಲ್ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಬೆಲೆ ಏರಿಕೆ ಖಂಡಿಸಿ ಕ್ರಾಂತಿಕಾರಿ ಯುವಜನ ಸಂಘಟನೆ(ಆರ್‌ವೈಎ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.16(ಎಂಕೆ)– ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕ್ರಾಂತಿಕಾರಿ ಯುವಜನ ಸಂಘಟನೆ(ಆರ್‌ವೈಎ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೂಡಲೇ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು ಎಂದು ಆಗ್ರಹಿಸಿದರು. ಕೇಂದ್ರ ಸರ್ಕಾರ ಅಡುಗೆ ಅನಿಲದ ಬೆಲೆ ಹೆಚ್ಚಳ ಮಾಡಿರುವುದಲ್ಲದೆ ಉಜ್ವಲ ಯೋಜನೆಯ ಸಬ್ಸಿಡಿಯನ್ನು ಕಡಿತಗೊಳಿಸಿ ಬಡ ಜನರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಕಿಡಿಕಾರಿದರು.

ಲೀಟರ್ ಪೆಟ್ರೋಲ್ ಬೆಲೆ 110 ರೂ. ದಾಟಿದ್ದು, ಗೃಹ ಬಳಕೆ ಸಿಲಿಂಡರ್ ಸಾವಿರ ರೂ.ಸನಿಹದಲ್ಲಿದೆ. ಇರಾನ್-ಅಮೆರಿಕಾ ಮತ್ತು ಇಸ್ರೇಲ್ ನಡುವಿನ ಯುದ್ಧ ನಿಲ್ಲಿಸಿ ಶಾಂತಿ ಸ್ಥಾಪನೆಯಲ್ಲೂ ವಿಫಲವಾಗಿರುವ ಕೇಂದ್ರ ಸರ್ಕಾರ, ದೇಶದ ನಾಗರಿಕರ ಹಿತ ರಕ್ಷಣೆಯನ್ನು ಮರೆತಿದೆ. ಮುಂದಾದರೂ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡುವ ಪ್ರಯತ್ನ ನಡೆಸಬೇಕು. ಇಲ್ಲವಾದಲ್ಲಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಆರ್‌ವೈಎ ರಾಜ್ಯ ಸಮಿತಿ ಸದಸ್ಯ ರವಿಕುಮಾರ್, ವಿನೋದ್‌ಕುಮಾರ್, ರಾಜ್, ಹರ್ಷಕುಮಾರ್, ಪುಟ್ಟಮಾದು, ಶಿವಣ್ಣ, ಚಂದಾವರ, ಚೌಡಹಳ್ಳಿ ಜವರಯ್ಯ ಮತ್ತಿತರರಿದ್ದರು.

ಆದಿವಾಸಿ ಕೂಲಿ ಕಾರ್ಮಿಕರಿಗೆ ಪೌಷ್ಟಿಕ ಆಹಾರ ಸಾಮಗ್ರಿ ಕಿಟ್ ವಿತರಣೆ ವಿಳಂಬ ಖಂಡಿಸಿ ಹೋರಾಟ

ಮೈಸೂರು, ಜೂ.16(ಎಂಕೆ)– ಜಿಲ್ಲೆಯ ವಿವಿಧ ತಾಲೂಕುಗಳಲ್ಲಿರುವ ಹಾಡಿಗಳಲ್ಲಿ ವಾಸಿಸುವ ಆದಿವಾಸಿ ಕೂಲಿ ಕಾರ್ಮಿಕ ಜನರಿಗೆ ಪೌಷ್ಟಿಕ ಆಹಾರ ಸಾಮಗ್ರಿ ಕಿಟ್ ವಿತರಣೆಯಲ್ಲಾಗುತ್ತಿರುವ ವಿಳಂಬ ಖಂಡಿಸಿ ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ (ಎಐಜೆಎಎಸ್‌ಸಿ) ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.


ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ(ಎಐಜೆಎಎಸ್‌ಸಿ) ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಮಾವಣೆಗೊಂಡ ಆದಿವಾಸಿ ಸಮುದಾಯದ ನೂರಾರು ಮಂದಿ, ಜಿಲ್ಲೆಯ ಹೆಚ್.ಡಿ.ಕೋಟೆ, ಸರಗೂರು, ನಂಜನಗೂಡು, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯಲ್ಲಿನ ಹಾಡಿಗಳಲ್ಲಿ ವಾಸಿಸುವ ಆದಿವಾಸಿ ಜನರಿಗೆ ಕಳೆದ ಮೂರು ತಿಂಗಳಿಂದ ಗಿರಿಜನ ಸಮಗ್ರ ಅಭಿವೃದ್ಧಿ ಯೋಜನೆ(ಐಟಿಡಿಪಿ)ಯಡಿ ಆಹಾರ ಸಾಮಗ್ರಿಗಳ ಕಿಟ್ ನೀಡಿಲ್ಲ ಎಂದು ದೂರಿದರು.

ಆದಿವಾಸಿ ಜನರಲ್ಲಿನ ಅಪೌಷ್ಟಿಕತೆ ನಿವಾರಣೆಗೆ ಜಾರಿಗೊಳಿಸಿದ ಐಟಿಡಿಪಿ ಯೋಜನೆಯಡಿ ಪ್ರತಿ ತಿಂಗಳು ಆಹಾರ ಸಾಮಗ್ರಿಗಳ ಕಿಟ್ ನೀಡಬೇಕು. ಆದರೆ, ಕಳೆದ ಮೂರು ತಿಂಗಳು ಮತ್ತು ಹಿಂದಿನ ಎರಡು ತಿಂಗಳ ಬಾಕಿ ಸೇರಿ ಒಟ್ಟು ಐದು ತಿಂಗಳ ಆಹಾರ ಸಾಮಗ್ರಿ ಕಿಟ್ ನೀಡಿಲ್ಲ. ಇದರಿಂದ ಆಹಾರ ಪದಾರ್ಥಗಳಿಲ್ಲದೆ ಆದಿವಾಸಿ ಜನರು ಪರಿತಪಿಸುವಂತಾಗಿದೆ ಎಂದು ಅಳಲು ತೋಡಿಕೊಂಡರು.

ಟೆಂಡರ್ ಹಾಗೂ ಇನ್ನಿತರೆ ಕಾರಣಗಳನ್ನು ನೀಡಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ದಿನ ದೂಡುತ್ತಿದ್ದಾರೆಯೇ ಹೊರತು ಆದಿವಾಸಿಗಳ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಸರ್ಕಾರ ಈ ಕೂಡಲೇ ಎಚ್ಚೆತ್ತು 8 ಕೆಜಿ ಅಕ್ಕಿ ಸಹಿತ ನೀಡುವ ಆಹಾರ ಸಾಮಗ್ರಿ ಕಿಟ್‌ನಲ್ಲಿ ರಾಗಿಯನ್ನೂ ನೀಡಬೇಕು. ಹಾಡಿಗಳಲ್ಲಿ ಮೂಲ ಸೌಕರ್ಯ ಒದಗಿಸುವ ಜೊತೆಗೆ ಪೌಷ್ಟಿಕ ಆಹಾರ ಸಾಮಗ್ರಿ ಕಿಟ್‌ಗಳ ಗುಣಮಟ್ಟವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ ಜಿಲ್ಲಾ ಸಂಚಾಲಕ ಸುನಿಲ್, ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಎಐಎಂಎಸ್‌ಎಸ್ ಸಂಘಟನೆಯ ಸೀಮಾ ಆಸಿಯಾ ಬೇಗಂ, ಪುಷ್ಪಾ, ಕಾರ್ಮಿಕ ಮುಖಂಡರಾದ ಎಂ.ಉಮಾದೇವಿ, ಶಿವಾನಂದ, ರೈತ ಮುಖಂಡ ಬಸವರಾಜ್, ಹಾಡಿ ನಿವಾಸಿಗಳಾದ ಹರಳಹಳ್ಳಿ ಹಾಡಿಯ ಮಾದಮ್ಮ, ನಡಾಡಿ ಹಾಡಿಯ ಮಾದಮ್ಮ, ಚಿಕ್ಕೆರೆಯೂರು ಹಾಡಿಯ ಕುಮಾರಿ, ನಿಂಗಮ್ಮ, ಬಾವಲಿಹಾಡಿ ಮೀನಾಕ್ಷಿ, ನೆಮ್ಮನಹಳ್ಳಿ ಹಾಡಿ ಪ್ರಕಾಶ್, ಚಂದ್ರಕಲಾ, ಬಾವಿಕೆರೆ ಹಾಡಿಯ ರಮೇಶ್ ಮತ್ತಿತರರಿದ್ದರು.

ಮೈಸೂರು ಬೇಸಿಗೆ ರೇಸ್

4ನೇ ದಿನ, ಬುಧವಾರ, 17–6–2026

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಕಾಗಿನೆಲೆ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಕೂಲ್ ವಿಂಟರ್ 2. ಸಿಟಿ ಆಫ್ ಹಸ್ಲ್

II. ಸೋಮವಾರಪೇಟೆ ಪ್ಲೇಟ್ ಡಿII–1100 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಎಲ್ ಸಾ 2. ಅಮೇಜಿಂಗ್ ಸುಲ್ತಾನ್

III. ತಕ್ಷಶಿಲಾ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಟೈಗರ್ ಕಿಂಗ್ 2. ಡಿ ರೋಮನ್ ಪವರ್

IV. ಸೋಮವಾರಪೇಟೆ ಪ್ಲೇಟ್ ಡಿI–1100 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಸ್ಕೌಟ್ 2. ಸ್ಪಾರ್ಕ್‌ಲಿಂಗ್ ನೈಟ್

V. ಲಾಯಲ್ ಪ್ರಿನ್ಸ್ ಪ್ಲೇಟ್ ಡಿII–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಮಲೆಟ್ ಸ್ಟ್ರಿಂಗ್ 2. ಡಫಿ

VI. ಡಾ. ಎನ್.ಎಂ. ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ 1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಮಾಂಟೆರಿಯೊ 2. ಹಿರೋಯಿಸಮ್

VII. ಲಾಯಲ್ ಪ್ರಿನ್ಸ್ ಪ್ಲೇಟ್ ಡಿI–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸಿಯಲ್ ಫಾರ್ ಬುಲೆಟ್ 2. ಶೆರ್ಫಾ

VIII. ಸಟ್ಲೆಜ್ ಪ್ಲೇಟ್ 1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸಿಕಿಂಗ್ ಆಲ್ಫ್ 2. ರಾಯಲ್ ಬಾರ್ನ್

ದಿನದ ಅತ್ಯುತ್ತಮ	ಮಾಂಟೆರಿಯೊ
ಡಬ್ಬಲ್	ಎಲ್ ಸಾ, ಸಿಕಿಂಗ್ ಆಲ್ಫ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಸರ್ಕಾರಿ ಅನುದಾನದ ಕಟ್ಟಡ ಏಕಾಏಕಿ ನೆಲಸಮ: ಪಿಡಿಓ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಜೂ.16(ಜಿಎ)–ಇಲವಾಲ ಹೋಬಳಿ ಗುಂಗ್ರಾಲ್ ಛತ್ರ ಗ್ರಾಪಂಗೆ ಸೇರಿದ ಯಾವೇನಹಳ್ಳಿಯಲ್ಲಿ ಸುಮಾರು 35 ವರ್ಷದ ಹಿಂದೆ ಸರ್ಕಾರದ ಅನುದಾನದಲ್ಲಿ ಪಂಚಾಯಿತಿ ಮನೆ ಹೆಸರಿನಲ್ಲಿ ನಿರ್ಮಿಸಿದ್ದ ಕಟ್ಟಡವನ್ನು ಜೆಸಿಬಿ ಸಹಾಯದಿಂದ ಕೆಡವಿದ್ದು, ಗ್ರಾಪಂ ಪಿಡಿಓ ಕರ್ತವ್ಯ ಲೋಪವೇ ಇದಕ್ಕೆ ಕಾರಣವಾಗಿದೆ ಎಂದು ಗ್ರಾಮದ ಆರ್‌ಟಿಐ ಕಾರ್ಯಕರ್ತ ರವಿಕುಮಾರ್ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸರ್ಕಾರಿ ಕಟ್ಟಡದ ಜಾಗ ಕಬಳಿಸಲು ಗ್ರಾಮದ ಕೆಲ ಪ್ರಭಾವಿ ವ್ಯಕ್ತಿಗಳು ಹುನ್ನಾರ ಮಾಡಿದ್ದು, ಈ ಕುರಿತು ಪಿಡಿಓ ಗಮನ ಸೆಳೆಯುವ ಕೆಲಸವನ್ನು ಗ್ರಾಮಸ್ಥರು ಈ ಹಿಂದೆ ಮಾಡಿದ್ದರು. ಆದರೂ ಅವರು ಕ್ರಮ ವಹಿಸದ ಕಾರಣ ಕಟ್ಟಡ ನೆಲಸಮಗೊಳಿಸಲಾಗಿದೆ. ಇದರಿಂದಾಗಿ ಸರ್ಕಾರಕ್ಕೆ ಸುಮಾರು 30 ಲಕ್ಷ ರೂ.ಗಳಷ್ಟು ನಷ್ಟ ಸಂಭವಿಸಿದೆ ಎಂದರು.

ಈ ಕುರಿತು ಪಿಡಿಓ ವಿರುದ್ಧ ಜಿಪಂ ಸಿಇಓಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಮತ್ತೆ ಸಿಇಓಗೆ ದೂರು ನೀಡುತ್ತಿದ್ದು, ಎಫ್‌ಐಆರ್ ದಾಖಲಿಸಬೇಕೆಂದು ಕೋರುತ್ತಿದ್ದೇವೆ. 7 ದಿನಗಳೊಳಗೆ ಕ್ರಮ ಕೈಗೊಳ್ಳದಿದ್ದರೆ ಸಾರ್ವಜನಿಕರ ಸಹಕಾರದೊಂದಿಗೆ ಜಿಪಂ ಕಚೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿ, ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹೇಶ್, ಪುಟ್ಟಸ್ವಾಮಿ, ದಿಲೀಪ್ ಉಪಸ್ಥಿತರಿದ್ದರು.

ಸಚಿವ ಮುನಿಯಪ್ಪರಿಗೆ ಹಿರಿತನ ಆಧರಿಸಿ ಪ್ರಮುಖ ಖಾತೆ ಕಲ್ಪಿಸಲು ಹಿರಿಯ ವಕೀಲ ಅರುಣ್ ಕುಮಾರ್ ಆಗ್ರಹ

ಮೈಸೂರು, ಜೂ.16(ಜಿಎ)–ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಕೆ.ಹೆಚ್.ಮುನಿಯಪ್ಪ ಅವರಿಗೆ ಪ್ರಮುಖ ಖಾತೆ ನೀಡದೇ ಹಿರಿತನ ಕಡೆಗಣಿಸಲಾಗಿದೆ. ಹಾಗಾಗಿ ವಿಸ್ತರಣೆ ವೇಳೆ ಮಾದಿಗ ಸಮುದಾಯಕ್ಕೆ ಮತ್ತೆ ಅನ್ಯಾಯ ಮಾಡಿದರೆ ರಾಜ್ಯಾದ್ಯಂತ ಬೀದಿಗಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಅರುಣ್‌ಕುಮಾರ್ ಎಚ್ಚರಿಕೆ ನೀಡಿದರು.


ಅರುಣ್‌ಕುಮಾರ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಮೊದಲಿನಿಂದಲೂ ಮಾದಿಗರಿಗೆ ದ್ರೋಹವೆಸಗುತ್ತಿದೆ. ಹಿರಿಯರಾಗಿದ್ದರೂ ಪ್ರಿಯಾಂಕ್ ಖರ್ಗೆ, ಡಾ.ಜಿ. ಪರಮೇಶ್ವರ್ ಅವರಿಗಿಂತ ಕಡಿಮೆ ಪ್ರಾಮುಖ್ಯತೆಯ ಖಾತೆಯನ್ನು ಕೆ.ಹೆಚ್.ಮುನಿಯಪ್ಪ ಅವರಿಗೆ ನೀಡಲಾಗಿದೆ. ಇದನ್ನು ಪ್ರಶ್ನಿಸಿದರೇ ತಮ್ಮನ್ನು ಕಾಂಗ್ರೆಸ್ ವಿರೋಧಿ ಎಂದು ಟೀಕಿಸುತ್ತಾರೆ ಎಂದು ಕಿಡಿಕಾರಿದರು.

ಈ ಹಿಂದೆ ರಾಹುಲ್ ಗಾಂಧಿ ಮಾತನಾಡುವಾಗ, ಒಳ ಮೀಸಲಾತಿಯನ್ನು ನ್ಯಾಯಯುತವಾಗಿ ಜಾರಿಗೊಳಿಸಲು ಸಾಧ್ಯವಾಗದಿದ್ದರೆ ಅಧಿಕಾರದಿಂದ ಕೆಳಗಿಳಿಯಿರಿ, ಆ ಕೆಲಸ ನಾವು ಮಾಡುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲೆಸೆದಿದ್ದರು. ಈಗ ಇವರು ಮಾಡುತ್ತಿರುವುದು ಏನು? ಅಂದರೆ ಇವರು ಢೋಂಗಿಗಳೇನು ಎಂದು ಪ್ರಶ್ನಿಸಿದರು.

ಇವರೆಲ್ಲ ಅಂಬೇಡ್ಕರ್ ಫೋಟೋವನ್ನು ಕೇವಲ ಇತರರನ್ನು ಹೆದರಿಸಲು ಮಾತ್ರವೇ ಬಳಸಿಕೊಳ್ಳುತ್ತಿದ್ದಾರೆ. ಒಳ ಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್ ನೀಡಿದ ಆದೇಶ ಕುಟ್ಟಿನಿಟ್ಟಾಗಿ ಪಾಲಿಸುತ್ತಿಲ್ಲ. ಹೀಗಾಗಿ ಮಾದಿಗ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಸಚಿವ ಸಂಪುಟ ವಿಸ್ತರಣೆ ವೇಳೆ 5.25, 5.25 ಹಾಗೂ 4.20 ಸೂತ್ರ ಪಾಲಿಸಬೇಕು. ಇಲ್ಲದಿದ್ದರೆ ಸಮುದಾಯ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಮತ್ತೊಮ್ಮೆ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಳಪ್ಪ ಕುರ್ಕಿ, ಸುರೇಂದ್ರ ಕುಮಾರ್, ಮೋಹನ್, ನಾಗಮ್ಮ, ಸಿದ್ದಯ್ಯ, ದಾಸಯ್ಯ ಉಪಸ್ಥಿತರಿದ್ದರು.

ಜೂ.20ರಂದು ರಸಪ್ರಶ್ನೆ, ಚಿತ್ರ ಬರೆಯುವ ಸ್ಪರ್ಧೆ

ಮೈಸೂರು, ಜೂ.16–ಅಂತರರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ವಿವೇಕಾನಂದ ಕೇಂದ್ರ ಕನ್ಯಾಕುಮಾರಿ ಶಾಖೆ ಮೈಸೂರಿನಲ್ಲಿ ಯೋಗಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆ ಮತ್ತು ಅಂತರರಾಷ್ಟ್ರೀಯ ಯೋಗ ದಿನದ ಲೋಗೋ ಚಿತ್ರ ಬರೆಯುವ ಸ್ಪರ್ಧೆಯನ್ನು ಜಯನಗರದ ವಿವೇಕಾನಂದ ಕೇಂದ್ರದಲ್ಲಿ ಜೂ.20ರಂದು ಸಂಜೆ 4 ಗಂಟೆಗೆ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449488228 ಸಂಪರ್ಕಿಸಬಹುದು.



ಮೈಸೂರು–ಚಾಮರಾಜನಗರ ಮಾರ್ಗದ ರೈಲ್ವೆ ಹಳಿ ಆಜುಬಾಜಿನ ಮರಗಳ ಹನನ ಆರೋಪ; ಪರಿಸರವಾದಿಗಳ ಆಕ್ಷೇಪ

ಅರಣ್ಯ ಅಧಿಕಾರಿಗಳಿಂದ ಪರಿಶೀಲನೆ ಬಳಿಕ ಕ್ರಮದ ಭರವಸೆ



ರೈಲ್ವೆ ಹಳಿಯ ಆಜುಬಾಜಿನಲ್ಲಿರುವ ಮರ ಕಡಿದಿರುವುದು.

ಮೈಸೂರು, ಜೂ.16(ವಿವಿಹೆಚ್)– ರೈಲ್ವೆ ಹಳಿಯ ಮಾರ್ಗಕ್ಕೆ ಅಡಚಣೆ ಉಂಟು ಮಾಡುತ್ತಿದ್ದ 30ಕ್ಕೂ ಹೆಚ್ಚು ಮರಗಳನ್ನು ರೈಲ್ವೆ ಇಲಾಖೆ ಕಡಿದಿದ್ದು, ಇದಕ್ಕೆ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕುಕ್ಕರಹಳ್ಳಿ ಕೆರೆಯ ಸಮೀಪದ ಮೈಸೂರು–ಚಾಮರಾಜ ನಗರ ರೈಲ್ವೆ ಹಳಿಯ ಮಾರ್ಗದ ಬದಿಯಲ್ಲಿ ಬೆಳೆದಿದ್ದ ಮರಗಳನ್ನು ರೈಲ್ವೆ ಇಲಾಖೆ, ರೈಲ್ವೆ ಹಳಿಗೆ ಹಾಗೂ ವಿದ್ಯುತ್ ತಂತಿ (ಹೈ-ಟೆನ್ಷನ್ ವೈರ್)ಗೆ ಅಡಚಣೆ ಉಂಟು ಮಾಡುತ್ತಿದ್ದ ಮರಗಳ ಹಲವು ಕೊಂಬೆಗಳನ್ನು ಹಾಗೂ ಕೆಲವು ಮರಗಳ ಪೂರ್ಣ ಕಡಿದಿದ್ದಾರೆ.

ರೈಲ್ವೆ ಹಳಿ ಬದಿಗಳಲ್ಲಿ ಮರಗಳ ಹನನವನ್ನು ಗಮನಿಸಿದ ಪರಿಸರವಾದಿಗಳು ಇಲಾಖೆಯ ಕ್ರಮವನ್ನು ಖಂಡಿಸಿದ್ದಾರೆ. ರೈಲ್ವೆ ವಿದ್ಯುತ್ ಮಾರ್ಗಕ್ಕೆ ತಾಕುತ್ತಿದ್ದ ರೆಂಬೆಗಳನ್ನಷ್ಟೆ ತೆರವುಗೊಳಿಸಬೇಕಿತ್ತು. ಆದರೆ ಮರಗಳನ್ನು ಕಡಿದಿರುವುದು ಖಂಡನಾರ್ಹ.

ಅಲ್ಲದೇ ಮೈಸೂರು–ಚಾಮರಾಜನಗರ ಮಾರ್ಗದ ಹಳಿ ಬದಿಯಲ್ಲಿ ಬೆಳೆದಿರುವ ಮತ್ತಷ್ಟು ಮರಗಳನ್ನು ಕಡಿಯಲು ಇಲಾಖೆ ಗುರುತಿಸಿದ್ದು, ಕೂಡಲೇ ಮರಗಳ ರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ಅಭಿವೃದ್ಧಿಯ ಹೆಸರಿನಲ್ಲಿ ಈಗಾಗಲೇ ನೂರಾರು ಮರಗಳ ಕಡಿಯಲು ಗುರುತಿಸಲಾಗಿದ್ದು, ಇದರಿಂದಾಗಿ ಮುಂಬರುವ ದಿನಗಳಲ್ಲಿ ಮೈಸೂರು ಹವಾಮಾನ ವೈಪರಿತ್ಯದಿಂದಾಗಿ ಜನರ ಜೀವನ ತತ್ತರಿಸುವಂತಾಗಲಿದೆ. ಇದನ್ನು ಮನಗಂಡು ಅರಣ್ಯ ಇಲಾಖೆ ಉಳಿದಿರುವ ಮರಗಳ ರಕ್ಷಣೆಗೆ ಮುಂದಾಗಬೇಕು. ಅಲ್ಲದೇ ರೈಲ್ವೆ ಇಲಾಖೆಯು ಅನಗತ್ಯವಾಗಿ ಮರಗಳ ತೆರವಿಗೆ ಮುಂದಾಗಬಾರದು ಎಂದು ಪರಿಸರವಾದಿಗಳು ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮೈಸೂರು ಸೌತ್ ಬೀಟ್ ಅರಣ್ಯಾಧಿಕಾರಿ ಸಂತೋಷ್, ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ರೈಲ್ವೇ ಇಲಾಖೆಗೆ ಮರದ ಕೊಂಬೆ ನಿರ್ವಹಣೆಗೆ ಅವಕಾಶವಿದೆ. ಆದರೆ ಮರಗಳನ್ನು ಕತ್ತರಿಸಲು ಅವಕಾಶವಿಲ್ಲ. ಈ ಬಗ್ಗೆ ವಿಚಾರಿಸಿ ಕ್ರಮಕೈಗೊಳ್ಳಲಾಗುವುದು. ನಾಳೆ (ಜೂ.17) ಎಲ್ಲಾ ದಾಖಲಾತಿಗಳ ಸಮೇತ ಕಚೇರಿಗೆ ಬಂದು ಸ್ಪಷ್ಟನೆ ನೀಡುವಂತೆ ಸೂಚಿಸಲಾಗಿದೆ. ತನಿಖೆ ವೇಳೆ ಅರಣ್ಯ ಇಲಾಖೆಯ ಅನುಮತಿಯಿಲ್ಲದೆ ಅನಧಿಕೃತ ವಾಗಿ ಮರಗಳನ್ನು ಕತ್ತರಿಸಿದಲ್ಲಿ ಕಾನೂನು ಕ್ರಮಕ್ಕೆ ಸೂಚಿಸಲಾಗುವುದು ಎಂದು ತಿಳಿಸಿದರು.

ಇತ್ತ ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದು, ಹಳಿಗಳಿಗೆ ಅಪಾಯ ಉಂಟುಮಾಡುವ ಮರಗಳನ್ನು ಮಾತ್ರ ತೆರವುಗೊಳಿಸಲಾಗುತ್ತಿದೆ. ಭಾರೀ ಮಳೆಯ ಸಂದರ್ಭದಲ್ಲಿ ಮರಗಳು ರೈಲು ಹಳಿಗಳ ಮೇಲೆ ಬೀಳುವ ಸಂಭವ ಹೆಚ್ಚಿರುತ್ತದೆ. ಈ ಹಿನ್ನೆಲೆಯಲ್ಲಿ ಸುರಕ್ಷತಾ ಕ್ರಮವಾಗಿ ಮರಗಳ ಗುರುತು ಮಾಡಿ ತೆರವು ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

> **ಎಫ್‌ಐಆರ್ ದಾಖಲಿಸಲು ಸೂಚಿಸಿದ್ದೇನೆ: ಡಿಸಿಎಫ್**
> ಕುಕ್ಕರಹಳ್ಳಿ ಕೆರೆ ಸಮೀಪದ ರೈಲ್ವೆ ಹಳಿಯ ಅಕ್ಕಪಕ್ಕದ ಮರಗಳ ಹನನ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ತನಿಖೆಗಾಗಿ ಸಿಬ್ಬಂದಿಗಳನ್ನು ಕಳುಹಿಸಲಾಗಿದ್ದು, ಪರಿಶೀಲಿಸುವಂತೆ ಸೂಚಿಸಲಾಗಿದೆ. ಅಲ್ಲದೇ ಅರಣ್ಯ ಇಲಾಖೆಯ ಅನುಮತಿ ಪಡೆಯದೇ ಮರ ಕಡಿದಿರುವುದು ಕಂಡುಬಂದಲ್ಲಿ, ರೈಲ್ವೆ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚಿಸಿದ್ದೇನೆ.
> –ಕೆ.ಪರಮೇಶ್ವರ್, ಡಿಸಿಎಫ್, ಮೈಸೂರು ಪ್ರಾದೇಶಿಕ ವಿಭಾಗ.

ಮಾರಾ ಪಬ್ ಬಾರ್ ಅಗ್ನಿ ಅನಾಹುತ ಪ್ರಕರಣ

ಮೃತ ಸಿಬ್ಬಂದಿ ಸಾಹಿನ್ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಹಸ್ತಾಂತರ

- ಮತ್ತೋರ್ವ ಸಿಬ್ಬಂದಿ ಪ್ರಕಾಶ್ ಪಾರ್ಥಿವ ಶರೀರ ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಸಂರಕ್ಷಣೆ
- ಸಾಹಿನ್ ಕುಟುಂಬ, ಗಾಯಾಳು ಅವಿನಾಶ್ ಬಂದುಗಳಿಗೆ ಸಚಿವ ಯತೀಂದ್ರ ಸಾಂತ್ವನ


ಕೆ.ಆರ್.ಆಸ್ಪತ್ರೆಯ ಶವಾಗಾರದ ಆವರಣದಲ್ಲಿ ಸಾಹಿನ್ ಅವರ ಕುಟುಂಬಸ್ಥರನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಭೇಟಿ ಮಾಡಿ ಸಾಂತ್ವನ ಹೇಳಿದರು.

ಮೈಸೂರು, ಜೂ.16(ಜಿಎ)–ಮೈಸೂರಿನ ದಟ್ಟಗಳ್ಳಿಯ ರೆಸ್ಟೋ ಪಬ್‌ನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಮೃತಪಟ್ಟ ಇಬ್ಬರಲ್ಲಿ ಒಬ್ಬರಾದ ಸಾಹಿನ್ ಅವರ ಕುಟುಂಬಸ್ಥರನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಕೆ.ಆರ್.ಆಸ್ಪತ್ರೆಯ ಶವಾಗಾರದ ಬಳಿ ಭೇಟಿ ಮಾಡಿ ಸಾಂತ್ವನ ಹೇಳಿದರು.

ನಿನ್ನೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಿದ್ದ ಸಾಹಿನ್ ಅವರ ಅಕ್ಕ ಅನಾಮಿಕಾ, ಸಹೋದರ ಸೋನಂ ರಾಯ್ ಹಾಗೂ ಪತ್ನಿ ಸೇರಿದಂತೆ ಕುಟುಂಬ ಸದಸ್ಯರು ಮರಣೋತ್ತರ ಪರೀಕ್ಷೆಯ ಬಳಿಕ ದೇಹವನ್ನು ಸ್ವೀಕರಿಸಲು ಶವಾಗಾರದಲ್ಲಿ ಕಾಯುತ್ತಿದ್ದರು. ಈ ವೇಳೆ ಸಚಿವರು ಅವರಿಗೆ ಧೈರ್ಯ ತುಂಬಿದರು.

ಕುಟುಂಬ ಸದಸ್ಯರ ಮಾಹಿತಿ ಪ್ರಕಾರ, ಸಾಹಿನ್ ಕಳೆದ ಏಳು ತಿಂಗಳಿಂದ ಈ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮರಣೋತ್ತರ ಪರೀಕ್ಷೆ ನಂತರ ಆಂಬುಲೆನ್ಸ್ ಮೂಲಕ ದೇಹವನ್ನು ಬೆಂಗಳೂರಿಗೆ ಕೊಂಡೊಯ್ಯಲಾಗುತ್ತಿದ್ದು, ಬಳಿಕ ಅಲ್ಲಿನ ವಿಮಾನ ನಿಲ್ದಾಣದ ಶೀತಲೀಕರಣ ವ್ಯವಸ್ಥೆಯಲ್ಲಿರಿಸಲಾಗುತ್ತದೆ. ನಾಳೆ ಬೆಳಿಗ್ಗೆ ವಿಮಾನದಲ್ಲಿ ಪಶ್ಚಿಮ ಬಂಗಾಳದ ಬಾಗ್ಡೋಗ್ರಾ ವಿಮಾನ ನಿಲ್ದಾಣಕ್ಕೆ ದೇಹವನ್ನು ಸಾಗಿಸಲಾಗುವುದು. ಅಲ್ಲಿಂದ ರಸ್ತೆ ಮಾರ್ಗವಾಗಿ ಅವರ ಸ್ವಗ್ರಾಮ ದಾರ್ಜಿಲಿಂಗ್‌ಗೆ ಕೊಂಡೊಯ್ಯಲಾಗುತ್ತದೆ.

ಮೃತಪಟ್ಟ ಮತ್ತೋರ್ವ ಸಿಬ್ಬಂದಿ ಪ್ರಕಾಶ್ ಕುಟುಂಬ ಸದಸ್ಯರು ಚಂಡೀಗಢದಲ್ಲಿ ನೆಲೆಸಿದ್ದು, ಅವರು ಇಂದು ಮೈಸೂರಿಗೆ ಆಗಮಿಸುವ ನಿರೀಕ್ಷೆಯಿದೆ.

ಶವಾಗಾರದಲ್ಲಿ ಹಾಜರಿದ್ದ ಮೃತರ ಸಹೋದ್ಯೋಗಿಯೊಬ್ಬರು ಮಾತನಾಡಿ, ಗಾಯಾಳುಗಳ ಚಿಕಿತ್ಸಾ ವೆಚ್ಚ ಹಾಗೂ ಇಬ್ಬರು ಮೃತರ ಪಾರ್ಥಿವ ಶರೀರಗಳನ್ನು ಅವರ ಊರುಗಳಿಗೆ ಸಾಗಿಸುವ ಎಲ್ಲಾ ವೆಚ್ಚವನ್ನು ರೆಸ್ಟೋರೆಂಟ್ ಆಡಳಿತವೇ ಭರಿಸುತ್ತಿದೆ ಎಂದು ತಿಳಿಸಿದರು.

ನಂತರ ಡಾ.ಯತೀಂದ್ರ ಸಿದ್ದರಾಮಯ್ಯ ಎಂ.ಜಿ. ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೆಸ್ಟೋರೆಂಟ್ ವ್ಯವಸ್ಥಾಪಕ ಅವಿನಾಶ್‌ರನ್ನು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು. ಅಲ್ಲದೆ, ಅವರ ಕುಟುಂಬ ಸದಸ್ಯರೊಂದಿಗೆ ಕೂಡ ಮಾತನಾಡಿದರು. ಈ ಸಂದರ್ಭದಲ್ಲಿ ಭಾವುಕರಾದ ಅವಿನಾಶ್ ಅವರ ತಾಯಿ ದ್ರಾಕ್ಷಾಯಿಣಿ, 'ನಮಗೆ ಸರ್ಕಾರದಿಂದ ಯಾವುದೇ ನೆರವು ಬೇಡ. ನನ್ನ ಮಗ ಶೀಘ್ರ ಗುಣಮುಖನಾಗಬೇಕು ಎಂಬುದೇ ನಮ್ಮ ಆಶಯ' ಎಂದು ಸಚಿವರ ಎದುರು ಅಳಲು ತೋಡಿಕೊಂಡರು.

ರೆಸ್ಟೋ ಪಬ್‌ನ ಮಾಲೀಕ ಪ್ರೀತಂ ಪುನೀತ್ ಆರೋಪಿಯಾಗಿರುವುದರಿಂದ ಅವನು ಗಾಯಾಳುವಾದರೂ ಸಚಿವರು ಭೇಟಿಯಾಗಲು ಬಯಸಲಿಲ್ಲ.

Vidyavardhaka Sangha (Regd), Mysore
VIDYAVARDHAKA COLLEGE OF ENGINEERING
Autonomous Institute, Accredited by NBA, & NAAC with "A" Grade
Gokulam 3rd Stage, Mysuru-570 002

STAFF REQUIRED

TEACHING

ENGG. Dept.
- **Professor, Associate Professor in CS&E, AI&ML, E&CE, Civil Engg.:** Ph.D is Compulsory.
- **Assistant Professor in CS&E, AI&ML, E&CE, Civil Engg.:** First Class in BE & M.Tech, Preference will be given to PhDs.
- **Professor of Practice in CS&E, E&CE, Civil, E&EE and MBA.** Eligibility as per AICTE norms.

MCA Dept.
- **Professor, Associate Professor :** Ph.D is Compulsory.

Physics, Chemistry & Mathematics Dept.
- **Professor in Mathematics :** Ph.D is Compulsory.
- **Assistant Professor :** First Class in B.Sc. & M.Sc., with KSET/NET, Preference will be given to PhDs.

NON TEACHING
- **Instructor / Assistant instructor in E&CE Dept.:** BE / Diploma in E&CE and relevant experience.
- **Resident Warden for Boys Hostel :** Any graduation with relevant experience.

Pay scale for teaching – AICTE 7th pay scale as per the college norms
Non teaching – State scale
For further details and to apply visit https://vvce.ac.in/careers

9ನೇ ವರ್ಷದ ಸವಿನೆನಪು



ಡಾ|| ವೀಣಾರವಿ
ಸದಾ ನಿಮ್ಮ ನೆನಪಿನಲ್ಲಿರುವ ಆರ್.ರವಿ ಮತ್ತು ಕುಟುಂಬವರ್ಗದವರು

ಬಾಡಿಗೆಗೆ
40X80
ಉತ್ತರ ದಿಕ್ಕು, ವಿಜಯನಗರ 2ನೇ ಹಂತ, ವಾಟರ್ ಟ್ಯಾಂಕ್ ಸರ್ಕಲ್, ಮುಖ್ಯರಸ್ತೆ
8710014355
9606237089

REQUIRED NURSERY TEACHERS
Qualification:
NTT / Montessori Trained / PTT/D.Ed. / B.Ed.
Contact: 6363471769
Email: info@pragathielite.com
Experienced candidates preferred.

ಸಿಬ್ಬಂದಿ ಬೇಕಾಗಿದ್ದಾರೆ
ಮಹಿಳಾ ಅಭ್ಯರ್ಥಿಗಳು ಮಾತ್ರ
SSLC/PUC ಪಾಸ್ /ಫೇಲ್-100 ಹುದ್ದೆಗಳು,
ITI EM -20 ಹುದ್ದೆಗಳು, 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು
ಆರಂಭಿಕ ವೇತನ Rs.17,750 ಅಂಕಪಟ್ಟಿಗಳು, ಆಧಾರ್‌ನೊಂದಿಗೆ ಸಂದರ್ಶನಕ್ಕೆ ಬನ್ನಿ. ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ
ಎಕ್ಸೆಲ್-ಫಾರ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್,
292/ಬಿ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು
9844157111 / 9900557929

STAR OF MYSORE
FOR ADVERTISEMENT
Please Call: 0821-2496522 / 23
Email: ad@starofmysore.com
ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

CHETHANA ENGLISH SCHOOL
Alanhalli, Bogadi Gaddege Road. Mysuru
WANTED TEACHERS
1 Science Teacher: 1 Post
B.Sc. / B.Sc. B.Ed. / BE
2. Social Science./Language Teacher: 1 Post
BA B.Ed. / BA /BE Graduates can also apply
3 NST Teacher: 1 Post
Fluency in English is MUST.
CONTACT:
99459-11981 / 734-896-7846
Join Us & Shape the Future!

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಹಸಿರು ನಮ್ಮ ಉಸಿರು

SOLARIZE YOUR ROOF TODAY !!!
GO SOLAR WITH RAY ENERGY !!!

With Solar Panel you can:
- Cut your electricity bills
- Reduce your carbon footprint
- Get Paid for the electricity you generate
- Government Subsidy available.

Our Photovoltaic solutions find extensive applications for:
- Individual homes
- Corporate Office & Industries
- Shopping Complexes
- Off-Grid power plants
- Grid-connected power plants ranging from 3 KWP to 1 MWP.

Advantages Of Solar Power
- The power source, The sun is absolutely FREE.
- No pollution during the production of Solar Energy
- The technological advancement in solar energy has made them extremely cost effective.
- Most system do not require any maintenance during the life span, which means you never have to put any money on it.
- The system are quiet compatible with all the environment
- Expected life span is 30 years.

Disadvantages Of Solar Power
- Initial cost of purchasing and installing of solar panels always becomes the first disadvantage.
- Does not work in night as Sun is the main source of energy.

Contact:
Ray Energy Solutions
Bringing Happiness Through Power
+91 73378 48763
Website: www.rayenergysolutions.org / E-mail: info@rayenergysolutions.in

BHIMA Properties
WE ARE HIRING
SALES EXECUTIVES
SALES MANAGERS
Location : Mysore
Experience : 2-5 Years
Attractive Salary + Incentives
For more Details Contact:
96866 00588 / 96069 22963

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಮಾಲೀಕರುಗಳು ತಮ್ಮ ಸ್ವಾಧೀನಾನುಭವದಲ್ಲಿರುವ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಆದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 05(ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಕೊತ್ತಲವಾಡಿ ಗ್ರಾಮಕ್ಕೆ ಸೇರಿದ ಜಮೀನುಗಳು ಹಾಗೂ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಬಿ ಹೋಬಳಿ, ತೆರಕಣಾಂಬಿ ಗ್ರಾಮಕ್ಕೆ ಸೇರಿದ ಜಮೀನುಗಳ ಒಟ್ಟು ವಿಸ್ತೀರ್ಣ 18 ಎಕರೆ 25 ಗುಂಟೆ ಜಮೀನುಗಳ ಮಾಲೀಕರ ಹೆಸರು ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಈ ಕೆಳಕಂಡಂತಿದೆ.

ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ	ವಿಸ್ತೀರ್ಣ ಗು	ಚೆಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಕೊತ್ತಲವಾಡಿ ಗ್ರಾಮಕ್ಕೆ ಸೇರಿದ ಜಮೀನುಗಳ ವಿವರ ಈ ಕೆಳಕಂಡಂತಿದೆ.							
ತಿಮ್ಮಮ್ಮ ಕೋಂ ಲೇಟ್ ಮಾದಶೆಟ್ಟಿ	193/7	01	08	ರಸ್ತೆ	ಸರ್ಕಾರಿ ಜಾಗ	ರಂಗಶೆಟ್ಟಿ ಜಮೀನು	ಮಲೇ ಮಾದಪ್ಪನ ಜಮೀನು
ರಂಗಶೆಟ್ಟಿ ಬಿನ್ ದಾಸಶೆಟ್ಟಿ	193/16	02	21	ರಸ್ತೆ	ದ್ಯಾವಶೆಟ್ಟಿ ಜಮೀನು	ರಾಜಮ್ಮ, ಚೆನ್ನಪ್ಪ ಹಾಗೂ ನಾಗರಾಜಪ್ಪನ ಜಮೀನು	ಸರ್ಕಾರಿ ಹಳ್ಳ/ ಕಾಲುವೆ
ಮಾದಶೆಟ್ಟಿ ಬಿನ್ ದೇವಶೆಟ್ಟಿ	193/24	00	15	ಮರಿದೇವರ ಜಮೀನು	ಶಿವಲಿಂಗಪ್ಪನ ಜಮೀನು	ಬಸವಣ್ಣನ ಜಮೀನು	ಚಿಕ್ಕಮಾದಶೆಟ್ಟಿ ಜಮೀನು
ಕೋದಂಡಪಾಣಿ ಬಿನ್ ಸ್ವಾಮಿನಾದನ್ (ದಿನಾಂಕ 09.05.2024ರ ನೋಂದಾಯಿತ ದಸ್ತಾವೇಜು ಸಂಖ್ಯೆ CRJ-1-00724-2024-25 ಮೂಲಕ ಪಡೆದ ಸ್ವತ್ತಾಗಿರುತ್ತದೆ)	225/1	01	10	Sy. No. 226/2	Sy. No. 225/3 and Sy. No. 225/4	Sy. No. 232/2	Sy. No. 225/3 and Sy. No. 225/2
	225/2	00	15	Sy. No. 226/3	Sy. No. 225/3	Sy. No. 225/1	Sy. No. 224
	226/2	03	32	Sy. No. 228/2 and Sy. No. 229	Sy. No. 225/1	Sy. No. 231/3	Sy. No. 226/1 and Sy. No. 226/3
	228/2	00	07	Sy. No. 228/1	Sy. No. 226/2 and Sy. No. 226/1	Sy. No. 226/2 and Sy. No. 229	Sy. No. 228/1
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಬಿ ಹೋಬಳಿ, ತೆರಕಣಾಂಬಿ ಗ್ರಾಮಕ್ಕೆ ಸೇರಿದ ಜಮೀನುಗಳ ವಿವರ ಈ ಕೆಳಕಂಡಂತಿದೆ.							
ಮೇಟಿ ಬಸವರಾಜು ಬಿನ್ ದೊಡ್ಡಪ್ಪ	261/2	01	02	Sy. No. 260/2	Sy. No. 263/1	Sy. No261/1	Sy. No. 261/3
	261/3	01	02	Sy. No. 260/2	Sy. No. 263/1	Sy. No. 261/2	Sy. No. 262
ಮೇಟಿ ಬಸವರಾಜು ಬಿನ್ ದೊಡ್ಡಪ್ಪ ಟಿ ಪ್ರವೀಣ್ ಕುಮಾರ್ ಬಿನ್ ಮೇಟಿ ಬಸವರಾಜು ನಂದ ಎ. ಆರ್. ಬಿನ್ ರಂಗಪ್ಪ	262/1	03	16.08	Sy. No. 262/2	Sy. No. 263/2	Sy. No. 261/3	Road
ಸುಬ್ಬಪ್ಪ ಬಿನ್ ಚಿಕ್ಕಮಾದಯ್ಯ ಬಸವರಾಜಪ್ಪ ಬಿನ್ ಚಿಕ್ಕಮಾದಯ್ಯ ವೀರಭದ್ರಪ್ಪ	262/2	03	16.08	Sy. No. 262/3	Sy. No. 262/1	Sy. No. 261/3	Road
ಒಟ್ಟು ವಿಸ್ತೀರ್ಣ		18	25				

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರೀ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು
ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ,
ನಗರ ಸಭೆ ಆವರಣ, ಹುಣಸೂರು-571105
Gmail.hunsurplanning@gmail.com ದೂರವಾಣಿ:08222-295122
ಸಂ.ಹು.ಯೋ.ಪ್ರಾ/ಮೂ.ಗ್ರಾ/ಭೂ.ಉ.ಬ/66/2026-27 ದಿನಾಂಕ: 10.06.2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ)

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮದ ಸ.ನಂ:133/3ರಲ್ಲಿ 0ಎ-09.08ಗುಂ ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಹುಣಸೂರು ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕೃಷಿ/ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಶ್ರೀ.ಜವಾಹರಶಿರಗಣ್ಣವರ ಬಿನ್ ಲೇ.ಆನಂದ ಶಿರಗಣ್ಣವರ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.


ಅರ್ಜಿದಾರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯು ಈ ಕೆಳಕಂಡಂತಿರುತ್ತದೆ.
ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮದ ಸ.ನಂ:133/3ರಲ್ಲಿ 0ಎ-09.08ಗುಂ ವಿಸ್ತೀರ್ಣದ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ಹುಣಸೂರು ಪಟ್ಟಣದ ಸರ್ಕಾರದಿಂದ ಅನುಮೋದನೆಯಾದ ಹುಣಸೂರು ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯವಸಾಯ/ಕೃಷಿ ವಲಯದಲ್ಲಿದ್ದು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ಸದರಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಆದ ನಂತರ ವಾಣಿಜ್ಯ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಾಣಿಜ್ಯ ಬಡಾವಣೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಬಡವರಿಗೆ ಅನುಕೂಲವಾಗುವಂತೆ ಅಂಗಡಿಮುಂಗಟ್ಟುಗಳನ್ನು ನಿರ್ಮಿಸಿ ಕೆಲಸ-ಕಾರ್ಯಗಳನ್ನು ನೀಡುವ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ಹೊಂದಿರುತ್ತೇವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ ಪ್ರಕಾರ ವ್ಯವಸಾಯ/ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- (ಶ್ರೀ.ಹೆಚ್.ಪಿ.ಅಮರ್‌ನಾಥ್)
ಅಧ್ಯಕ್ಷರು
ಹುಣಸೂರು ಯೋಜನಾ ಪ್ರಾಧಿಕಾರ,
ಹುಣಸೂರು

ಸಹಿ/- (ಶ್ರೀಮತಿ.ಹೆಚ್.ಕೆ.ರೇಣುಕ)
ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು ಯೋಜನಾ ಪ್ರಾಧಿಕಾರ
ಹುಣಸೂರು

DIPR/DDMYS/312/KSMCA/221/2026-27

COMMERCIAL PROPERTIES FOR SALE IN PRIME LOCATION
1) **43x100** East Facing (for Go Down - Rent / Sale) Pampapathi Road, Kuvempunagar 2nd stage
2) Ramakrishna Nagar, 'H' Block, East Facing **40x60**
Dattagalli
3) **44x42** East Facing
40x60 South Facing
4) NIE College Road **43x100** North Facing
5) MMG Temple Bell , Srirampura **40x55** - East Facing Site
6) **40x60** New House For Sale in Police Layout
Call - **9008111454**



YASHWANTH ENCLAVE
A Premium Residential Layout Off Mys-N'gud Highway
30x40 & 30x50 Dimension sites — 4499/- Per Sqft
Commercial Sites Are Also Available — Commercial Sites 9999/- Per Sqft
Call (+91) 9900118089, (+91)9880547085 (+91) 9845005718, (+91) 6364363200



ಶ್ರೀ ಅಪ್ಪುಗೌಡರು (ಕುರುಬಾರಹಳ್ಳಿ)
ಯಜಮಾನರು ಕುರುಬಾರಹಳ್ಳಿ, ಬಿ.ಎಂ.ಕೆ. ಟ್ರಸ್ಟ್ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡರು
ನಿಧನ : 07-06-2026

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಶ್ರೀಮತಿ ಜಯಮ್ಮ
ನಂ. 58, 5ನೇ ಕ್ರಾಸ್, ಕುರುಬಾರಹಳ್ಳಿ, ಮೈಸೂರು-11
ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ 07.06.2026ನೇ ಭಾನುವಾರ ಮೇಲ್ಕಂಡ ನನ್ನ ಪೂಜ್ಯ ಪತಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾಗಿ **ದಿನಾಂಕ 17-06-2026ನೇ ಬುಧವಾರ ಸಂಜೆ 7.00 ಗಂಟೆಗೆ** ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು:
ಶ್ರೀಮತಿ ಜಯಮ್ಮ ಮತ್ತು ಮಕ್ಕಳು ಕುಟುಂಬವರ್ಗದವರು,
ಬಂಧು-ಮಿತ್ರರು ಹಾಗೂ ಕುರುಬಾರಹಳ್ಳಿ ಗ್ರಾಮಸ್ಥರು

ಭೋಜನ : ರಾತ್ರಿ 7.30 ರಿಂದ

ಆಹ್ವಾನ ಪತ್ರಿಕೆ ತಲುಪದೆ ಇರುವವರು ಇದನ್ನೆ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ವಿನಂತಿ

78ನೇ ವಾರ್ಷಿಕೋತ್ಸವದ ಶುಭ ಸಮಾರಂಭದಲ್ಲಿ ಪ್ರೇಕ್ಷಕರಿಗೆ, ಪೋಷಕರು, ನಿರ್ಮಾಪಕರಿಗೆ, ನಟರು, ನಟಿಯರಿಗೆ, ವಿತರಕರಿಗೆ, ಸರ್ಕಾರಿ ಇಲಾಖೆಯವರಿಗೆ, ಸ್ನೇಹಿತರು ಹಾಗೂ ಹಿತೈಷಿಗಳಿಗೆ ಹೃದಯ ಪೂರ್ವಕ ಧನ್ಯವಾದಗಳು

ಗಾಯತ್ರಿ ಟಾಕೀಸ್
78th Anniversary
Gayathri Talkies

